
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 52 ಡಿಸೆಂಬರ್ 25, 2005 ಬೆಲೆ ರೂ. 3.00



ಕರ್ನಾಟಕವನ್ನು ಕವಿದಿರುವ ನಿರುದ್ಯೋಗದ ಕತ್ತಲು



ಲಂಚಕೋರ ಸಂಸದರು ಬಿಜೆಪಿ ನಂ 1



ಷರತ್ತುಗಳಿಗೆ ಪ್ರತಿರೋಧ ಹಾಂಗ್‌ಕಾಂಗ್ ರಣರಂಗ

ದತ್ತಜಯಂತಿ : ಜನರಿಂದ ತಿರಸ್ಕರಿಸಲ್ಪಟ್ಟ ಸಂಘ ಪರಿವಾರ

ಕಾಲ್‌ಸೆಂಟರ್ ಉದ್ಯೋಗಿ ಹತ್ಯೆ

- 'ಜಲಗಾರ' ನಾಟಕದ ಯಶಸ್ವಿ ಪ್ರಯೋಗ
- ಜನರಿಂದ ದೂರವಾಗುತ್ತಿರುವ 'ಬೆಂಗಳೂರು ಹಬ್ಬ'
- ಯುದ್ಧ ವಿರೋಧಿ 'ಪಿಂಟರ್'ಗೆ ಸಾಹಿತ್ಯ ನೊಬೆಲ್




ಭಗತ್ ಸಿಂಗ್ ತಂಡದ ಕ್ರಾಂತಿ ಕಿಡಿ

ಕಾಮ್ರೇಡ್ ಶಿವವರ್ಮ

ಕ್ರಾಂತಿಕಾರಿ ಹೋರಾಟಗಳ ಪ್ರಕ್ರಿಯೆಯಲ್ಲಿ ಸಮಾಜವಾದದತ್ತ ಆಕರ್ಷಿತರಾಗಿ ಶಹೀದ್ ಭಗತ್‌ಸಿಂಗ್‌ರ ಜೊತೆಗೂಡಿ 'ಹಿಂದೂಸ್ಥಾನ್ ರಿಪಬ್ಲಿಕನ್ ಆರ್ಮಿ'ಯನ್ನು 'ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಆರ್ಮಿ'ಯನ್ನಾಗಿ ಪರಿವರ್ತಿಸುವಲ್ಲಿ ಮಹತ್ವದ ಪಾತ್ರವಹಿಸಿದ ಕಾಂ.ಶಿವವರ್ಮ ಆ ಸಂಘಟನೆಯ ಬೆನ್ನೆಲುಬಿನಂತೆ ಕೆಲಸ ಮಾಡಿದ ಪ್ರಮುಖರಲ್ಲಿ ಒಬ್ಬರು. ಇದೇ ಕ್ರಾಂತಿಕಾರಿ ಪರಂಪರೆಯಲ್ಲಿ ಕಮ್ಯೂನಿಸ್ಟ್ ಪಕ್ಷ ಸೇರಿದ ಶಿವವರ್ಮಾ ಪಕ್ಷ ವಿಭಜನೆಯ ನಂತರ ಕೊನೆಯುಸಿರಿನವರೆಗೆ ಸಿಪಿಐ(ಎಂ) ಪಕ್ಷದ ಮುಖಂಡರಾಗಿ ದುಡಿದರು.

ಇಂದು ದೇಶ ಪ್ರೇಮವನ್ನು ಸಂಪೂರ್ಣವಾಗಿ ತಾವೇ ಗುತ್ತಿಗೆ ತೆಗೆದುಕೊಂಡಂತೆ ಮಾತನಾಡುವ ಸಂಘ ಪರಿವಾರ ಅಂದು ತಮ್ಮ 'ಹಿಂದೂ ರಾಷ್ಟ್ರ'ದ ಗುರಿಗೆ ಬೆಂಬಲ ನೀಡುತ್ತಾ - ಅದೇ ಸಮಯದಲ್ಲಿ ತಮ್ಮ ಕುರ್ಚಿಯ ಹಿತಾಸಕ್ತಿಗಳಿಗಾಗಿ ಬ್ರಿಟೀಷರ ಏಜೆಂಟರಂತೆ ವರ್ತಿಸುತ್ತಿದ್ದ ಪಾಳೇಗಾರಿ ಪ್ರಭುಗಳಾದ ರಾಜ-ಮಹಾರಾಜರ ಆಸ್ಥಾನಗಳನ್ನು ಆಶ್ರಯಿಸಿತ್ತು. ಹಿಂದೂ-ಮುಸ್ಲಿಂ ಎಂದು ಒಡೆದು ಆಳುವ ಬ್ರಿಟೀಷರ ನೀತಿಯು ಸಂಘ ಪರಿವಾರದ ಗುರಿಗೂ ಪೂರಕ ಆಗಿದ್ದರಿಂದ ಸಂಘ ಪರಿವಾರಕ್ಕೆ ಬ್ರಿಟೀಷರೊಂದಿಗೆ ಯಾವ ವೈರುಧ್ಯವೂ ಇರಲಿಲ್ಲ. ಹೀಗಾಗಿ ಸುಲಿಗೆಕೋರ ಬ್ರಿಟೀಷರೊಂದಿಗೆ ಶಾಮಿಲಾಗಿದ್ದ ಸಂಘ ಪರಿವಾರ ದೇಶದ ಸ್ವಾತಂತ್ರ್ಯ ಚಳುವಳಿಗೆ ಬೆನ್ನು ತಿರುಗಿಸಿ ನಿಂತಿತ್ತು. ಆರೆಸ್ಸೆಸ್, ಬಿಜೆಪಿಯ ಹಿಂದಿನ ಅವತಾರ ಜನಸಂಘ ಇತ್ಯಾದಿ ಸಂಘ ಪರಿವಾರದಲ್ಲಿ ದುರ್ಬೀನು ಹಾಕಿ ಹುಡುಕಿದರೂ ಕಾಂ.ಶಿವವರ್ಮರಂತಹ ಒಬ್ಬ ಕ್ರಾಂತಿಕಾರಿ ಸಿಗುವುದು ಸಾಧ್ಯವಿಲ್ಲ. ಕಮ್ಯೂನಿಸ್ಟ್ ಚಳುವಳಿ ಮತ್ತು ಇಡೀ ದೇಶದ ಹೆಮ್ಮೆ ಕಾಂ.ಶಿವವರ್ಮ



ಕಳೆದ ವಾರದಿಂದ

ಅಖಿಲ ಭಾರತೀಯ ಸಂಘಟನೆಯನ್ನು ಸ್ಥಾಪಿಸುವ ಉದ್ದೇಶದಿಂದ 1928ರ ಸೆಪ್ಟೆಂಬರ್‌ನಲ್ಲಿ ಅವರು ದೆಹಲಿಯಲ್ಲಿ ಭೇಟಿಯಾದರು. ಉತ್ತರಪ್ರದೇಶ, ಬಿಹಾರ, ಪಂಜಾಬ್ ಮತ್ತು ರಾಜಸ್ಥಾನದ ಹತ್ತು ಪ್ರತಿನಿಧಿಗಳು ಸಭೆಯಲ್ಲಿ ಹಾಜರಾಗಿದ್ದರು. ಬಂಗಾಳದ ಬಹುತೇಕ ಕ್ರಾಂತಿಕಾರಿಗಳು ಆ ವೇಳೆಯಲ್ಲಿ ಜೈಲಿನಲ್ಲಿದ್ದರು ಮತ್ತು ಹೊರಗಿದ್ದ ಕೆಲವರು ಭಗತ್‌ಸಿಂಗ್ ಗುಂಪಿನ ಸಮಾಜವಾದಿ ಗುರಿ ಮತ್ತು ಸಂಘಟನಾ ತತ್ವಗಳನ್ನು ಒಪ್ಪದಿದ್ದರಿಂದ ಸಭೆಗೆ ಹಾಜರಾಗಲಿಲ್ಲ. ದೆಹಲಿ ಸಭೆಯ ಅಧ್ಯಕ್ಷಸ್ಥಾನವನ್ನು ಭಗತ್‌ಸಿಂಗ್ ವಹಿಸಿಕೊಂಡು ಸಂಘಟನೆಗೆ ಪುನರ್‌ನಾಮಕರಣ ಮಾಡುವ ನಿರ್ಣಯ ಕೈಗೊಳ್ಳಲಾಯಿತು. ಅದರಂತೆ 'ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಆರ್ಮಿ' ಎಂದು ಹೆಸರಿಡಲಾಯಿತು. ಈ ಬದಲಾವಣೆಯ ಬಗ್ಗೆ "ನಾವು ಮಾರ್ಕ್ಸ್‌ವಾದ ಅಥವಾ ಸಮಾಜವಾದದ ವೈಜ್ಞಾನಿಕ ತತ್ವಗಳನ್ನು ಅರ್ಥೈಸಿಕೊಂಡಿದ್ದೇವೆಂಬುದು ಇದರರ್ಥವಲ್ಲ. ಅದು ಸಮಾಜವಾದದೆಡೆಗೆ ನಮ್ಮ ಪ್ರಥಮ ಹೆಜ್ಜೆಯಾಗಿತ್ತು. ಸಮಾಜದ ವರ್ಗನೆಲೆಯನ್ನು ನಾವು ಗ್ರಹಿಸಿದ್ದೆವು ಮತ್ತು ಕಾರ್ಮಿಕ ರೈತರ ರಾಷ್ಟ್ರ ಸ್ಥಾಪಿಸುವುದು ನಮ್ಮ ಗುರಿಯಾಗಿತ್ತು. ಆದರೆ ಇದನ್ನು ಸಾಧಿಸುವುದು ಹೇಗೆಂಬುದು ನಮಗಿನ್ನೂ ಅಸ್ಪಷ್ಟವಾಗಿತ್ತು" ಎಂದು ಶಿವವರ್ಮ ಹೇಳುತ್ತಾರೆ.

ಸಂಘಟನೆಯನ್ನು ಪ್ರಜಾಸತ್ತೆಗೊಳಿಸುವುದು ಸಭೆಯ ಎರಡನೇ ಬಹುಮುಖ್ಯ ನಿರ್ಣಯವಾಗಿದೆ. ಇಲ್ಲಿಯುವರೆಗೂ, ಬಹುತೇಕ ಕ್ರಾಂತಿಕಾರಿ ಗುಂಪುಗಳು ಎಲ್ಲ ನಿರ್ಣಯಗಳನ್ನು ತಾನೊಬ್ಬನೇ ಕೈಗೊಳ್ಳುತ್ತಿದ್ದ, ಶಕ್ತಿಯುತ ಮತ್ತು ಆಕರ್ಷಕ ನಾಯಕನಿಂದ ಮುನ್ನಡೆಯುತ್ತಿದ್ದವು. ಆದರೆ ಹೆಚ್‌ಎಸ್‌ಆರ್‌ಎ ಬೇರೆಯದೆ ತೆರನಾಗಿತ್ತು. ಅದು ಸಾಮೂಹಿಕ ನಿರ್ಣಯದಲ್ಲಿ ನಂಬಿಕೆ ಇಟ್ಟಿತ್ತು. ಭಗತ್‌ಸಿಂಗ್‌ರ ಸಲಹೆ ಮೇರೆಗೆ ಸರ್ವೋಚ್ಚ ತೀರ್ಮಾನ ಮಾಡುವ ಅಧಿಕಾರಕ್ಕಾಗಿ ಕೇಂದ್ರಸಮಿತಿಯನ್ನು ರಚಿಸಲಾಯಿತು. ಕೇಂದ್ರಸಮಿತಿಯಲ್ಲಿ ಸುಖ್‌ದೇವ್ (ಪಂಜಾಬ್), ಫಣೀಂದ್ರ ಘೋಷ್ (ಬಿಹಾರ), ಶಿವವರ್ಮ (ಉತ್ತರಪ್ರದೇಶ) ಮತ್ತು ಕುಂದನಹಾಲ್ (ರಾಜಸ್ತಾನ) ಇದ್ದರು. ಭಗತ್‌ಸಿಂಗ್ ಮತ್ತು ವಿಜಯಕುಮಾರ್ ಸಿನ್ಹರವರು ಪ್ರಕ್ಷೋಭೆ ಮತ್ತು ಅಂತರರಾಜ್ಯ ಸಂಯೋಜನೆಯ ಉಸ್ತುವಾರಿಯಾಗಿದ್ದರು. ದೆಹಲಿ ಸಭೆಯಲ್ಲಿ ಅನುಪಸ್ಥಿತರಾಗಿದ್ದ ಚಂದ್ರಶೇಖರ್ ಆಜಾದ್‌ರವರು ಕೇಂದ್ರ ಸಮಿತಿಯ ಏಳನೇ ಸದಸ್ಯರು. ಕಾನ್ಪುರ ಗುಂಪಿನ ಇತರೆ ಸದಸ್ಯರಾದ ಜಯದೇವ್, ಸುರೇಂದ್ರನಾಥ್ ಪಾಂಡೆ ಮತ್ತು ಬ್ರಹ್ಮದತ್ ಮಿಶ್ರರವರು ಸಹ ಸಭೆಯಲ್ಲಿ ಹಾಜರಿದ್ದರು.

ಹೆಚ್‌ಎಸ್‌ಆರ್‌ಎಯು ಇನ್ನೊಂದು ಪ್ರಮುಖ ನಿರ್ಣಯ ಕೈಗೊಂಡಿತು. ವ್ಯಕ್ತಿ ಹತ್ಯೆಗಳ ಸಿದ್ಧಾಂತಕ್ಕೆ ಜೋತುಬಿದ್ದರೂ ತನ್ನ ಧ್ಯೇಯೋದ್ದೇಶಗಳನ್ನು ವಿಸ್ತರಿಸಲು ಅದು ನಿರ್ಣಯಿಸಿತು. ಭಗತ್‌ಸಿಂಗ್‌ರಿಗಿಂತ ಮುಂಚಿನ ಕ್ರಾಂತಿಕಾರಿಗಳನ್ನು ಸಾರ್ವಜನಿಕರು ಸಾಮಾನ್ಯವಾಗಿ 'ಸಾಹಸಿಗರು, ಬಲಿದಾನ ನೀಡುವ ಅಪ್ರತಿಮರಾಗಿದ್ದರು' ಎಂದು ಮೆಚ್ಚುತ್ತಿದ್ದರು. ಅವರು ಆದರೆ ಕ್ರಾಂತಿಕಾರಿಗಳ ಚಟುವಟಿಕೆಗಳೊಂದಿಗೆ ಸಾರ್ವಜನಿಕ ಸಂಬಂಧ ಏರ್ಪಡಿಸುವುದು ಆಗಿರಲಿಲ್ಲ. ಇದರಿಂದ ಭಗತ್‌ಸಿಂಗ್‌ರವರು "ಇಲ್ಲಿಂದಾಚೆಗೆ ಸಾರ್ವಜನಿಕರೊಂದಿಗೆ ನೇರ ಸಂಬಂಧ ಹೊಂದಿರುವಂತಹ ಕ್ರಮಗಳನ್ನು ಮಾತ್ರ ನಾವು ಕೈಗೊಳ್ಳಬೇಕು ಎಂಬ ಮತ್ತೊಂದು ನೀತಿಯನ್ನು ಸಲಹೆ ಮಾಡಿದರು." ಎಂದು ಶಿವವರ್ಮ ದಾಖಲಿಸಿದ್ದಾರೆ.

ಸಾಂಡರ್ಸ್ ಕೊಲೆ ಮತ್ತು ಅಸೆಂಬ್ಲಿ ಬಾಂಬ್ ಪ್ರಕರಣವೆರಡೂ ಈ ವರ್ಗಕ್ಕೆ ಸೇರಿವೆ. 1928ರಲ್ಲಿ ಸೈಮನ್ ಆಯೋಗದ ವಿರುದ್ಧ ರಾಷ್ಟ್ರದಾದ್ಯಂತ ಜನತೆಯ ವಿರೋಧ ವ್ಯಕ್ತಗೊಂಡಿತ್ತು. ಆಯೋಗವು ಲಾಹೋರ್ ತಲುಪುವಷ್ಟರಲ್ಲೇ ಬ್ಯಾಂಕ್ ಲೂಟಿ ಮಾಡುವ ಉದ್ದೇಶದಿಂದ ಕೆಲವು ಹೆಚ್‌ಎಸ್‌ಆರ್‌ಎ ಸದಸ್ಯರು ಆಗಾಗಲೇ ಅಲ್ಲಿಗೆ ಜಮಾಯಿಸಿದ್ದರು. ಅದೇ ವೇಳೆಗೆ "ಸೈಮನ್ ವಾಪಸ್ ತೊಲಗು" ಎಂದು ಆಗ್ರಹಿಸುತ್ತಾ ಲಾಲ ಲಜಪತ್ ರಾಯರ ಮುಂದಾಳ್ತನದಲ್ಲಿ ಮೆರವಣಿಗೆ ಹೊರಟಿದ್ದವರ ಮೇಲೆ ಲಾಠಿ ಛಾರ್ಜ್ ಮಾಡಲಾಯಿತು. ಉಪ ಪೊಲೀಸ್ ಅಧೀಕ್ಷಕರಾಗಿದ್ದ ಸಾಂಡರ್ಸ್ ಲಜಪತ್‌ರಾಯ್‌ರವರಿಗೆ ತೀವ್ರವಾಗಿ ಥಳಿಸಿದ್ದರಿಂದ 1928ರ ನವೆಂಬರ್ 19ರಂದು ಅವರು ಗಾಯದಿಂದಾಗಿ ಮರಣ ಹೊಂದಿದರು. ಇದಾದ ಸರಿಯಾಗಿ ಒಂದು ತಿಂಗಳಿಗೆ ಭಗತ್‌ಸಿಂಗ್ ಮತ್ತು ರಾಜಗುರುರವರು ಸಾಂಡರ್ಸ್‌ನನ್ನು ಕೊಂದು ಲಜಪತ್‌ರಾಯ್‌ರ ಸಾವಿಗೆ ಸೇಡು ತೀರಿಸಿಕೊಂಡರು. ಹತ್ಯೆಯ ನಂತರ ಅವರು ಲಾಹೋರ್‌ಗೆ ತಪ್ಪಿಸಿಕೊಂಡು ಪಲಾಯನಗೈದರು.

ಲಾಲ ಲಜಪತರಾಯರೇನೂ ಕ್ರಾಂತಿಕಾರಿಗಳ ಸ್ನೇಹಿತರಾಗಿರಲಿಲ್ಲ. ಕ್ರಾಂತಿಕಾರಿಗಳು ಅವರ ಸಿದ್ಧಾಂತವನ್ನು ಒಪ್ಪುತ್ತಿರಲಿಲ್ಲ, "ಆದರೆ ಭಾರತದ ಹೊರಗೆ, ರಾಷ್ಟ್ರೀಯ ಚಳುವಳಿಯ ನಾಯಕರುಗಳಲ್ಲೊಬ್ಬರೆಂದು ಲಾಲ ಲಜಪತರಾಯರು ಪ್ರಸಿದ್ಧರಾಗಿದ್ದರು. ಆದ್ದರಿಂದ ಅವರ ಮೇಲಿನ ದಾಳಿಯು ನಮ್ಮ ಭಾರತದ ರಾಷ್ಟ್ರೀಯತೆಯ ಮೇಲಾದ ಧಾಳಿಯೆಂದು ನಾವು ಪರಿಗಣಿಸಿ ಸವಾಲೆಸೆದೆವು. ಅದಕ್ಕೆ ಪ್ರತ್ಯುತ್ತರ ನೀಡಲು ನಾವು ನಿರ್ಣಯಿಸಿದೆವು" ಎಂದು ಶಿವವರ್ಮ ಹೇಳಿದ್ದಾರೆ. ಭಗತ್‌ಸಿಂಗ್ ಮತ್ತು ಸಂಗಾತಿಗಳ ಸೈದ್ಧಾಂತಿಕ ದೃಷ್ಟಿಕೋನದ ವಿಶಾಲತೆಗೆ ಇದೊಂದು ಉದಾಹರಣೆಯಷ್ಟೆ. ಮುಂದೊಂದು ದಿನ, ಭಗತ್‌ಸಿಂಗ್ ನೇಣುಗಂಬವೇರುವುದನ್ನು ತಡೆಯಲು ಬ್ರಿಟೀಷರ ಮೇಲೆ ಮಹಾತ್ಮಗಾಂಧಿಯವರು ಒತ್ತಡ ಹಾಕಬೇಕೆಂದು ಎಲ್ಲೆಡೆ ಕೂಗು ಕೇಳಿಬಂದಾಗ ಅವರ ಪ್ರತಿಕ್ರಿಯೆ ಏನು? "ಅಹಿಂಸಾವಾದ ಪಾಲನೆಗೆ ಮಾತ್ರ ನನ್ನ ಬೆಂಬಲ" ಎಂಬುದು ಗಾಂಧಿಯವರ ಉತ್ತರವಾಗಿತ್ತು.

ಸಾಮೂಹಿಕ ಚಳುವಳಿಯೊಂದಿಗೆ ಭಯೋತ್ಪಾದಕ ಕೃತ್ಯಗಳನ್ನು ಮೇಳೈಸುವ ಉದ್ದೇಶದೊಂದಿಗೆ ಅಸೆಂಬ್ಲಿ ದಾಳಿಯನ್ನು ಅತ್ಯುತ್ತಮವಾಗಿ ಯೋಜಿಸಲಾಯಿತು. ಕೇಂದ್ರೀಯ ಅಸೆಂಬ್ಲಿಯೆಂದೇ ಹೆಸರಾಗಿದ್ದ ದೆಹಲಿ ಪಾರ್ಲಿಮೆಂಟ್ ಬೆಳೆಯುತ್ತಿರುವ ಕಾರ್ಮಿಕ ಚಳುವಳಿಯನ್ನು ಹತ್ತಿಕ್ಕುವ ಸಲುವಾಗಿ ಮತ್ತು ಸಾರ್ವಜನಿಕ ಸುರಕ್ಷತಾ ಮಸೂದೆ ದಮನಕಾರಿಯಾದ 'ಕಾರ್ಮಿಕ ವಿವಾದ ಕಾಯ್ದೆ'ಯನ್ನು ಅಂಗೀಕರಿಸುವ ಸಂದರ್ಭವಾಗಿತ್ತದು. ಈ ಮಸೂದೆಗಳನ್ನು ಪಾರ್ಲಿಮೆಂಟ್‌ನಲ್ಲಿ ಅಂಗೀಕರಿಸದೆ ಹೋದಲ್ಲಿ ಸುಗ್ರೀವಾಜ್ಞೆ ಹೊರಡಿಸುವುದಾಗಿ ವೈಸರಾಯ್ ಘೋಷಿಸಿದ್ದರು.

"ಭಗತ್‌ಸಿಂಗ್‌ರ ಸಲಹೆಯಂತೆ ನಾವು ಅಂತಿಮವಾಗಿ ನಿರ್ಣಯಿಸಿದುದೇನೆಂದರೆ ಈವೆರಡು ಮಸೂದೆಗಳನ್ನು ಜಾರಿ ತರುವುದಿದ್ದಲ್ಲಿ, ಅವನ್ನು ಪಾರ್ಲಿಮೆಂಟಿನ ಮತದಾನದ ಮೂಲಕ ಮಾತ್ರ ತರಲಾಗದಂತೆ ನೋಡಿಕೊಳ್ಳೋಣ. ಮತದಾನ ಶುರುವಾದ ತಕ್ಷಣವೇ ಅಸೆಂಬ್ಲಿಯ ಮೇಲೆ ಬಾಂಬೆಸೆಯೋಣವೆಂದು ನಾವು ತೀರ್ಮಾನಿಸಿದೆವು. ಆಗ ಉದ್ಭವಿಸಿದ ಪ್ರಶ್ನೆಯೆಂದರೆ ಅದನ್ನು ಯಾರು ಮಾಡಬೇಕೆಂಬುದು, ಭಗತ್‌ಸಿಂಗ್ ಏನಾದರೂ ಪಾಲ್ಗೊಂಡು ಬಂಧನಕ್ಕೊಳಗಾದರೆ, ಸಾಂಡರ್ಸ್ ಪ್ರಕರಣದಲ್ಲಿ ಪೊಲೀಸರು ಆಗಾಗಲೇ ಅವರನ್ನು ಹುಡುಕುತ್ತಿದ್ದದ್ದರಿಂದ ಮರಣದಂಡನೆ ಖಚಿತವಾದದ್ದೇ ಆಗಿತ್ತು. ಹೀಗಾಗಿ ಹಲವು ಪ್ರಸ್ತಾವನೆಗಳನ್ನು ಮಾಡಲಾಯಿತು. ವಿಜಯಕುಮಾರ್ ಸಿನ್ಹ ಮತ್ತು ಬಿ.ಕೆ.ದತ್ತ, ಜಯದೇವ ಕಪೂರ್ ಮತ್ತು ಶಿವವರ್ಮ, ಜಯದೇವ್ ಕುಮಾರ್ ಮತ್ತು ವಿಜಯಕುಮಾರಸಿನ್ಹ ಹೀಗೆ ಪಟ್ಟಿ ಮುಂದುವರಿಯುತ್ತಿತ್ತು.

ಶರಣಾಗತಿಯಾದ ನಂತರ, ವಿಚಾರಣೆ ಸಂದರ್ಭದಲ್ಲಿ ತಮ್ಮ ಧ್ಯೇಯೋದ್ದೇಶಗಳನ್ನು ಪ್ರಚಾರಪಡಿಸುವಲ್ಲಿ ತನಗೆ ಉತ್ತಮವಾಗುವುದರಿಂದ ತಾನೇ ಹೋಗುವುದಾಗಿ ಭಗತ್‌ಸಿಂಗ್ ಒತ್ತಾಯಿಸಿದರು. ಆ ಸೂಚನೆಯನ್ನು ಪ್ರಾರಂಭದಲ್ಲಿ ತಿರಸ್ಕರಿಸಲಾಯಿತಾದರೂ ಮಾರನೆಯ ದಿನ ಲಾಹೋರ್‌ನಿಂದ ಬಂದ ಸುಖ್‌ದೇವ್‌ರು ಭಗತ್‌ಸಿಂಗ್‌ರನ್ನು ಬೆಂಬಲಿಸಿದರು. ಶಿವವರ್ಮ ಹೇಳುವಂತೆ 'ಸುಖ್‌ದೇವ್ ಹೇಳಿದರು', ಉದ್ದೇಶ ಈಡೇರುವಲ್ಲಿ ವಿಫಲವಾದರೆ ಇಬ್ಬರು ವ್ಯಕ್ತಿಗಳನ್ನು ಬಲಿದಾನ ಮಾಡುವುದರ ಫಲವೇನು? ಇಬ್ಬರು ಹೋಗಿ ಬಾಂಬೆಸೆಯುತ್ತಾರೆ. ಒಂದೋ, ಇತರೆ ಜನರೊಂದಿಗೆ ಅವರು ತಪ್ಪಿಸಿಕೊಂಡರೆ ಬಾಂಬುಗಳನ್ನು ಏಕೆ ಎಸೆದಿರುವುದೆಂದು ಸಾರ್ವಜನಿಕರಿಗೆ ತಿಳಿಯುವುದೇ ಇಲ್ಲ, ಅಥವಾ ಅವರು ಶರಣಾದರೆ, ಬಾಂಬನ್ನು ಏಕೆ ಎಸೆದಿದ್ದೆಂದು ನ್ಯಾಯಾಲಯದ ಮುಂದೆ ವಿವರಿಸಲಾರರು. ಆದ್ದರಿಂದ ಈ ಕೆಲಸ ಭಗತ್‌ಸಿಂಗ್‌ರಿಂದ ಮಾತ್ರ ಸಾಧ್ಯ.

ಕೇಂದ್ರಸಮಿತಿಯು ಅಂತಿಮವಾಗಿ ಒಪ್ಪಲೇಬಾಕಾಯಿತು. ಭಗತ್‌ಸಿಂಗ್ ಬಾಂಬೆಸೆದು ಯೋಜಿಸಿದಂತೆ ಶರಣಾಗತರಾದರು. ನ್ಯಾಯಾಲಯದಲ್ಲಿ ಅವರ ಸಿದ್ಧಾಂತ ಮತ್ತು ಕ್ರಾಂತಿಯೆಂದರೆ ಅವರು ಅರ್ಥೈಸಿದ್ದೇನು ಎಂಬುದನ್ನು ವಿವರಿಸುತ್ತಾ ಅವರ ಪ್ರಸಿದ್ಧ ಹೇಳಿಕೆಯನ್ನು ನೀಡಿದರು. ಶಿವವರ್ಮರನ್ನು ಅಂತಿಮವಾಗಿ ಸಹರನಪುರದಲ್ಲಿ 1929ರ ಮೇನಲ್ಲಿ ಬಂಧಿಸಲಾಯಿತು. ಅವರನ್ನು ಭಗತ್‌ಸಿಂಗ್ ಮತ್ತು ಇತರರೊಂದಿಗೆ ದ್ವಿತೀಯ ಲಾಹೋರ್ ಪಿತೂರಿ ಪ್ರಕರಣವೆಂದು ಕರೆಯಲಾದ ವಿಚಾರಣೆಗೆ ಒಳಪಡಿಸಲಾಯಿತು. 1929ರ ಜುಲೈ 10ರಲ್ಲಿ ಆರಂಭವಾದ ವಿಚಾರಣೆ ಸಮಯದಲ್ಲಿ ಪ್ರಕರಣವನ್ನು ಎದುರಿಸುವುದು ಹೇಗೆಂದು ಈ ಗುಂಪು ವಿವರವಾದ ಕಾರ್ಯಯೋಜನೆ ಮಾಡಿತು. ಭಗತ್‌ಸಿಂಗ್‌ರ ಸಲಹೆಯ ಮೇರೆಗೆ ಆರೋಪಕ್ಕೊಳಗಾಗಿದ್ದವರು ಮೂರು ಗುಂಪುಗಳಾಗಿ ವಿಭಜನೆಯಾದರು.

(ಮುಂದುವರಿಯುವುದು)



ಕಾಂ. ಮುಲ್ಲಾ ಕುಟುಂಬ ಸಹಾಯಾರ್ಥ ನಿಧಿ ಸಂಗ್ರಹ

ಹಿಂದಿನ ಸಂಚಿಕೆಯವರೆಗೆ ಒಟ್ಟು	14,802.00
■ ಕಾಂ. ಸಿ.ಆರ್.ಭಟ್ ಕುಟುಂಬ	500.00
■ ಹಾಸಿಂ -ಡಿವೈಎಫ್‌ಐ ಬೆಂ.	100.00
ಒಟ್ಟು	15,402.00

Printed & Published by Communist Party of India(Marxist)

ದತ್ತಜಯಂತಿ : ಜನರಿಂದ ತಿರಸ್ಕಾರಕ್ಕೊಳಗಾದ ಸಂಘ ಪರಿವಾರ

ಈ ಸಲದ ದತ್ತಜಯಂತಿ ಆಚರಣೆ ಮುಗಿದಿದೆ. ಹುಣ್ಣಿಮೆಯ ದಿನದಂದು ದತ್ತಜಯಂತಿ ಆಚರಣೆ ಹೆಸರಿನಲ್ಲಿ ಚಿಕ್ಕಮಗಳೂರು ಹಾಗೂ ಸುತ್ತಲಿನ ಜಿಲ್ಲೆಗಳಲ್ಲಿ ಅತ್ಯಂತ ಕ್ಷೋಭೆಮಯ ಸನ್ನಿವೇಶ ಹುಟ್ಟುಹಾಕಿ, ಕೋಮುದ್ವೇಷದ ವಿಷ ಪ್ರವಾಹ ಹರಿಸಿ ಜನವಿಭಜಕ ಉನ್ಮಾದ ಎಬ್ಬಿಸುವುದು ಆರ್.ಎಸ್.ಎಸ್. ಪರಿವಾರದ ಇತ್ತೀಚಿನ ವರಸೆಗಳು. ಇದಕ್ಕಾಗಿಯೇ ಇಲ್ಲದ ಆಚರಣೆಗಳ ಮೂಲಕ ಧಾರ್ಮಿಕತೆಯ ಸೋಗಿನ ಹಿಂದೆ ಬಾಬಾಬುಡನ್ ಗಿರಿಯನ್ನು ಇನ್ನೊಂದು ಅಯೋಧ್ಯೆ ಮಾಡುವ ವಿಧ್ವಂಸಕ ಅಜೆಂಡಾವನ್ನು ಜಾರಿಗೊಳಿಸುವ ಹವಣಿಕೆ ಹಲವು.

ಹತಾಶೆ, ವಿಕೃತ ಧಾಳಿ, ವಿಫಲ ಯತ್ನಗಳು

ಕಳೆದ ಕೆಲವು ವರುಷಗಳಲ್ಲಿ ಬಾಬಾಬುಡನ್‌ಗಿರಿ ಹಾಗೂ ಸುತ್ತಲಿನ ಪ್ರದೇಶಗಳನ್ನು ಒಂದು ರಣರಂಗವನ್ನಾಗಿ ಮಾಡುತ್ತಾ ಬರಲಾಗಿದೆ. ಈ ಬಾರಿಯೂ ಸಂಘಪರಿವಾರವು ಡಿಸೆಂಬರ್ 15ರ 'ದತ್ತಜಯಂತಿ'ಗೆ ಹೊಂದಿಕೊಂಡು ಮೊದಲೆರಡು ದಿನಗಳಲ್ಲಿಯೂ ಸಹ ಅನುಸೂಯ ಯಜ್ಞ, ಗಣಪತಿ ಹೋಮ, ರಾಜಬೀದಿ ಉತ್ಸವ, ದತ್ತ ವಿಗ್ರಹ ಮೆರವಣಿಗೆಗಳನ್ನು ಚಿಕ್ಕಮಗಳೂರಿನಲ್ಲಿ ಯೋಜಿಸಿತ್ತು. ಹಾಗೆಯೇ ಗಿರಿಯ ದರ್ಗಾಪೀಠದ ಗುಹೆಯಲ್ಲಿಯೂ ಇಂತಹುದೇ ಪೂಜೆ, ಯಜ್ಞಗಳನ್ನು ನಡೆಸುವುದಾಗಿ ಘೋಷಿಸಿತ್ತು. ತನ್ನ ಉದ್ದೇಶದ ಈಡೇರಿಕೆಗಾಗಿ ಕೆಲವು ಮಠಾಧೀಶರನ್ನೇ ಮುಂದೆ ಮಾಡಿದ್ದು ಈ ಬಾರಿಯ ಹೊಸ ತಂತ್ರ. ಆದರೆ ಆಡಳಿತದ ಬಿಗಿ ನಿಲುವು, ಪ್ರಗತಿಪರರ ಒತ್ತಡಗಳ ನಡುವೆ ಜನರ ಪ್ರತಿಕ್ರಿಯೆಯೂ ನೀರಸವಾಗಿ ಸಂಘಪರಿವಾರದ ಕೆಲವು ಪ್ರಮುಖ ಘೋಷಿತ ಉದ್ದೇಶಗಳು ವಿಫಲವಾದವು. ಕಳೆದ ವರುಷಗಳಲ್ಲಿ ಏನಿಲ್ಲವೆಂದರೂ ರಾಜ್ಯದ ಹಲವು ಜಿಲ್ಲೆಗಳಿಂದ ಸುಮಾರು 30,000 ಜನರನ್ನಾದರೂ ಸಂಘಪರಿವಾರ ಸೇರಿಸುತ್ತಿತ್ತು. ಈ ಸಲ ಸೇರಿದ್ದು ಕೇವಲ ಒಂದೂವರೆ ಸಾವಿರವೆಂದು ಮಾಧ್ಯಮಗಳು ವರ್ಣಿಸಿವೆ.

ಆಡಳಿತವು ಅವಕಾಶ ನೀಡದೇ ನಿಷೇಧಿಸಿದೆಯೆಂದು ಬಜರಂಗದಳವು ಅನುಸೂಯ ಯಜ್ಞ, ಗಣಪತಿ ಹೋಮಗಳನ್ನು ಕೈಬಿಟ್ಟಿತು. 14ರ ರಾಜಬೀದಿ ಉತ್ಸವ (ದತ್ತವಿಗ್ರಹ ಮೆರವಣಿಗೆಯ ಶೋಭಾಯಾತ್ರೆ)ವನ್ನು ರದ್ದುಪಡಿಸಬೇಕಾಗಿ ಬಂತು. ಕೊನೆಗೆ ಗಿರಿಯ ಗುಹೆಯ ಬಳಿ ಕರ್ಪೂರ ಉರಿಸಿ ಅದನ್ನು ಯಜ್ಞವೆಂದು ಹೇಳಿಕೊಂಡಿತು. ಸಂಘ ಪರಿವಾರದ ಹತಾಶೆ ತುತ್ತತುದಿಯಲ್ಲಿದ್ದು ಪ್ರವೇಶದ್ವಾರದಲ್ಲಿದ್ದ ದರ್ಗಾಪೀಠದ ನಾಮಫಲಕಕ್ಕೆ ಮಸಿ ಬಳಿದು ವಿಕೃತತೆ ತೋರಿದ್ದು ಎಲ್ಲಾ ಜಾತಿ, ಧರ್ಮೀಯರಿಗೆ, ಜನಸಾಮಾನ್ಯರಿಗೂ ಶ್ರದ್ಧಾಕೇಂದ್ರವಾಗಿರುವ ಸೌಹಾರ್ದತಾ ಪರಂಪರೆಗೆ ಮಸಿ ಬಳಿಯುವ ಯತ್ನಕ್ಕಿಳಿದು ತನ್ನ ಕೈಗೆ ಕರಾಳ ಮಸಿ ಕೈಗಂಟಿಕೊಂಡಿತು.

ಸಂಘ ಪರಿವಾರದ ಹುನ್ನಾರಗಳು ಅಷ್ಟಾಗಿ ನಡೆಯದೇ ಇರುವುದಕ್ಕೆ ಜಿಲ್ಲಾಡಳಿತ ಕೈಗೊಂಡ ದೃಢ ಕ್ರಮಗಳು ಸ್ವಾಗತಾರ್ಹ. ಹಿಂದೆ ಸರ್ಕಾರವೇ 1998ರಿಂದ ಸಂಘಪರಿವಾರಕ್ಕೆ ದತ್ತಜಯಂತಿ ಆಚರಣೆಗೆ ಯಜ್ಞಹೋಮ, ವಿಗ್ರಹಪೂಜೆ, ಸಂತ ಸಮಾವೇಶಗಳನ್ನು ನಡೆಸಲು ಮುಕ್ತ ಅವಕಾಶಗಳನ್ನು ಕಲ್ಪಿಸಿತ್ತಲ್ಲದೇ ಸ್ವತಃ ಸರ್ಕಾರದ ಸಚಿವರು,



ಜನರ ನೀರಸ ಪ್ರತಿಕ್ರಿಯೆ

ಅಧಿಕಾರಿಗಳು ಇದರಲ್ಲಿ ತೊಡಗುತ್ತಿದ್ದರು. ಎಡಪಕ್ಷಗಳ ಹಾಗೂ ಪ್ರಗತಿಪರರ ತೀವ್ರ ಒತ್ತಡ, ಪ್ರತಿರೋಧದಿಂದಾಗಿ ಕಳೆದ ವರುಷ ಮುಖ್ಯಮಂತ್ರಿ ಧರಂಸಿಂಗ್‌ರ ಮೈತ್ರಿಕೂಟದ ಸರ್ಕಾರ ಹಿಂದಿನ ವಿಕೃತಿಗಳನ್ನು ಸರಿಪಡಿಸುವ, 1975ರ ಹಿಂದಿನ ಆಚರಣೆಗಳಿಗೆ ಬದ್ಧವಾಗಿರುವ ನ್ಯಾಯಾಲಯದ ಆದೇಶ ಪಾಲಿಸುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿತ್ತು. ಸರ್ವಪಕ್ಷಗಳ ಸಭೆಯೂ ನಡೆದು ಅದನ್ನು ಒಂದು ಪ್ರಮುಖ ರಾಜಕೀಯ ಪ್ರಶ್ನೆಯಾಗಿ ಬಿಂಬಿಸಲಾಗಿತ್ತು. ಆದರೆ ಈ ವರುಷ ಅಂತಹ ಯಾವುದೇ ಕ್ರಮಗಳಿಗೆ ಮುಂದಾಗದಿರುವುದು, ಈ ವಿಷಯದ ಕುರಿತು ಚರ್ಚಿಸಲು ಬಯಸಿದ್ದ ಸಿಪಿಐ(ಎಂ) ಮುಖಂಡತ್ವಕ್ಕೆ ಭೇಟಿಗೆ ಅವಕಾಶ ಕಲ್ಪಿಸದೆ ಹೋದದ್ದು, ಹಿಂದಿನ ಜಿಲ್ಲಾಧಿಕಾರಿ ವರ್ಗಾವಣೆಗೊಂಡಿದ್ದು ಸರ್ಕಾರದ ದೃಢತೆ ಬಗೆಗೆ ಕೆಲವು ಅನುಮಾನಗಳನ್ನು ಹುಟ್ಟಿಸಿದ್ದವು. ಈಗ ಇಟ್ಟಿರುವ ಮುನ್ನೆಜ್ಜೆಯನ್ನು ಹಿಂದೆ ಇಡುವುದು ಅಷ್ಟು ಸುಲಭದ ವಿಷಯ ಅಲ್ಲ ಎಂಬುದು ಸರ್ಕಾರಕ್ಕೂ ತಿಳಿದಿದೆ ಎಂದು ಭಾವಿಸಬಹುದು.

ಜನತೆಯ ಸತತ ತಿರಸ್ಕಾರ

ಸಂಘ ಪರಿವಾರದ ಯತ್ನಗಳು ವಿಫಲಗೊಂಡಿರುವುದಕ್ಕೂ, ಜನಸ್ಪಂದನವಿಲ್ಲದೇ ಹೋಗಿರುವುದಕ್ಕೂ ಒಂದು ಪ್ರಮುಖ ಹಿನ್ನೆಲೆಯೆಂದರೆ ಕೇಂದ್ರದಲ್ಲಿ ಬಿಜೆಪಿ ಕೂಟವನ್ನು ಜನತೆ ಸೋಲಿಸಿದ ರಾಜಕೀಯ ಬೆಳವಣಿಗೆ. ಅಷ್ಟು ಮಾತ್ರವಲ್ಲ ಪರಿವಾರದ ಅನೇಕ ಹುನ್ನಾರಗಳಿಗೆ, ಬಿಜೆಪಿಯ ಆಟಗಳಿಗೆ ಜನ ಮರುಳಾಗದೇ ಸತತವಾಗಿ ತಿರಸ್ಕರಿಸುತ್ತಾ ಬರುತ್ತಿರುವುದು. ರಾಜ್ಯದಲ್ಲಿಯೂ ಬಿಜೆಪಿಯ ಸ್ಥಿತಿ ಸರಿಯಿಲ್ಲ. ಅಧಿಕಾರ ಲಾಲಸೆಗಳೇ ಅದರ ಪರಮೋಚ್ಛ ಧ್ಯೇಯವಾಗಿದೆ. ಆಂತರಿಕ ಕಿತ್ತಾಟ ಹೆಚ್ಚಿದೆ.

ಗಿರಿಯಲ್ಲಿ ಹುಟ್ಟುಹಾಕಲಾದ ವಿವಾದವನ್ನೇ ರಾಜಕೀಯವಾಗಿ ಪಂಚಾಯತ್ ಚುನಾವಣೆಗಳಲ್ಲಿ ಬಳಸಲು ಬಿಜೆಪಿಯ ಶಾಸಕ ಸಿ.ಟಿ.ರವಿ ನಡೆಸಿದ ಪ್ರಯತ್ನಕ್ಕೆ ಮತದಾನದ ಬಳಿಕ ಉತ್ತರ ಸಿಗುತ್ತದೆ. ಇಂತಹ ಪ್ರಕ್ರಿಯೆಗಳು ಕೇವಲ ಇಲ್ಲಿಗೆ ಮಾತ್ರ ಸೀಮಿತವಲ್ಲ. ಕೆಲವೇ ವಾರಗಳ ಹಿಂದೆ ಪೇಜಾವರ ಮಠಾಧೀಶರ ಮುತುವರ್ಜಿಯಿಂದ ವಿಶ್ವ ಹಿಂದು ಪರಿಷತ್ ಗುಲಬರ್ಗದ ಜೇವರ್ಗಿಯಲ್ಲಿ 'ಸಂತ ಸಮಾವೇಶ' ನಡೆಸಿದಾಗಲೂ ಅಷ್ಟು ಸ್ಪಂದನ ಸಿಗಲಿಲ್ಲ. ಜಾತ್ರೆಗೆ ಬಂದ ಒಂದಿಷ್ಟು ಜನರನ್ನು, ಕೆಲವು ವೀರಶೈವ ಮಠಾಧೀಶರನ್ನು ಅವರು ಆಶ್ರಯಿಸಿದ್ದರು. ಜಾತ್ರೆಯ ದುರ್ಬಳಕೆಯ ಈ ಕೋಮುವಾದಿ ಹುನ್ನಾರಗಳಿಗೆ ಬಂದ ಪ್ರತಿರೋಧ, ವಿವಿಧ ವಿಭಾಗಗಳನ್ನು ಒಳಗೊಂಡ ಒಟ್ಟು ಜನಸ್ಪಂದನ ಗಮನಾರ್ಹ. ಧಾರ್ಮಿಕ ಮುಖವಾಡದ ಹಿಂದಿನ ಕುತಂತ್ರಗಳ ಮುಖವನ್ನು ಅದು ಹರಿದೊಗೆದು ಬಯಲಿಗಿಟ್ಟಿತು.

ಅತೃಪ್ತಿಯ ದುರ್ಬಳಕೆ

ಪರಿವಾರದ ಎಲ್ಲಾ ಆಟಗಳಿಗೆ ಸಹಾಯವಾಗಿ ಬರುವ ಅಂಶವೆಂದರೆ ಸರ್ಕಾರದ ಬಗೆಗಿನ ಜನರ ಅತೃಪ್ತಿಯ ದುರ್ಬಳಕೆ. ಜನತೆಯ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಒದಗಿಸದೆ ಕಾಗಕ್ಕ, ಗುಬ್ಬಕ್ಕನ ಕಥೆ ಹೇಳುತ್ತಾ ಕಾಲ ತಳ್ಳಿದರೆ ಅದರ ಲಾಭ ಹೊಡೆಯಲು ಈ ಶಕ್ತಿಗಳಿಗೆ ಫಲವತ್ತಾದ ಭೂಮಿ ಒದಗಿಸಿದಂತೆ, ಜೊತೆಯಲ್ಲಿಯೇ ಈ ಸವಾಲನ್ನು ರಾಜಕೀಯವಾಗಿಯೂ ಎದುರಿಸುವುದು ಅತೀ ಅಗತ್ಯ. ಈ ವಿವಾದದಲ್ಲಿ ಜಾತ್ಯಾತೀತ ಜನತಾದಳವೂ ಅಷ್ಟಾಗಿ ತಲೆಕೆಡಿಸಿಕೊಳ್ಳುತ್ತಿಲ್ಲ. ಅದೇನಿದ್ದರೂ ಧರಂಸಿಂಗ್, ಕಾಂಗ್ರೆಸ್ಸಿಗರ ಹೆಗಲಿಗೆ

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಹಾಕಿದಂತೆ ಭಾವಿಸಿದೆ. ಕಾಂಗ್ರೆಸ್ ಸಹ ಇಂದು ರಾಜಕೀಯ ಪಕ್ಷವಾಗಿ ಈ ಮುಖಾಮುಖಿಯಲ್ಲಿ ಕೋಮುವಾದವನ್ನು ಎದುರಿಸುತ್ತಿಲ್ಲ. ಆಡಳಿತದ ಬಲವನ್ನಷ್ಟೇ ಅವಲಂಬಿಸಿದೆ ಎಂಬುದನ್ನು ಗಮನಿಸಬೇಕು.

ಜನರ ಒಗ್ಗಟ್ಟು ಬೆಸೆಯಲು ಆರ್ಥಿಕ ಹೋರಾಟಗಳು

ಈ ಬಾರಿಯೂ ಪ್ರಗತಿಪರರ ಪ್ರತಿರೋಧ ಇತ್ತು. ಆದರೆ ಕಳೆದ ವರುಷಗಳಲ್ಲಿ ಇದ್ದಷ್ಟು ಇರಲಿಲ್ಲ. ಸರ್ಕಾರದ ನಿಲುವಿನಲ್ಲಾದ ಬದಲಾವಣೆಯೂ ಹೋರಾಟದ ಪ್ರಮಾಣದ ಮೇಲೆ ಪರಿಣಾಮ ಬೀರುತ್ತದೆ. ಆದರೆ ಕೋಮುವಾದದ ಅಪಾಯ, ಬೆದರಿಕೆಗಳನ್ನು ಕಡೆಗಣಿಸಲು ಸಾಧ್ಯವೇ ಇಲ್ಲ. ಅದನ್ನು ಎಳ್ಳಷ್ಟು ಕಡಿಮೆ ಅಂದಾಜು ಮಾಡಲು ಆಗದು. ಆದರೆ ಜನರಿಗೆ ತಲೆ ಬರಿಯುವಷ್ಟು ಕೋಮುವಾದದ ಬಗ್ಗೆ, ಸೌಹಾರ್ದತೆಯ ಬಗ್ಗೆ ಕೊರೆತದಿಂದಲೇ ಕೋಮುವಾದಿಗಳನ್ನು ಹಿಮ್ಮೆಟ್ಟಿಸಬಿಡಬಹುದೆಂಬುದು ಒಂದು ಭ್ರಮೆ.

ಜನರಿಗೆ ಅವರದ್ದೇ ಆದ ಗಂಭೀರ ಸಂಕಷ್ಟಗಳಿವೆ. ವ್ಯಕ್ತಿಗತವಾಗಿಯೂ, ಸಮುದಾಯವಾಗಿಯೂ ಘೋರ ಆರ್ಥಿಕ ಸಮಸ್ಯೆಗಳಿವೆ. ದೈನಂದಿನ ಪ್ರಶ್ನೆಗಳ ಪರಿಹಾರಕ್ಕೆ ಹೋರಾಡುತ್ತಲೇ ಸರ್ಕಾರಗಳ, ಆಳುವ ವರ್ಗಗಳ ನೀತಿಗಳ ವಿರುದ್ಧ ಪ್ರಬಲವಾಗಿ ಸಂಘರ್ಷಕ್ಕೆ ಇಳಿದು ಹಿಮ್ಮೆಟ್ಟಿಸಬೇಕು. ಹೊಸದನ್ನು ಪಡೆಯಬೇಕು. ಬದುಕಿನ, ಆರ್ಥಿಕ ಪ್ರಶ್ನೆಗಳನ್ನೆತ್ತಿ ಹೋರಾಡುವುದರ ಮೂಲಕ ವಿಶಾಲ ಮೈತ್ರಿ ಒಗ್ಗಟ್ಟನ್ನು ಜನತೆಯಲ್ಲಿ ತರಲು ಸಾಧ್ಯ. ಈ ಒಗ್ಗಟ್ಟು ಮತ್ತು ಎಚ್ಚರ ಕೋಮುವಾದದ, ಜಾತಿವಾದದ ವಿರುದ್ಧದ ಹೋರಾಟಕ್ಕೆ ಬಲ ತುಂಬುತ್ತದೆ. ಆದ್ದರಿಂದ ಪ್ರಜ್ಞಾವಂತರು, ಪ್ರಗತಿಪರರು ಈ ದಿಕ್ಕಿನಲ್ಲಿನ ಪ್ರಯತ್ನಗಳನ್ನು ಇಮ್ಮಡಿಗೊಳಿಸಬೇಕಿದೆ. ವಿಶ್ವವಾಣಿಜ್ಯ ಸಂಸ್ಥೆ ಒಪ್ಪಂದಗಳು, ಸಾಮ್ರಾಜ್ಯಶಾಹಿ ಧಾಳಿಗಳು, ಬಂಡವಾಳಶಾಹಿ, ಭೂಮಾಲಿಕ ವರ್ಗಗಳನ್ನು ಬಲಗೊಳಿಸುವ ಆರ್ಥಿಕ ನೀತಿಗಳನ್ನು ಸರ್ಕಾರದ ಕ್ರಮಗಳನ್ನು ಹಿಮ್ಮೆಟ್ಟಿಸಿ ಹೋರಾಡುವುದು ಸಹ ಅತ್ಯಂತ ತುರ್ತಿನ ಕರ್ತವ್ಯ.



ಕಾಲ್ ಸೆಂಟರ್ ಉದ್ಯೋಗಿ ಹತ್ಯೆ, ಕೈಗಾರಿಕಾ ವಲಯದ ಹೊಣೆಗೇಡಿತನ, ನಿರ್ಲಕ್ಷ್ಯಕ್ಕೆ ಸಾಕ್ಷಿ

ಬಹುರಾಷ್ಟ್ರೀಯ ಕಂಪನಿ ಹೆಚ್‌ಪಿ ಗೆ ಸೇರಿದ ಕಾಲ್ ಸೆಂಟರ್‌ನ ಉದ್ಯೋಗಿ ಶ್ರೀಮತಿ ಪ್ರತಿಭಾ ಶೆಟ್ಟಿಯವರ ಮೇಲಿನ ಅಮಾನುಷ ಅತ್ಯಾಚಾರ ಮತ್ತು ಬರ್ಬರ ಕೊಲೆಯ ಘಟನೆಯ ಬಗ್ಗೆ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು ತೀವ್ರವಾದ ಆತಂಕವನ್ನು ವ್ಯಕ್ತಪಡಿಸಿದೆ.

ಆಧುನಿಕ ಕೈಗಾರಿಕಾ ವಲಯವೆಂದು ಬಣ್ಣಿಸಲ್ಪಡುತ್ತಿರುವ ಈ ಉದ್ಯಮದಲ್ಲಿ ಉದ್ಯೋಗಿಗಳ ಅದರಲ್ಲೂ ಮಹಿಳಾ ಉದ್ಯೋಗಿಗಳಿಗೆ ಭದ್ರತೆ ವ್ಯವಸ್ಥೆಯ ಬಗ್ಗೆಯೇ ಹಲವಾರು ಅನುಮಾನಗಳನ್ನು ಸೃಷ್ಟಿಸಿದೆ.

ಉದ್ಯಮದ ಮುಖ್ಯಸ್ಥರು ಈ ಕ್ಷೇತ್ರದ ಉದ್ಯೋಗಿಗಳ ಬಗ್ಗೆ ಹೊಂದಿರುವ ತಿರಸ್ಕಾರ ಮನೋಭಾವ ಮತ್ತು ಬೇಜವಾಬ್ದಾರಿ ದಟ್ಟವಾಗಿದೆ. ಸಾರಿಗೆ ವ್ಯವಸ್ಥೆಯನ್ನು ಗುತ್ತಿಗೆ ನೀಡುವುದು, ಸೂಕ್ತವಾದ ಮುಂಜಾಗರೂಕತಾ ರಕ್ಷಣಾ ಕ್ರಮಗಳಿಲ್ಲದಿರುವುದು ಪ್ರಮುಖವಾದ ಕಾರಣವಾಗಿದೆ. ಇದನ್ನು ಸರಿಪಡಿಸುವುದರತ್ತ ಅಗತ್ಯವಾದ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಕಾರ್ಮಿಕ ಕಾನೂನುಗಳನ್ನು ಬಿಗಿಯಾಗಿ ಜಾರಿಗೊಳಿಸದೆ ಈ ಕ್ಷೇತ್ರದ ಉದ್ಯಮದ ಬಗ್ಗೆ ಯಾವುದೇ ನಿರ್ಬಂಧಗಳಿಲ್ಲದೇ ಮುಕ್ತ ಅವಕಾಶ ಕಲ್ಪಿಸಿರುವ ಬಗ್ಗೆಯೂ ಪುನರ್ ವಿಮರ್ಶೆ ಅಗತ್ಯವಿದೆಯೆಂದು ಸಿಪಿಐ(ಎಂ) ಒತ್ತಾಯಿಸಿದೆ. ಈ ಬಗ್ಗೆ ಪ್ರತಿಭಟನೆ ನಡೆಸಲು ಸಿಪಿಐ(ಎಂ) ನಿರ್ಧರಿಸಿದೆ.

ಈ ಘಟನೆಯಿಂದ ಜಾಗೃತಗೊಂಡು ಸೇವಾ ಭದ್ರತೆ, ವಿವಿಧ ಸೌಲಭ್ಯಗಳಿಗಾಗಿ ಐ.ಟಿ. ಉದ್ಯೋಗಿಗಳು ಸಂಘಟಿತರಾಗಬೇಕೆಂದು ಸಿಪಿಐ(ಎಂ) ಕರೆ ನೀಡುತ್ತದೆ.

ಬಾಧಿತರಿಗೆ ನೆರವು

ಇತ್ತೀಚೆಗೆ ಸುರಿದ ವಿಪರೀತ ಮಳೆ ಹಾನಿಗೆ ಪರಿಹಾರ ಕೊಡಲು ಕೇಂದ್ರದಿಂದ 357 ಕೋಟಿ ರೂಪಾಯಿಗಳ ನೆರವು ಸಿಕ್ಕಿತ್ತು. ಆದರೆ ಪುನಃ ಇದರಲ್ಲಿ 157 ಕೋಟಿ ರೂಪಾಯಿಗಳನ್ನು ಹಿಂದಕ್ಕೆ ಕಳಿಸಲು ಸೂಚಿಸಿದ್ದನ್ನು ರದ್ದುಗೊಳಿಸಿ ಇಲ್ಲೇ ಉಳಿಸಿಕೊಳ್ಳಲು ಧರಂಸಿಂಗ್ ನಿಯೋಗ ಮಾಡಿದ ಮನವಿ ಫಲ ನೀಡಿದೆಯಂತೆ. ಇದು ಖಂಡಿತ ಅಗತ್ಯವಾದ ಮೊತ್ತ.

ಈ ಮಳೆಗೆ 18 ಜಿಲ್ಲೆಗಳು 104 ತಾಲ್ಲೂಕುಗಳಲ್ಲಿ 1.30 ಲಕ್ಷ ಮನೆಗಳಿಗೆ ಹಾನಿಯಾಗಿದೆ, ಸುಮಾರು 130 ಜನ ಸಾವನ್ನಪ್ಪಿದ್ದಾರೆ. ಏನಿಲ್ಲವೆಂದರೂ 4600 ಕೋಟಿ ರೂಪಾಯಿಗಳ ಹಾನಿಯ ಅಂದಾಜಿದೆ. ಹಸಿದ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ ಕೇಂದ್ರ ಸಹಾಯವಾದರೂ ಅದು ತೀರಾ ಅಗತ್ಯವಿದೆ.

ಆದರೆ ಪ್ರಶ್ನೆಯೆಂದರೆ ಈಗ ದೊರಕಿರುವ ಮೊತ್ತ ರಾಜ್ಯ ಸರ್ಕಾರದ ಹಣ ಎಲ್ಲವೂ ಸೇರಿ ನಿಜವಾಗಲೂ ಬಾಧಿತ ಜನರಿಗೆ ತಲುಪುವುದೇ ಎಂಬುದಾಗಿದೆ. ಯಾಕೆಂದರೆ ಹಿಂದೆಲ್ಲ ಬರಪರಿಹಾರ ಕಾಮಗಾರಿಗಳಲ್ಲಿ ಕೂಲಿಗಾಗಿ ಕಾಳು ಯೋಜನೆಯನ್ನು ಒಳಗೊಂಡು ಹಲವಾರು ಪರಿಹಾರ ಕಾಮಗಾರಿಗಳಲ್ಲಿ ಹಣ ನುಂಗಿದ್ದೇ ಹೆಚ್ಚು ಅನೇಕ ಕಡೆ ಅಕ್ಕಿಯ ಮಾಲುಸಮೇತ ಹಿಡಿದುಕೊಟ್ಟರೂ, ಸಾವಿರಾರು ಕೋಟಿ ರೂಪಾಯಿಗಳನ್ನು ನುಂಗಿ ನೀರು ಕುಡಿದ ಹಗರಣಗಳು ಪತ್ತೆಯಾದರೂ ಯಾರ ಮೇಲೂ ನಿಷ್ಠುರ ಕ್ರಮವನ್ನು ಸರ್ಕಾರ ಕೈಗೊಳ್ಳಲಿಲ್ಲ. ಬರ, ನೆರೆಯಂತಹ ನೈಸರ್ಗಿಕ ಪ್ರಕೋಪಗಳಲ್ಲಿ ಜನತೆ ನಲುಗಿ ತತ್ತರಿಸುತ್ತಿದ್ದರೆ ಅದೇ ಅಧಿಕಾರಿಗಳಿಗೆ ಆಡಳಿತ-ವಿರೋಧ ಪಕ್ಷಗಳು, ರಾಜಕೀಯ ನಾಯಕರಿಗೆ ಹಬ್ಬದೂಟವಾಗಿರುತ್ತದೆ. ಇಂತಹ ಭ್ರಷ್ಟಾಚಾರಿಗಳ ವ್ಯಾಪಕ ಜಾಲವೇ ಇದೆ. ಅದನ್ನು ರಕ್ಷಿಸುವವರೂ ಇದ್ದಾರೆ.

ಆದ್ದರಿಂದ ದೊರೆತ ನೆರವನ್ನು ಪ್ರಾಮಾಣಿಕವಾಗಿ ನೊಂದ ಬಾಧಿತ ಜನತೆಗೆ ತಲುಪಿಸಬೇಕು. ಅದಕ್ಕಾಗಿ ಸಾರ್ವಜನಿಕ ತನಿಖೆ ಉಸ್ತುವಾರಿಯನ್ನು ಸೂಕ್ತ ಪ್ರಜಾಸತ್ತಾತ್ಮಕ ಮಾರ್ಗಗಳ ಮೂಲಕ ನಡೆಸಬೇಕು. ಅದು ಪಾರದರ್ಶಕವಾಗಿರಬೇಕು. ಇಲ್ಲವಾದರೆ ಎಲ್ಲಾ ನೆರವುಗಳು ಹಸಿದ ಹೊಟ್ಟೆಗಳಿಗಲ್ಲ, ತಿಂದುಂಡು ತೇಗುವ ಅಧಿಕಾರಸ್ಥರಿಗೆ ಹೊಟ್ಟೆ ಬೆಳೆಸಲಿಕ್ಕೆ ಎಂದಾಗುತ್ತದೆ.

WTO - ಶ್ರೀಮಂತ ರಾಷ್ಟ್ರಗಳ ಹುನ್ನಾರಗಳಿಗೆ ಜನತೆಯ ಧಿಕ್ಕಾರ

ವಿಶ್ವ ವ್ಯಾಪಾರ ಸಂಘಟನೆಯ (WTO) ಸಚಿವಮಟ್ಟದ ಮಾತುಕತೆಯು ಜನರ ಪರವಾಗಿರಬೇಕೆಂದು ಒತ್ತಡ ಹೇರುವ ಪ್ರತಿಭಟನೆಗಳು ಜಗತ್ತಿನಾದ್ಯಂತ ನಡೆಯುತ್ತಿದ್ದಂತೆ, ಕರ್ನಾಟಕ ರಾಜ್ಯದಲ್ಲೂ ಸಿಪಿಐ(ಎಂ) ಮತ್ತಿತರ ಸಾಮೂಹಿಕ ಸಂಘಟನೆಗಳ ನೇತೃತ್ವದಲ್ಲಿ ವ್ಯಾಪಕ ಪ್ರತಿಭಟನೆಗಳು ನಡೆದ ವರದಿಯಾಗಿದೆ.

ಬಿಜಾಪುರ : ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ 300ಕ್ಕೂ ಹೆಚ್ಚು ರೈತರು ಮತ್ತು ಮಹಿಳೆಯರು ಡಬ್ಲ್ಯುಟಿಒ ಮಾತುಕತೆಗಳು ದುಡಿಯುವ ಜನರ ಪರವಾಗಿರಬೇಕೆಂದು ಆಗ್ರಹಿಸಿದರು. ಬಿಜಾಪುರದ ಇಂಡಿ ರಸ್ತೆಯಲ್ಲಿರುವ ಎಪಿಎಂಸಿ ಸಂಘದ ಕಾರ್ಯಾಲಯದಿಂದ ಹೊರಟ ಪ್ರತಿಭಟನಾಕಾರರು ಕೋರಿ ವೃತ್ತ, ಸಿದ್ದೇಶ್ವರ ಗುಡಿ, ಸೂಫಿ ಬಜಾರ, ಆಜಾದ್ ರಸ್ತೆ, ಗಾಂಧಿ ವೃತ್ತ, ಬಸವೇಶ್ವರ ವೃತ್ತ, ಟಿಪ್ಪು ಸುಲ್ತಾನ್ ವೃತ್ತದ ಮೂಲಕ ಹಾದು ಜಿಲ್ಲಾಧಿಕಾರಿ ಕಛೇರಿಗೆ ತೆರಳಿ ಬಹಿರಂಗ ಸಭೆ ನಡೆಸಿದರು.

ಸಭೆಯಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ಭೀಮಸಿ ಕಲಾದಗಿ, ಅಣ್ಣಾರಾಯ ಈಳಿಗೇರ, ಜಮಖಂಡಿಯ ರೈತ ನಾಯಕ ಡಾ.ಸ್ಟಾಲಿನ್ ದೇಸಾಯಿ, ಸಿಐಟಿಯು ಮುಖಂಡ ವಿ.ಎಂ.ಸೊನ್ನದ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಸುರೇಖಾ ರಜಪೂತ ಮೊದಲಾದವರು ಮಾತನಾಡಿ, ಡಬ್ಲ್ಯುಟಿಒ ಮಾತುಕತೆಗಳು ಶ್ರೀಮಂತ ರಾಷ್ಟ್ರಗಳ ಒತ್ತಡಕ್ಕೆ ಮಣಿದದ್ದೇ ಆದಲ್ಲಿ ಹೋರಾಟವನ್ನು ತೀವ್ರಗೊಳಿಸಬೇಕೆಂದು ಕರೆ ನೀಡಿದರು.

ಬೆಂಗಳೂರು : ಬೆಂಗಳೂರು ನಗರದ ಹೃದಯ ಭಾಗದಲ್ಲಿರುವ ಮೈಸೂರು ಬ್ಯಾಂಕ್ ವೃತ್ತದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ಡಬ್ಲ್ಯುಟಿಒನ ಭೂತದಹನ ನಡೆಸಲಾಯಿತು. ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿಯವರು ಮಾತನಾಡಿ ವಿಶ್ವವ್ಯಾಪಾರ ಸಂಘಟನೆ ವಿಧಿಸಿದ ಶರತ್ತುಗಳಿಂದಾಗಿ ಭಾರತವೂ ಸೇರಿದಂತೆ, ಅಭಿವೃದ್ಧಿಶೀಲ ದೇಶಗಳ ಕೃಷಿ ಉತ್ಪಾದನೆಗಳ ವ್ಯಾಪಾರದಲ್ಲಿ ವಿನಾಶಕಾರಿ ಪರಿಣಾಮಗಳಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಾಗಿತ್ತು. ಈಗ ಕೃಷಿಯೇತರ ವಸ್ತುಗಳ ಮಾರುಕಟ್ಟೆ ಅವಕಾಶ ಮತ್ತು ಸೇವಾಕ್ಷೇತ್ರದಲ್ಲಿನ ವ್ಯಾಪಾರ ವಹಿವಾಟುಗಳಿಗೆ ಸಂಬಂಧಿಸಿದ ಮಾತುಕತೆಗಳು ಶ್ರೀಮಂತ ರಾಷ್ಟ್ರಗಳಿಗೆ ಅನುಕೂಲವಾಗದಂತೆ ಕೇಂದ್ರ ಸರಕಾರ ಎಚ್ಚರ ವಹಿಸಬೇಕೆಂದು ಆಗ್ರಹಿಸಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಮತ್ತಿತರರು ಮಾತನಾಡಿದರು.



ಬೆಂಗಳೂರಿನಲ್ಲಿ WTO ಭೂತದಹನ

ತುಮಕೂರು : ತುಮಕೂರಿನಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಜಂಟಿಯಾಗಿ ಪ್ರತಿಭಟನೆಯನ್ನು ಸಂಘಟಿಸಿದ್ದವು. ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಧರಣಿ ನಡೆಸಿದ್ದು, ನಂತರ ಮೆರವಣಿಗೆಯಲ್ಲಿ ತೆರಳಿ ಸ್ವತಂತ್ರ ಚೌಕದಲ್ಲಿ ಡಬ್ಲ್ಯುಟಿಒ ಪ್ರತಿಕೃತಿಯನ್ನು ದಹಿಸಲಾಯಿತು.

ತುಮಕೂರು ಕೊಳೆಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿ, ಎಸ್.ಎಫ್.ಐ, ಡಿವೈಎಫ್ಐ ಮೊದಲಾದ ಸಂಘಟನೆಗಳ ಮುಖಂಡರು ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಸಯ್ಯದ್ ಮುಜೀಬ್, ಸಿಪಿಐನ ಜಿಲ್ಲಾ ಕಾರ್ಯಧರ್ಶಿ ಶಿವಣ್ಣ ಮೊದಲಾದವರು ಮಾತನಾಡಿದರು.

ಹಾಸನ : ಸಿಪಿಐ(ಎಂ) ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ 100ಕ್ಕೂ ಹೆಚ್ಚು ಜನರು ಭಾಗವಹಿಸಿದ್ದು ಬಸ್ ನಿಲ್ದಾಣದ ಬಳಿಯ ಹೇಮಾವತಿ ವೃತ್ತದಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಛೇರಿಗೆ ತೆರಳಿ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯ ನೇತೃತ್ವವನ್ನು ರಾಜ್ಯ ಸಮಿತಿ ಸದಸ್ಯ ವಿ.ಸುಕುಮಾರ್ ವಹಿಸಿದ್ದರು. ಸಿಐಟಿಯು, ಎಸ್‌ಎಫ್ಐ ಮೊದಲಾದ ಸಂಘಟನೆಗಳೂ ಬೆಂಬಲ ಸೂಚಿಸಿದ್ದರು. ಮೆರವಣಿಗೆಯ ಸಂದರ್ಭದಲ್ಲಿ ಪೊಲೀಸ್ ವೃತ್ತದಲ್ಲಿ ಡಬ್ಲ್ಯುಟಿಒನ ಭೂತದಹನ ಮಾಡಿದ ಪ್ರತಿಭಟನಾಕಾರರು ಮುಗಿಲು ಮುಟ್ಟುವ ಘೋಷಣೆಗಳೊಂದಿಗೆ ಜನರನ್ನು ಆಕರ್ಷಿಸಿದರು.

ಗುಲ್ಬರ್ಗಾ, ಮಂಗಳೂರು ಮೊದಲಾದ ಕಡೆಗಳಲ್ಲೂ ವ್ಯಾಪಕ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ.

ಡಬ್ಲ್ಯುಟಿಒ ವ್ಯಾಪ್ತಿಯಿಂದ ಶಿಕ್ಷಣ ರಂಗವನ್ನು ಹೊರಗಿಡಲು ಆಗ್ರಹ
ಎಸ್.ಎಫ್.ಐ.ನಿಂದ ರಾಜ್ಯವ್ಯಾಪಿ ಪ್ರತಿಭಟನೆ - ಭೂತದಹನ

ಹಾಂಗ್‌ಕಾಂಗ್‌ನಲ್ಲಿ ನಡೆಯುತ್ತಿರುವ ಡಬ್ಲ್ಯು.ಟಿ.ಓ. ಸಚಿವರ ಮಟ್ಟದ ಸಭೆಯಲ್ಲಿ ಶಿಕ್ಷಣ ರಂಗವನ್ನು ಡಬ್ಲ್ಯು.ಟಿ.ಓ.ವ್ಯಾಪ್ತಿಗೆ ಸೇರ್ಪಡೆಗೊಳಿವುದನ್ನು ತೆರವುಗೊಳಿಸಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ನೇತೃತ್ವದಲ್ಲಿ ವಿದ್ಯಾರ್ಥಿಗಳು ಬೆಂಗಳೂರಿನ ಟೌನ್‌ಹಾಲ್ ಬಳಿ ಪ್ರತಿಭಟನೆ ಮಾಡಿ ಭೂತ ದಹನ ನಡೆಸಿದರು. ಅಲ್ಲಿ ಸಮಾವೇಶಗೊಂಡ ವಿವಿಧ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಹಾಂಗ್‌ಕಾಂಗ್‌ನಲ್ಲಿ ನಡೆಯುತ್ತಿರುವ ಸಭೆಯಲ್ಲಿ ಬಡ ರಾಷ್ಟ್ರಗಳ ವಿರೋಧಿ ನೀತಿಯನ್ನು ಡಬ್ಲ್ಯು.ಟಿ.ಓ. ಅನುಸರಿಸುತ್ತಿರುವದನ್ನು ಹಾಗೂ ವಿದೇಶಿ ಬಂಡವಾಳಕ್ಕೆ ಶಿಕ್ಷಣರಂಗದಲ್ಲಿ ಅವಕಾಶ ನೀಡುವುದನ್ನು ವಿರೋಧಿಸಿ 'ವಿದೇಶ ವಿ.ವಿ.ಗಳಿಗೆ ಅವಕಾಶ ನೀಡಬೇಡಿ' ದೇಶದ ಬೌದ್ಧಿಕ ಸಾರ್ವಭೌಮತ್ವ ಮತ್ತು ಸ್ವಾವಲಂಬನೆಯನ್ನು ರಕ್ಷಿಸಿ ಎಂದು ಘೋಷಣೆಗಳನ್ನು ಕೂಗಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಎಸ್.ಎಫ್.ಐ.ನ ರಾಜ್ಯ ಮುಖಂಡರು ದೇಶದ ಶಿಕ್ಷಣದ ವಿಚಾರದಲ್ಲಿ ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ವಹಿಸಬಾರದು ಮತ್ತು ದೇಶದ ಸಾರ್ವಭೌಮತೆಯನ್ನು ಒತ್ತೆ ಇಡುವಂತಹ ನಿರ್ಧಾರಗಳನ್ನು ಕೈಗೊಳ್ಳಬಾರದು. ವಿದೇಶಿ ವಿ.ವಿ.ಗಳಿಗೆ ಅವಕಾಶ ನೀಡಿದರೆ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಜನರಿಗೆ ಶಿಕ್ಷಣ ಕೈಗೆಟುಕದಂತಾಗುತ್ತದೆ. ಶಿಕ್ಷಣದ ವ್ಯಾಪಾರೀಕರಣಕ್ಕೆ, ಖಾಸಗೀಕರಣಕ್ಕೆ ಅವಕಾಶವಾಗುತ್ತದೆ. ಪ್ರತಿಭೆ ಮತ್ತು ಸಾಮಾಜಿಕ ನ್ಯಾಯಕ್ಕೆ ಅನ್ಯಾಯವಾಗುತ್ತದೆ. ಆದ್ದರಿಂದ ವಿದೇಶಿ ವಿ.ವಿ.ಗಳನ್ನು ವಿರೋಧಿಸಬೇಕು. ಹಾಗೂ ಎಲ್ಲ ಖಾಸಗೀ ಶಿಕ್ಷಣ ಸಂಸ್ಥೆಗಳ ಮೇಲೆ ನಿಯಂತ್ರಣ ತರುವಂತಹ ಕೇಂದ್ರೀಯ ಶಾಸನವನ್ನು ಜಾರಿಗೆ ತರಬೇಕು ಮತ್ತು ಈಗಿರುವ ಸರ್ಕಾರಿ ಶಾಲಾ ಕಾಲೇಜುಗಳಿಗೆ ಸೂಕ್ತ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ಮತ್ತು ಹೆಚ್ಚು ಹೆಚ್ಚು ಸರ್ಕಾರಿ ಶಾಲಾ ಕಾಲೇಜುಗಳನ್ನು ಆರಂಭಿಸಬೇಕು ಹಾಗೂ ಹೆಚ್ಚು ಹೆಚ್ಚು ಸರ್ಕಾರಿ ಶಾಲಾ ಕಾಲೇಜುಗಳನ್ನು ಸ್ಥಾಪಿಸಬೇಕು. ಇದಕ್ಕೆ ಪೂರಕವಾಗಿ ಸರ್ಕಾರ ಕೇಂದ್ರದ ಬಜೆಟ್‌ನ ಶೇ.10, ರಾಜ್ಯದ ಬಜೆಟ್‌ನ ಶೇ.30ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಡಬೇಕೆಂದು ಪ್ರತಿಭಟನೆಯಲ್ಲಿ ಒತ್ತಾಯಿಸಲಾಯಿತು.

ಬೆಂಗಳೂರಿನ ಪುರಭವನದ ಮುಂದೆ ವಿದ್ಯಾರ್ಥಿಗಳ ಪ್ರದರ್ಶನ



ಡಬ್ಲ್ಯು.ಟಿ.ಓ.ದ ಬೃಹತ್ ಭೂತವನ್ನು ತುಂತುರು ಮಳೆಯ ನಡುವೆಯೇ ದಹಿಸಲಾಯಿತು. ಪ್ರತಿಭಟನೆಯ ನೇತೃತ್ವವನ್ನು ಎಸ್.ಎಫ್.ಐ.ನ ರಾಜ್ಯ ಕಾರ್ಯದರ್ಶಿ ಹೆಚ್.ಆರ್. ನವೀನ್‌ಕುಮಾರ್, ರಾಜ್ಯಾಧ್ಯಕ್ಷರಾದ ಬಿ.ರಾಜಶೇಖರಮೂರ್ತಿ, ಜಿಲ್ಲಾ ಅಧ್ಯಕ್ಷ ನಾಗರಾಜ್.ಕೆ., ನಗರ ಸಮಿತಿ ಕಾರ್ಯದರ್ಶಿ ಪ್ರಸಾದ್ ವಹಿಸಿದ್ದರು. ಪ್ರತಿಭಟನೆಯಲ್ಲಿ ನೂರಾರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಗದಗ ಜಿಲ್ಲೆ ಗಜೇಂದ್ರಗಢ ಮುಂತಾದ ಕಡೆ 200 ವಿದ್ಯಾರ್ಥಿಗಳು, ಹಾವೇರಿ ಜಿಲ್ಲೆಯಲ್ಲಿ ಹಾವೇರಿಯಲ್ಲಿ 800 ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ, ಶಿರಸಿ, ಹೊನ್ನಾವರ ಮತ್ತು ಕಾರವಾರದಲ್ಲಿ, ಕೋಲಾರ ಜಿಲ್ಲೆಯಲ್ಲಿ ಬಾಗೇಪಲ್ಲಿ ತಾಲ್ಲೂಕು, ಮೈಸೂರು ನಗರ ಮತ್ತು ಹುಣಸೂರಿನಲ್ಲಿ, ಬಳ್ಳಾರಿಗಳಲ್ಲಿ ಪ್ರತಿಭಟನೆಗಳು ನಡೆದಿವೆ.

ಬಾಬಾಬುಡನ್‌ಗಿರಿ ದತ್ತಜಯಂತಿ : ಸ್ಪಷ್ಟ ನಿಲುವು ಪ್ರಕಟಿಸಲು ಹಾಗೂ ದೃಢ ಕ್ರಮ ವಹಿಸಲು ಸರ್ಕಾರಕ್ಕೆ ಸಿಪಿಐ(ಎಂ) ಆಗ್ರಹ

ಡಿಸೆಂಬರ್ 12, 2005 ರಂದು ಬಿಡುಗಡೆ ಮಾಡಲಾದ ಹೇಳಿಕೆ

ಸೌಹಾರ್ದ ಪರಂಪರೆಯ ಬಾಬಾಬುಡನ್ ಗಿರಿಯ ಪೀಠ - ದರ್ಗಾದ ಗುಹೆ ಮತ್ತು ಹೊರ ಪರಿಸರದಲ್ಲಿ ದತ್ತ ಜಯಂತಿ ಆಚರಿಸುವ ಹೆಸರಿನಲ್ಲಿ ಮತೀಯ ಸಾಮರಸ್ಯದ ಪರಂಪರೆಯ ಮೇಲೆ ಧಾಳಿ ನಡೆಸುತ್ತಿರುವ ಸಂಘಪರಿವಾರದ ಪ್ರಯತ್ನಗಳನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು ಉಗ್ರವಾಗಿ ಖಂಡಿಸಿದೆ.

ಚಿಕ್ಕಮಗಳೂರು ಮತ್ತು ಗಿರಿಯ ಮೇಲೆ ಬಜರಂಗದಳ ವಿಶ್ವಹಿಂದು ಪರಿಷತ್‌ಗಳು 13ರಿಂದ 15ರವರೆಗೆ ಅಲ್ಲಿಯ ಪರಂಪರೆ ಆಚರಣೆಗಳಲ್ಲಿಯೇ ಇಲ್ಲದಂತಹ ಹವನ-ಹೋಮ, ವಿಗ್ರಹ ಪೂಜೆ, ಮೆರವಣಿಗೆ ಸಮಾವೇಶಗಳನ್ನು ನಡೆಸುವ ಮೂಲಕ ವಿಕೃತಿ ಆಚರಣೆಗೆ ಮುಂದಾಗಿವೆ. ಹಿಂದೂ ಮುಸ್ಲಿಂರಿಗೆ ವಿವಿಧ ಜಾತಿ ಜನಾಂಗಗಳಿಗೆ ಶ್ರದ್ಧಾ ಕೇಂದ್ರವಾಗಿರುವ ಗಿರಿಯಲ್ಲಿ ಇಂತಹ ಚಟುವಟಿಕೆಗಳು '1975ರ ಹಿಂದಿನ ಆಚರಣೆಗಳಿಗೆ ಮಾತ್ರ ಸೀಮಿತವಿರಬೇಕು' ಎಂಬ ಉಚ್ಚ ನ್ಯಾಯಾಲಯದ ಆದೇಶಕ್ಕೆ ವಿರುದ್ಧವಾಗಿವೆ. ಪರಂಪರೆ ಹಾಗೂ ನ್ಯಾಯಾಲಯದ ಆದೇಶಗಳನ್ನು ಧಿಕ್ಕರಿಸುವ ಇಂತಹ ಶಕ್ತಿಗಳ ಮೇಲೆ ನಿಷ್ಠುರ ಕ್ರಮ ಕೈಗೊಳ್ಳಬೇಕೆಂದು ಸಿಪಿಐ(ಎಂ) ಪಕ್ಷವು ಮುಖ್ಯಮಂತ್ರಿ ಧರಂಸಿಂಗ್‌ರವರನ್ನು ಆಗ್ರಹಿಸಿದೆ.

ನ್ಯಾಯಾಲಯದ ಆದೇಶವನ್ನು ಪಾಲಿಸಲು ಸರ್ಕಾರ ಕಟಿಬದ್ಧವಾಗಿರಬೇಕು. ಹಿಂದಿನ ವಿಕೃತಿಗಳನ್ನು ತಿದ್ದುವ ದಿಶೆಯಲ್ಲಿ ಮೈತ್ರಿಕೂಟದ ಸರ್ಕಾರವು ಕಳೆದ ವರ್ಷ ತಳೆದ ನಿಲುವಿನಂತೆ ಈ ವರ್ಷವೂ ದೃಡವಾದ ಕ್ರಮಗಳನ್ನು ಕೈಗೊಳ್ಳಬೇಕು. ಸೂಫಿ ಪರಂಪರೆಯ ಗುಹೆಯನ್ನು ರಕ್ಷಿಸಲು ಅಗತ್ಯವಾದ ಸೂಕ್ತ ರಕ್ಷಣಾ ವ್ಯವಸ್ಥೆ ಮಾಡಬೇಕು.

ಆದರೆ ಈ ವರ್ಷ ರಾಜ್ಯ ಸರ್ಕಾರವು ಹಿಂದಿನ ವರ್ಷದಂತೆ ದೃಢ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂಬ ಭಾವನೆ ಉಂಟಾಗಿದ್ದು ಇಲ್ಲಿಯವರೆಗೂ ಸರ್ಕಾರವು ಬಜರಂಗದಳ ಮುಂತಾದ ಸಂಘಟನೆಗಳು ಹಮ್ಮಿಕೊಂಡಿರುವ ಹವನ-ಹೋಮ, ವಿಗ್ರಹಪೂಜೆ, ಮೆರವಣಿಗೆ ರಾಜಬೀದಿ ಉತ್ಸವದ ಬಗ್ಗೆ ಖಚಿತ ನಿಲುವನ್ನು ಪ್ರಕಟಿಸಿಲ್ಲ. ಅವುಗಳನ್ನು ಸಾರ್ವಜನಿಕರೆದುರು ತೆರೆದಿಟ್ಟು ಜಾಗ್ರತಗೊಳಿಸಿಲ್ಲ. ಇದು ಸರ್ಕಾರದ ಕ್ರಮಗಳ ಬಗ್ಗೆ ಹಲವಾರು ಆತಂಕಕ್ಕೆ ಎಡೆ ಮಾಡಿದೆ.

ಆದ್ದರಿಂದ ಈ ಕೂಡಲೇ ಸರ್ಕಾರವು ಖಚಿತ ನಿಲುವು ಸ್ಪಷ್ಟಪಡಿಸಬೇಕು ಹಾಗೂ ಕೈಗೊಳ್ಳಲಾಗುತ್ತಿರುವ ಕ್ರಮಗಳನ್ನು ಜನರ ನಡುವೆ ಬಹಿರಂಗಪಡಿಸಿ ಕಾರ್ಯಾಚರಣೆಗೆ ಇಳಿಯಬೇಕು. 1975ರ ಹಿಂದಿನ ಆಚರಣೆಗಳಿಗೆ ಮಾತ್ರವೇ ಆಚರಣೆಗಳು ಸೀಮಿತವಿರಬೇಕು ಎಂದು ಸಿಪಿಐ(ಎಂ) ಒತ್ತಾಯಿಸಿದೆ.

ಇವುಗಳ ಉಲ್ಲಂಘನೆಯು ಬಾಬಾಬುಡನ್‌ಗಿರಿಯನ್ನು 'ದಕ್ಷಿಣದ ಅಯೋಧ್ಯಾ' ಮಾಡುವುದಾಗಿ ಬಜರಂಗದಳ - ಬಿಜೆಪಿ ಪಕ್ಷಗಳು ಪ್ರಕಟಿಸಿರುವ ಹಿನ್ನೆಲೆಯಲ್ಲಿ ಎಲ್ಲಾ ರೀತಿಯ ಎಚ್ಚರದ ಕ್ರಮಗಳು ಅತ್ಯಗತ್ಯ ಎಂದು ಸಿಪಿಐ(ಎಂ) ತಿಳಿಸಿದೆ.



ಈ ಲಂಚಕೋರ ಸಂಸದರನ್ನು ಶಿಕ್ಷಿಸಿ

ಸಂಸತ್ತಿನಲ್ಲಿ ಪ್ರಶ್ನೆ ಕೇಳುವುದಕ್ಕಾಗಿ ಹಣ ತೆಗೆದುಕೊಳ್ಳುತ್ತಿರುವ ನಂಬಿಕೆಗೆ ದ್ರೋಹ ಎಸಗಿದ ಚುನಾಯಿತ ಸಂಸದರ ಆಘಾತಕಾರಿ ಚಿತ್ರವನ್ನು ಇಡೀ ದೇಶ ವೀಕ್ಷಿಸಿತು. ಆಜ್‌ತಕ್ ಟಿ.ವಿ.ಚಾನೆಲ್ ನಡೆಸಿದ ವಿಶೇಷ ತನಿಖೆಯಲ್ಲಿ ಹತ್ತು ಜನ ಲೋಕಸಭಾ ಸದಸ್ಯರು ಮತ್ತು ಒಬ್ಬರು ರಾಜ್ಯಸಭಾ ಸದಸ್ಯರು ಒಟ್ಟು 11 ತಪ್ಪಿತಸ್ಥ ಸಂಸದರು ಸಿಕ್ಕಿಬಿದ್ದಿದ್ದಾರೆ. ಇದು ವ್ಯವಸ್ಥೆ ಎಷ್ಟು ಕೀಳುಮಟ್ಟದ ರಾಜಕೀಯ ಅನೈತಿಕತೆಯಲ್ಲಿ ಮುಳುಗುತ್ತಿದೆ ಎಂಬುದರ ಹೊಸ ರೂಪವಾಗಿದೆ.

ಆ ಸಂಸದರಲ್ಲಿ 6 ಜನ ಬಿ.ಜೆ.ಪಿ.ಗೆ ಸೇರಿದವರು. ನಿನ್ನೆಯವರೆಗೆ ವೋಲ್ಕರ್ ವರದಿ ವಿಷಯದಲ್ಲಿ ನೈತಿಕತೆ ಎತ್ತಿ ಹಿಡಿಯುವ ಬಗ್ಗೆ ಹೆಚ್ಚು ಕಟುವಾಗಿ ಕೂಗಾಡುತ್ತಿದ್ದ ಸಂಸದರು, ಇತರೆ ಮೂವರು ಬಹುಜನ ಸಮಾಜ ಪಕ್ಷದವರು. ರಾಷ್ಟ್ರೀಯ ಜನತಾದಳ (ಆರ್.ಜೆ.ಡಿ) ಮತ್ತು ಕಾಂಗ್ರೆಸ್‌ನವರು ಒಬ್ಬೊಬ್ಬರು. ಇದು ಪಕ್ಷಾತೀತವಾಗಿ ಹರಡಿದ ರೋಗ ಎಂಬುದನ್ನು ಎತ್ತಿ ತೋರಿಸಿದೆ. ಇದರಿಂದ ಸಿಪಿಐ(ಎಂ) ಏಕಮಾತ್ರ ಗೌರವಾನ್ವಿತ ಪಕ್ಷವೆಂದು ಮತ್ತೊಮ್ಮೆ ಸಾಬೀತಾಗಿದೆ. ಇದು ಸಹಜವೇ ಏಕೆಂದರೆ ಸಿಪಿಐ(ಎಂ) ರಾಜಕೀಯ ಜನಪರ ಮತ್ತು ದೇಶದ ಅಭಿವೃದ್ಧಿಪರ ರಾಜಕೀಯವಾಗಿದೆ. ಇದು ಆಳುವವರ್ಗಗಳ ಪಕ್ಷಗಳು ಜನರಿಂದ ಮತ್ತು ದೇಶದಿಂದ ದೋಚುವ ಪ್ರವೃತ್ತಿಯಿಂದ ಭಿನ್ನವಾದದ್ದು. ನೇರವಾಗಿ ಸಿಕ್ಕಿಬಿದ್ದಿರುವ ಈ ಸಂಸದರ ಲೋಕಸಭಾ ಪ್ರವೇಶವನ್ನು ಸಂದೀಯ ಸಮಿತಿಯ ವಿಚಾರಣೆ ಮುಗಿಯುವವರೆಗೆ ನಿಷೇಧಿಸಲಾಗಿದೆ. ಮುಂದಿನ ವಾರ ಈಗಿನ ಅಧಿವೇಶನ ಮುಗಿಯುವ ಮುನ್ನ ವಿಚಾರಣೆ ಮುಗಿಯಬೇಕೆಂದು ದೇಶದ ಜನತೆಗೆ ಭರವಸೆಯನ್ನು ಸಂಸತ್ತು ನೀಡಬೇಕಿದೆ. ಮುಂದೆ ಎಂದೂ ಈ ರೀತಿ ಪುನರಾವರ್ತನೆಯಾಗದಂತೆ ಕಠಿಣ ಕ್ರಮವನ್ನು ತೆಗೆದುಕೊಳ್ಳುವುದನ್ನು ಇಡೀ ದೇಶ ನಿರೀಕ್ಷಿಸುತ್ತಿದೆ. ಜನ ಪ್ರತಿನಿಧಿಗಳು ಎಂಬುದಕ್ಕಾಗಿ ವಿನಾಯತಿ ಇಲ್ಲದೆ ಲೋಕಸಭೆ ಅಥವಾ ವಿಚಾರಣಾ ಸಮಿತಿ ನಿರ್ಣಯ ಒಂದು ಮಾದರಿಯಾಗಿ ಹೊರಬರಬೇಕಿದೆ.

ಸಂಸದೀಯ ಪ್ರಜಾಪ್ರಭುತ್ವದ ಅತ್ಯುನ್ನತ ವೇದಿಕೆಯಾದ ಪಾರ್ಲಿಮೆಂಟಿನ ಸದಸ್ಯರು ಈ ಉನ್ನತ ರಾಜಕೀಯ ಸಂಸ್ಥೆಯಲ್ಲಿ ಪ್ರಶ್ನೆಗಳನ್ನು ಕೇಳಲು ಲಂಚ ತೆಗೆದುಕೊಂಡಿರುವ ಅತ್ಯಂತ ನಾಚಿಕೆಗೇಡಿನ ಹಗರಣವು ಬಯಲಾಗಿದೆ. ರಾಜಕೀಯ ನೈತಿಕತೆಯ ಬಗ್ಗೆ ಇನ್ನಿಲ್ಲದ ಅರಚಾಟ ಮಾಡುವ ಭಾರತೀಯ ಜನತಾ ಪಕ್ಷದ ಆರು ಸಂಸದರು ಈ ಲಂಚ ಹಗರಣದಲ್ಲಿ ಸಿಕ್ಕಿಹಾಕಿಕೊಂಡಿದ್ದು ಕೇವಲ ಆಕಸ್ಮಿಕವೇನಲ್ಲ. ಅದು ಆ ಪಕ್ಷ ತಲುಪಿರುವ ನೈತಿಕ ಅದಃಪತನದ ಸಾಕ್ಷಿಯಾಗಿದೆ. ಇಂತಹ ಲಂಚಕೋರ ಪ್ರವೃತ್ತಿಯ ವಿರುದ್ಧ ಕಠಿಣ ಕ್ರಮ ಮತ್ತು ಚಳುವಳಿ ಅಗತ್ಯವಾಗಿದೆ.

ಭ್ರಷ್ಟರು ಎಲ್ಲಾ ಮೂಲಗಳಿಂದಲೂ ಬೆಂಬಲ ಪಡೆದು ಅನೈತಿಕವಾಗಿ ನಡೆದುಕೊಳ್ಳುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಇಲ್ಲಿ ಗಮನಿಸಬೇಕಾದ ಅಂಶ ಬಹಳ ಜನ ಸಂಸದರನ್ನು ಈ ಸೂಕ್ಷ್ಮ ಕಾರ್ಯಾಚರಣೆಯಲ್ಲಿ ಸಂಪರ್ಕಿಸಿದ್ದರೂ ಜಾಲದಲ್ಲಿ ಸಿಕ್ಕಿಬಿದ್ದಿಲ್ಲ. ರಾಜಕೀಯ ವ್ಯವಸ್ಥೆಯನ್ನು ಬಲಗೊಳಿಸಲು ಈ ಕಾರ್ಯಾಚರಣೆ ಹೊಸ ಆಶಯ ಮೂಡಿಸಿದೆ. ಆದಕ್ಕಾಗಿ ಇದು ಸ್ವಾಗತಾರ್ಹ.

ಇಲ್ಲಿ ಎರಡು ಮುಖ್ಯ ಪ್ರಶ್ನೆಗಳನ್ನು ನಾವು ಗಮನಿಸಬೇಕಿದೆ. ಮೊದಲನೆಯದು ಚುನಾಯಿತ ಪ್ರತಿನಿಧಿಗಳನ್ನು ಅನರ್ಹಗೊಳಿಸುವ ಹಕ್ಕು ಬೇಕಿದೆ. ರಾಜಕೀಯ ಅನೈತಿಕತೆ ಮತ್ತು ಭ್ರಷ್ಟಾಚಾರದಲ್ಲಿ ಭಾಗಿಯಾದಂತಹವರನ್ನು ಮತ್ತು ಚುನಾವಣೆ ಸಮಯದಲ್ಲಿ ನೀಡಿದ ಭರವಸೆಗಳನ್ನು ಈಡೇರಿಸಲು ಪ್ರಯತ್ನಿಸದ ಸಂಸದರನ್ನು ವಾಪಾಸ್ ಕರೆಸುವ ಅಧಿಕಾರ ಜನತೆಗೆ ಇರಬೇಕು. ಎರಡನೇಯದು ಸಂಸದರಿಗೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ನೀಡಿರುವ 'ಚುನಾಯಿತ ಪ್ರತಿನಿಧಿಗಳ ಮೇಲೆ ನೇರ ಕಾನೂನು ಕ್ರಮ ಕೈಗೊಳ್ಳುವಂತಿಲ್ಲ' ಎಂಬ ವಿಶೇಷ ರಕ್ಷಣೆ ಬಗ್ಗೆ ಪುನರ್ ಪರಿಶೀಲಿಸುವುದು ತಕ್ಷಣ ಆಗಬೇಕು. ಭ್ರಷ್ಟಾಚಾರ ಮತ್ತು ಇತರೆ ಅನೈತಿಕತೆಗಳಲ್ಲಿ ಭಾಗಿಯಾಗಲು ಈ ರಕ್ಷಣೆ ಪರವಾನಗಿಯಲ್ಲ. ಅದಕ್ಕಾಗಿ ಇದರ ಬದಲಾವಣೆ ಅಗತ್ಯ. "ತಪ್ಪಿತಸ್ಥರ ಮೇಲೆ ಕಾನೂನು ಜರುಗಿಸಲು ಅವಕಾಶ ಇರುವುದು" ತಕ್ಷಣದ ಅವಶ್ಯಕತೆ. ಅದರೊಟ್ಟಿಗೆ ಬಹಳ ದಿನಗಳಿಂದ ಬಾಕಿಯಿರುವ ಚುನಾವಣಾ ಸುಧಾರಣೆಗಳನ್ನು ಜಾರಿ ಮಾಡುವುದರ ಕಡೆ ಗಮನ ಹರಿಸುವುದು ಆಗಬೇಕು.

ಈಗಾಗಲೆ ಜನರ ಮನಸ್ಸಿನಲ್ಲಿ ತುಂಬಿಕೊಂಡಿರುವಂತೆ ರಾಜಕೀಯ ಮತ್ತು ರಾಜಕಾರಣಿಗಳ ಬಗೆಗಿನ ತಿರಸ್ಕಾರ ಮನೋಭಾವ ಹೆಚ್ಚಾಗಲು ಭ್ರಷ್ಟಾಚಾರಗಳು ಪುಷ್ಟಿ ನೀಡುತ್ತವೆ. ಇದು ಅಪಾಯಕಾರಿ ಬೆಳವಣಿಗೆ, ಭ್ರಷ್ಟಾಚಾರ ಹಿಮ್ಮೆಟ್ಟಿಸಲು ಸಾಮೂಹಿಕ ಹೋರಾಟಗಳು ಅಗತ್ಯ. ಹೆಚ್ಚು ಜನಸಮೂಹ ಪಾಲ್ಗೊಳ್ಳುವ ಹೋರಾಟಗಳಿಂದ ಮಾತ್ರ ಈ ವ್ಯವಸ್ಥೆಯ ಬದಲಾವಣೆ ಮತ್ತು ಅನೈತಿಕತೆಗಳ ನಿರ್ಮೂಲನೆ ಸಾಧ್ಯ.

ಉತ್ತಮ ಭವಿಷ್ಯದ ಏಕಮೇವ ಉದ್ದೇಶಕ್ಕಾಗಿ ಈ ವ್ಯವಸ್ಥಿತ ಭ್ರಷ್ಟಾಚಾರದಲ್ಲಿ ಪಾಲ್ಗೊಂಡವರ ಮೇಲೆ ತೀಕ್ಷ್ಣ ಕ್ರಮ ವಹಿಸುವುದೆಂಬ ಆಶಯದೊಂದಿಗೆ ನಾವು ವಿಚಾರಣಾ ಸಮಿತಿಯ ಮೇಲೆ ಭರವಸೆ ಇಡಬೇಕಿದೆ.

ವಿಜ್ಞಾನ, ತಂತ್ರಜ್ಞಾನಕ್ಕೆ ಒತ್ತಾಸೆ ಪಶ್ಚಿಮ ಬಂಗಾಳದ ಬಗ್ಗೆ ಮೆಚ್ಚಿಕೆ

ಇತ್ತೀಚೆಗೆ ದೆಹಲಿಯಲ್ಲಿ ಪ್ರಧಾನ ಮಂತ್ರಿಗಳ ವಿಜ್ಞಾನ ಮತ್ತು ತಂತ್ರಜ್ಞಾನ ಸಲಹಾ ಮಂಡಳಿಯು ವಿವಿಧ ರಾಜ್ಯಗಳ ವಿಜ್ಞಾನ ಮತ್ತು ತಂತ್ರಜ್ಞಾನ ಸಲಹಾ ಸಮಿತಿಗಳ ಸದಸ್ಯರ ಸಭೆಯೊಂದನ್ನು ಕರೆದಿತ್ತು. ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯ ನಿಟ್ಟಿನಲ್ಲಿ ಸರಕಾರದ ನೀತಿ ನಿರೂಪಣೆಗೆ ಪೂರಕವಾಗಿ ಇಂತಹ ಸಭೆಗಳು ನಡೆಯುತ್ತವೆ. ಖ್ಯಾತ ವಿಜ್ಞಾನಿಗಳು ಮತ್ತು ತಂತ್ರಜ್ಞರು ಈ ಸಮಿತಿಯಲ್ಲಿ ಸದಸ್ಯರಿರುತ್ತಾರೆ.

ಈ ಸಭೆಯಲ್ಲಿ ವ್ಯಕ್ತವಾದ ಕೆಲವು ಅಭಿಪ್ರಾಯಗಳು ಗಮನಾರ್ಹವಾಗಿದೆ. ಸಭೆಯಲ್ಲಿ ಪಾಲ್ಗೊಂಡ ಪಶ್ಚಿಮ ಬಂಗಾಳ, ಕೇರಳ ಮತ್ತು ಕರ್ನಾಟಕ ಈ ಮೂರು ರಾಜ್ಯಗಳ ಸಮಿತಿ ಸದಸ್ಯರು ತಮ್ಮ ತಮ್ಮ ರಾಜ್ಯಗಳಲ್ಲಿ ವಿಜ್ಞಾನ, ತಂತ್ರಜ್ಞಾನದ ಬೆಳವಣಿಗೆಗೆ ಸರ್ಕಾರದಿಂದ ಉತ್ತಮ ಹಣಕಾಸು ಬೆಂಬಲ ದೊರೆಯುತ್ತಿದೆ ಎಂದು ಅಭಿಪ್ರಾಯ ನೀಡಿದ್ದಾರೆ.

ಆದರೆ ಅಸ್ಸಾಂ ರಾಜ್ಯದ ಸದಸ್ಯರು ತಮ್ಮ ರಾಜ್ಯದಲ್ಲಿ ವಿಜ್ಞಾನ ತಂತ್ರಜ್ಞಾನ ಬೆಳವಣಿಗೆ ಸಂಬಂಧ ತೀವ್ರ ಹಣಕಾಸು ಕೊರತೆ ಎದುರಾಗಿದೆ. ಸರ್ಕಾರ ಸಾಕಷ್ಟು ಬೆಂಬಲ ನೀಡುತ್ತಿಲ್ಲ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಪಶ್ಚಿಮ ಬಂಗಾಳದ ಸದಸ್ಯರುಗಳು ನೀಡಿದ ಮತ್ತೊಂದು ಅಭಿಪ್ರಾಯ ಮತ್ತಷ್ಟು ಗಮನಾರ್ಹವಾದದ್ದು. ಪಶ್ಚಿಮ ಬಂಗಾಳದಲ್ಲಿ ರಾಜ್ಯ ವಿಜ್ಞಾನ ತಂತ್ರಜ್ಞಾನ ಸಲಹಾ ಸಮಿತಿಗೆ ಇತರ ರಾಜ್ಯಗಳಿಗಿಂತ ಭಿನ್ನವಾಗಿ ರಾಜ್ಯದ ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿದ್ದಾರೆ ಮತ್ತು ಸರ್ಕಾರದಿಂದ ಉತ್ತಮ ಹಣಕಾಸು ಬೆಂಬಲ ನೀಡುತ್ತಿರುವುದು ಮಾತ್ರವಲ್ಲದೇ ಸಮಿತಿಯ ಶಿಫಾರಸ್ಸುಗಳ ಬಗೆಗೆ ಗಂಭೀರ ಕಾಳಜಿ ವಹಿಸಿ ರಾಜ್ಯದಲ್ಲಿ ವಿಜ್ಞಾನ, ತಂತ್ರಜ್ಞಾನದ ಅಭಿವೃದ್ಧಿಗೆ ಸರ್ಕಾರ ಒತ್ತಾಸೆಯಾಗಿ ನಿಂತಿದೆ ಎಂದು ಸದಸ್ಯರು ಮೆಚ್ಚಿಗೆ ಸೂಚಿಸಿದ್ದಾರೆ.

ತ್ರಿಪುರಾ : ಕಾಂಗ್ರೆಸ್‌ಗೇ ತಿರುಗು ಬಾಣವಾದ ಆರೋಪ

ಈ ವರ್ಷದ ಆರಂಭದಲ್ಲಿ (ಜನವರಿ 4ರಂದು) ತ್ರಿಪುರಾದ ರಾಜಧಾನಿ ಅಗರ್ತಲಾದಲ್ಲಿ ಮುಖ್ಯಮಂತ್ರಿಗಳ ನಿವಾಸದ ಸೆಪ್ಟಿಕ್ ಟ್ಯಾಂಕನ್ನು ಸ್ವಚ್ಛಗೊಳಿಸುವಾಗ ಮಾನವ ತಲೆಬುರುಡೆಯ ಒಂದು ಭಾಗ ಸಿಕ್ಕಿದ್ದು ಸುದ್ದಿಯಾಗಿತ್ತು. ತಕ್ಷಣ ಪೊಲೀಸರಿಗೆ ಅದನ್ನು ತಿಳಿಸಲಾಗಿತ್ತು. ಪೊಲೀಸರು ಮತ್ತಷ್ಟು ಶೋಧಿಸಿದಾಗ ಇನ್ನಷ್ಟು ಎಲುಬುಗಳು ಹಾಗೂ ಮಹಿಳೆಯರ ಆಭರಣಗಳ ತುಣುಕುಗಳು ದೊರೆಯಿತು. ಅದು ಸುಮಾರು 15ರಿಂದ 20 ವರ್ಷಗಳ ಹಿಂದೆ ಸತ್ತ ವ್ಯಕ್ತಿಯ ತಲೆಬುರುಡೆ, ಆ ವ್ಯಕ್ತಿ ಮಹಿಳೆಯಾಗಿರಬಹುದು ಎಂದು ಸಂದೇಹಿಸಲಾಗಿತ್ತು.

ಪ್ರಕರಣ ಗಂಭೀರವಾದ್ದರಿಂದ ತ್ರಿಪುರಾ ಎಡರಂಗ ಸರ್ಕಾರ ಅದರ ತನಿಖೆಯನ್ನು ಸಿಬಿಐಗೆ ವಹಿಸಿಕೊಡಲು ನಿರ್ಧರಿಸಿತು. ಅಲ್ಲಿಯವರೆಗೆ ಸಿಐಡಿಗೆ ತನಿಖೆ ನಡೆಸಲು ಹೇಳಲಾಯಿತು. ಪ್ರಕರಣವನ್ನು ಪರಿಶೀಲಿಸಿದ ಸಿಬಿಐ, ಸಿಐಡಿ ತನಿಖೆ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆಯಾದ್ದರಿಂದ ಅದನ್ನು ತಾನು ವಹಿಸಿಕೊಳ್ಳುವ ಅಗತ್ಯವಿಲ್ಲ ಎಂದಿತು.

ಒಂಭತ್ತು ಎಲುಬು ತುಣುಕುಗಳೊಂದಿಗೆ 15 ಪ್ರಶ್ನೆಗಳೊಂದಿಗೆ ಚಂಡೀಘಡ ಕೇಂದ್ರೀಯ ಅಪರಾಧ ತನಿಖೆ ವಿಜ್ಞಾನ (ಫೋರೆನ್ಸಿಕ್ ಸಾಯನ್ಸ್) ಪ್ರಯೋಗಾಲಕ್ಕೆ ಕಳಿಸಿಕೊಡಲಾಯಿತು. ಕಳೆದ ಜೂನ್ ತಿಂಗಳಲ್ಲಿ ಪ್ರಯೋಗಾಲಯ ತ್ರಿಪುರಾ ಸಿಐಡಿಗೆ ಪರೀಕ್ಷಣೆಯ ಮಧ್ಯಂತರ ವರದಿಯನ್ನು ಕಳಿಸಿತು. ಅದರಲ್ಲಿ 6 ಪ್ರಶ್ನೆಗಳಿಗೆ ಉತ್ತರ ಹಾಗೂ ಪ್ರಯೋಗಾಲಯದಲ್ಲಿ ವೈಜ್ಞಾನಿಕ ವಿಧಾನಗಳಿಂದ ರೂಪಿಸಿದ ಆ ವ್ಯಕ್ತಿಯ ಚಿತ್ರವನ್ನು ಕಳಿಸಲಾಗಿತ್ತು. ಈ ಚಿತ್ರವನ್ನು ಅಗರ್ತಲಾದ ಪತ್ರಿಕೆಗಳಲ್ಲಿ ಪ್ರಕಟಿಸಲಾಯಿತು. ಇದನ್ನು ನೋಡಿ ಆ ವ್ಯಕ್ತಿಯನ್ನು ಗುರುತಿಸಲು ಯಾರೂ ಮುಂದೆ ಬರಲಿಲ್ಲ.


ಆದರೆ ಡಿಸೆಂಬರ್ 10ರಂದು ತ್ರಿಪುರಾ ಕಾಂಗ್ರೆಸ್ ಅಧ್ಯಕ್ಷ ಸಮೀರ್ ರಂಜನ್ ಬರ್ಮನ್, ಆ ಚಿತ್ರ 'ರಿನಾ ಥಾ ಪಾ' ಎಂಬ ನೇಪಾಳಿ ಹುಡುಗಿಯದ್ದಾಗಿರಬೇಕು. ಅವಳ ಕುಟುಂಬವನ್ನು ಈ ಪ್ರಕರಣವನ್ನು ಮುಚ್ಚಿ ಹಾಕಲಿಕ್ಕಾಗಿ ರಾಜ್ಯದ ಹೊರಗೆ ಸಾಗಹಾಕಲಾಗಿದೆ. ಆಕೆಯ ಮೇಲೆ ಅತ್ಯಾಚಾರ ನಡೆಸಿ ಸಾಯಿಸಲಾಯಿತು ಎಂದು ಆಪಾದಿಸಿದರು. ಅಲ್ಲದೆ ಆ ಸೆಪ್ಟಿಕ್ ಟ್ಯಾಂಕನ್ನು ಈ ಮೊದಲು ಡಿಸೆಂಬರ್ 29, 2000ರಂದು ಸ್ವಚ್ಛಗೊಳಿಸಿದ್ದಾಗ ಏನೂ ಸಿಕ್ಕಿರಲಿಲ್ಲ. ಈ ಬಗ್ಗೆ ಆರೋಗ್ಯಾಧಿಕಾರಿ ಬಳಿ ದಾಖಲೆಯಿದೆ. ಆದ್ದರಿಂದ ಈ ಕೃತ್ಯ ಡಿಸೆಂಬರ್ 29, 2000ದಿಂದ ಜನವರಿ 4, 2005 ನಡುವೆ ನಡೆದಿರಬೇಕು ಎಂದೂ ಆತ ಆಪಾದಿಸಿದರು. ಅಂದರೆ ಈ ದುಷ್ಕೃತ್ಯ ಈಗಿನ ಮುಖ್ಯಮಂತ್ರಿಗಳು ಆ ನಿವಾಸದಲ್ಲಿ ಇದ್ದಾಗಲೇ ನಡೆದದ್ದು ಎಂಬ ಪರೋಕ್ಷ ದೂಷಣೆ ಅವರದ್ದಾಗಿತ್ತು.

ಈ ಅಧಿಕೃತ ನಿವಾಸದಲ್ಲಿ ಮಾರ್ಚ್ 1998ರಿಂದ ಎಡರಂಗದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ವಾಸವಾಗಿದ್ದಾರೆ. ಅದಕ್ಕೆ ಮೊದಲು 1993ರಿಂದ ದಶರತ್ ದೇಬ್ ವಾಸವಾಗಿದ್ದರು. ಅದಕ್ಕೆ ಮೊದಲು ಕಾಂಗ್ರೆಸ್ ಮುಖ್ಯಮಂತ್ರಿ ಸುಧೀರ್ ರಂಜನ್ ಮಜುಂದಾರ್ ವಾಸವಾಗಿದ್ದಾಗ, ಅವರ ಪಿ.ಡಬ್ಲ್ಯು ಮಂತ್ರಿ ಸುರ್ಜಿತ್ ದತ್ತ ಕೂಡಾ ಈ ಕಟ್ಟಡದ ಒಂದು ಭಾಗದಲ್ಲಿ ವಾಸವಾಗಿದ್ದರು ಎಂದು ತಿಳಿದುಬಂದಿದೆ.

ಆರೋಗ್ಯಾಧಿಕಾರಿಯನ್ನು ವಿಚಾರಿಸಿದಾಗ ಡಿಸೆಂಬರ್ 29,2000ರಂದು ಅದನ್ನು ಸ್ವಚ್ಛಗೊಳಿಸಿದ ಬಗ್ಗೆ ತನ್ನ ಬಳಿ ಏನೂ ದಾಖಲೆಯಿಲ್ಲ ಎಂದು ಸ್ಪಷ್ಟಪಡಿಸಿದರು. 1993ರಿಂದ ಈ ನಿವಾಸದಲ್ಲಿ ಕೆಲಸ ಮಡುತ್ತಿದ್ದ ಒಬ್ಬ ವ್ಯಕ್ತಿ ತನಗೆ ಈ ಟ್ಯಾಂಕನ್ನು ಈ ಹಿಂದೆ ಸ್ವಚ್ಚಗೊಳಿಸಿದ ನೆನಪಿಲ್ಲ ಎಂದಿದ್ದಾನೆ. ಅಂದರೆ ತ್ರಿಪುರಾ ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆ ವಿರೂಪಗೊಳಿಸಿದ ಹೇಳಿಕೆ ಎಂದು ಸಾಬೀತಾಗಿದೆ.

ಕಾಂಗ್ರೆಸ್‌ನ ರಾಜ್ಯ ಅಧ್ಯಕ್ಷರ ಈ ಕಿಡಿಗೇಡಿತನದ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ, ಮತಪ್ರದರ್ಶನಗಳು ನಡೆದಿವೆ. ಈ ವ್ಯಕ್ತಿ ಅಧಿಕಾರದಲ್ಲಿದ್ದ ಅವಧಿಯಲ್ಲಿ 200ಕ್ಕೂ ಹೆಚ್ಚು ಮಹಿಳೆಯರ ಮೇಲೆ ಅತ್ಯಾಚಾರ ನಡೆದಿದ್ದರೂ, ಯಾರೊಬ್ಬರಿಗೂ ಶಿಕ್ಷೆಯಾಗಿಲ್ಲ ಎಂಬುದನ್ನು ಗಮನಿಸಬೇಕು. ಈ ರೀನಾ ಥಾಪಾ.....ಅವರ ಕುಟುಂಬದವರು ಈಗ ಎಲ್ಲಿದ್ದಾರೆ, ಆಕೆಯ ಕೊಲೆ ಹೇಗಾಯಿತು, ಬರ್ಮನ್‌ಗೆ ಅದು ಹೇಗೆ ಗೊತ್ತಾಯಿತು ಎಂಬುದನ್ನು ಜನರಿಗೆ ತಿಳಿಸಬೇಕು ಎಂದು ಜನ ಆಗ್ರಹಿಸುತ್ತಿದ್ದಾರೆ.

ಜಾಗತೀಕರಣದಿಂದ ಬಾರಿ ಉದ್ಯೋಗ ಸೃಷ್ಟಿ ಬಾರಿ ಸಮೃದ್ಧಿ ಎಂದೆಲ್ಲಾ ಆಳುವ ಸರ್ಕಾರಗಳು ಪ್ರಚಾರ ನಡೆಸುತ್ತಿದ್ದರೆ, ವಾಸ್ತವ ಅದಕ್ಕೆ ಸಂಪೂರ್ಣ ತದ್ವಿರುದ್ಧವಾಗಿರುವುದು ಕರ್ನಾಟಕ ರಾಜ್ಯದ ಜನರ ಅನುಭವ. ಜನರ ಈ ಅನುಭವವನ್ನು ಖಚಿತ ಅಂಕಿ ಸಂಖ್ಯೆ ಮಾಹಿತಿಗಳೊಂದಿಗೆ ಲೇಖನವನ್ನಾಗಿಸಿದ್ದಾರೆ ಡಿವೈಎಫ್ಐ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಕಾಂ.ಕೆ.ಎನ್.ಉಮೇಶ್.



ಸುವರ್ಣ ಕರ್ನಾಟಕದ ಚಿತ್ತಾರದಲ್ಲಿ ಉದ್ಯೋಗವೆಲ್ಲಿ?

ಸುವರ್ಣ ಕರ್ನಾಟಕ ರಾಜ್ಯೋತ್ಸವ ಉದ್ಘಾಟನೆ ನೆರವೇರಿಸಿದ ರಾಷ್ಟ್ರಪತಿ ಕಲಾಂರವರು, ಕರ್ನಾಟಕದ ಮುನ್ನೋಟದ ಚಿತ್ತಾರ ಬಿಡಿಸುತ್ತಾ ತಮ್ಮ ಭಾಷಣದಲ್ಲೇ ಕನಿಷ್ಟ 35 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಕನಸನ್ನು ಬಿತ್ತಿದ್ದಾರೆ. ಲೆಕ್ಕಕ್ಕೆ ತಕ್ಷಣ ಸಿಗದ ಇನ್ನೂ ಹತ್ತಾರು ದಶಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಮಾತುಗಳನ್ನು ಆಡಿದ್ದಾರೆ. ಆದರೆ ರಾಜ್ಯದಲ್ಲಿನ ನಿರುದ್ಯೋಗ - ಅದಕ್ಕೆ ಕಾರಣವಾಗಿರುವ ನೀತಿಗಳು, ಅದರಿಂದ ಹೊರಬರುವ ದಾರಿಯ ಪರಿವೆಯೆ ಆ ಆಲೋಚನೆಯ ಹಿಂದೆ ಇದ್ದಂತೆ ಕಾಣದು.

ಆಗಿಂದಾಗ್ಗೆ ಸಿಕ್ಕ ಅವಕಾಶಗಳನ್ನೆಲ್ಲಾ ಬಳಸಿ ಆಳುವ ಸರ್ಕಾರಗಳು ಇಂತಹ ಕನಸುಗಳನ್ನು, ಮಳೆಬಿಲ್ಲುಗಳನ್ನು ರಾಜ್ಯ ಹಾಗೂ ರಾಷ್ಟ್ರದ ಯುವಜನತೆಯ ಮನದಲ್ಲಿ ಮೂಡಿಸುತ್ತಾ ಬಂದಿದ್ದಾರೆ. ಆದರೆ ಇಂತಹ ಕನಸುಗಳನ್ನು ಬಿತ್ತುವ ಈ ಮಂದಿಯ ನೇತೃತ್ವದ ಸರ್ಕಾರಗಳು ಅನುಸರಿಸುತ್ತಾ ಬಂದಿರುವ ನೀತಿಗಳಂತೂ ನಿರುದ್ಯೋಗ ನಿವಾರಿಸುವ ಬದಲು, ಅದನ್ನು ಹೆಚ್ಚಿಸುವ ಅರೆ ಉದ್ಯೋಗಿ-ಗುತ್ತಿಗೆ ಉದ್ಯೋಗಿಗಗಳನ್ನು ಸೃಷ್ಟಿಸುವ ಕಾಯಕದಲ್ಲಿ ನಿರತವಾಗಿವೆ.

ಬಿತ್ತಿದ ಕನಸುಗಳು ಕಮರಿದ್ದು

ಪ್ರಸಕ್ತ ಕೇಂದ್ರ-ರಾಜ್ಯ ಸರ್ಕಾರಗಳು ಅಧಿಕಾರಕ್ಕೆ ಬರುವ ಮೊದಲಿದ್ದ ಕೇಂದ್ರದ ಬಿಜೆಪಿ ನೇತೃತ್ವದ ವಾಜಪೇಯಿ ಸರ್ಕಾರ ಇಂತಹುದೇ 'ವರ್ಷಕ್ಕೆ ಒಂದು ಕೋಟಿ ಉದ್ಯೋಗ ಸೃಷ್ಟಿಸುವ' ಕನಸೊಂದನ್ನು ಬಿತ್ತಿತ್ತು. ಅಂತೆಯೇ ರಾಜ್ಯದ ಕಾಂಗ್ರೆಸ್‌ನ ಕೃಷ್ಣಾ ನೇತೃತ್ವದ ಸರ್ಕಾರ 'ಉಜ್ವಲ ಭಾರತದಲ್ಲಿ ಚೈತನ್ಯಶೀಲ ಕರ್ನಾಟಕ' ಕಟ್ಟುವ ಕನಸನ್ನು ಕಟ್ಟಿಕೊಟ್ಟಿತ್ತು. ಅಂತಹ ಚೈತನ್ಯಶೀಲ ಕರ್ನಾಟಕಕ್ಕೆ ಅವರು ತೋರಿದ ಹಾದಿ ಗ್ರಾಮೀಣ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಲು ಸರ್ಕಾರಿ ಕೃಷಿ ಹಾಗೂ ತೋಟಗಾರಿಕಾ ಇಲಾಖೆ ಒಡೆತನದ ಕೃಷಿಫಾರಂ, ತೋಟಗಾರಿಕಾ ಫಾರಂಗಳನ್ನು ನಿರುದ್ಯೋಗಿಗಳಿಗೆ ಗುತ್ತಿಗೆ ನೀಡುವುದು. ವಿದ್ಯುತ್ ಇಲಾಖೆ - ಸರಬರಾಜು ಕಂಪನಿಗಳಿಗೆ ಖಾಯಂ ನೌಕರರನ್ನು ನೇಮಕ ಮಾಡುವ ಬದಲು ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ವಿದ್ಯುತ್ ಪ್ರತಿನಿಧಿಗಳನ್ನು (GVP) ನೇಮಕ ಮಾಡುವುದು, ಮುಂತಾದ ಹತ್ತಾರು ನೂರಾರು ಕ್ರಮಗಳು! ಕೃಷ್ಣಾರವರ 5 ಬಜೆಟ್ ಭಾಷಣದಲ್ಲೂ 'ಚೈತನ್ಯಶೀಲ ಕರ್ನಾಟಕ' ಕಟ್ಟುವ ಉದ್ದೇಶದೊಂದಿಗೆ ಆರಂಭವಾಗುತ್ತಿದ್ದದ್ದು ಅಂತ್ಯವಾಗುತ್ತಿದ್ದದ್ದು 'ಉದ್ಯೋಗ ಕಡಿತ' (Down Sizing) ದ ಪಣದೊಂದಿಗೆ.

ಬದಲಾದ ನೀತಿಗಳು

ರಾಜ್ಯದಲ್ಲಿನ ಪ್ರಸಕ್ತ ಕಾಂಗ್ರೆಸ್ - ಜೆಡಿ(ಎಸ್) ನೇತೃತ್ವದ ಸಮ್ಮಿಶ್ರ ಸರ್ಕಾರ ಈ ನೀತಿಗಳ ಜಾಡಿನಿಂದ ಹೊರಬಂದಿಲ್ಲ. ಕೃಷ್ಣಾರವರ ಮಾತುಗಳೇ ಈ ಸರ್ಕಾರದ 2 ಬಜೆಟ್ ಭಾಷಣದಲ್ಲೂ ಹೊರಹೊಮ್ಮಿವೆ. ಒಂದೇ ವ್ಯತ್ಯಾಸವೆಂದರೆ ಅಂತ್ಯದ ಪದಬಳಕೆ ಬದಲಾಗಿದೆ. 'ಉದ್ಯೋಗ ಕಡಿತ'(Down Sizing) ಪದದ ಬದಲು 'ಉದ್ಯೋಗ ಗಾತ್ರ ಸರಿಪಡಿಸುವಿಕೆ' (Right Sizing) ಪದ ಬಳಕೆಯಾಗಿದೆ. ಅರ್ಥ ಒಂದೇ ಆದರೆ ಪದ ಬಳಕೆ ಮಾತ್ರ ಬೇರೆ! ಇದಕ್ಕೆ ಪುಷ್ಟಿಯೆಂಬಂತೆ ಇತ್ತೀಚಿನ ವಿಧಾನಮಂಡಲ ಅಧಿವೇಶನದಲ್ಲಿ ಮುಖ್ಯಮಂತ್ರಿಗಳು 20,167 ಸರ್ಕಾರಿ ಹುದ್ದೆಗಳನ್ನು ಆಡಳಿತ ಸುಧಾರಣೆಯ ಭಾಗವಾಗಿ ಕಡಿತಗೊಳಿಸುವ ಪ್ರಕಟಣೆ ಮಾಡಿದ್ದಾರೆ. ವಿವಿಧ ರೀತಿಯ ವಿದ್ಯೆ ಪಡೆದ ನಿರುದ್ಯೋಗಿಗಳು, ರಾಜ್ಯದ ವಿವಿಧ ಇಲಾಖೆಗಳಡಿ ಕೆಲಸ ಮಾಡುತ್ತಿರುವ ಅರೆ ಉದ್ಯೋಗಿಗಳು ಉದಾ: ನಿರುದ್ಯೋಗಿ ಶಿಕ್ಷಕರು ವಯೋಮಿತಿಯ ಆದ್ಯತೆಗಾಗಿ, ಗ್ರಾಮ ವಿದ್ಯುತ್ ಪ್ರತಿನಿಧಿಗಳು, ಪರವಾನಗಿ ಭೂಮಾಪಕರು, ಆರೋಗ್ಯ ಇಲಾಖೆಯ ತಾಂತ್ರಿಕ ಸಿಬ್ಬಂದಿ, ವಿವಿಧ ಇಲಾಖೆಗಳಲ್ಲಿನ ಗುತ್ತಿಗೆ ನೌಕರರು, ಶಿಕ್ಷಣ ಇಲಾಖೆಯ ಅರೆಕಾಲಿಕ ಸಿಬ್ಬಂದಿ, ಜೆಓಸಿ ಉಪನ್ಯಾಸಕರು ಮುಂತಾದವರು ಸಾವಿರಾರು ಸಂಖ್ಯೆಯಲ್ಲಿ ಪ್ರತ್ಯೇಕ ಹೋರಾಟಗಳನ್ನು ನಡೆಸಿ ಖಾಯಮಾತಿಗಾಗಿ, ಸೇವಾಭದ್ರತೆಗಾಗಿ ಬೆಂಗಳೂರಿಗೆ ಆಗಮಿಸಿ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ಇಂತಹ ಪ್ರಕಟಣೆಯನ್ನು ಮುಖ್ಯಮಂತ್ರಿಗಳು ಮಾಡಿದ್ದಾರೆ. ಇದರ ಅರ್ಥ ಸರ್ಕಾರ ಬದಲಾದರು, ಉದ್ಯೋಗ ಕಡಿತ ಯೋಜನೆ ಮಾತ್ರ ಬದಲಾಗಿಲ್ಲ ಎಂಬುದೇ ಆಗಿದೆ.



ರಾಜ್ಯದಲ್ಲಿ ಆಯ್ದ ಬೆಳೆಗಳ ಉತ್ಪಾದನೆ (ಲಕ್ಷ ಮೆಟ್ರಿಕ್ ಟನ್‌ಗಳಲ್ಲಿ)			
ನಂ.	ಬೆಳೆಗಳು	2001-02	2003-04
1.	ಏಕದಳ ಧಾನ್ಯ	79.45	60.69
2.	ದ್ವಿದಳ ಧಾನ್ಯ	7.52	5.77
3.	ಆಹಾರ ಧಾನ್ಯ	86.97	66.46
4.	ಕಬ್ಬು	330.17	158.93
5.	ಹತ್ತಿ (ಲಕ್ಷ ಬೇಲ್)	6.12	3.13
6.	ರೇಷ್ಮೆ ಗೂಡು (ಮೆ.ಟನ್)	73,800	44,700

ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

ರಾಜ್ಯದಲ್ಲಿ 2004 ರವರೆಗಿನ ಕಳೆದ 3 ವರ್ಷಗಳಲ್ಲಿ ಆಯ್ದ ಬೆಳೆಗಳ ಉತ್ಪಾದನೆಗೆ ಏಕದಳ ಧಾನ್ಯದಿಂದ ಹಿಡಿದು ಆಹಾರ ಧಾನ್ಯ, ಎಣ್ಣೆಕಾಳು, ಕಬ್ಬು, ಹತ್ತಿ, ತಂಬಾಕು ಹಾಗೂ ಮೀನು, ಮೊಟ್ಟೆ, ಮಾಂಸ, ಹಾಲು, ಉಣ್ಣೆ, ರೇಷ್ಮೆ ಬೆಳೆ-ಗೂಡು ಮುಂತಾದ ಎಲ್ಲದರ ಉತ್ಪಾದನೆಯು ಗಣನೀಯವಾಗಿ ಕಡಿಮೆ ಯಾಗಿದೆ. ಉತ್ಪಾದನೆ ಕಡಿಮೆಯಾಯಿತೆಂದರೆ, ಅದನ್ನೇ ನೆಚ್ಚಿದ ಜನರ ಉದ್ಯೋಗಗಳು ನಾಶವಾಯಿತು ಎಂದಲ್ಲದೆ ಬೇರೇನು ಅಲ್ಲಾ! (ಸುಮಾರು 4,70,000 ಗ್ರಾಮೀಣ ಯುವಜನತೆ ರೇಷ್ಮೆ ಕೃಷಿ ಮಾಡುವುದನ್ನೇ ಕಳೆದ 3 ವರ್ಷಗಳಲ್ಲಿ ಕೈಬಿಟ್ಟಿದ್ದಾರೆ) ಇದರ ಪರಿಣಾಮವೇ ಬೆಂಗಳೂರು, ಹೈದ್ರಾಬಾದ್, ಪೂನಾ, ಬಾಂಬೆ ಕಡೆಗೆ ಸಾವಿರಾರು ಸಂಖ್ಯೆಯಲ್ಲಿ ಗ್ರಾಮೀಣ ನಿರುದ್ಯೋಗಿಗಳು ಉದ್ಯೋಗ ಅರಸಿ ವಲಸೆ ಬಂದಿದ್ದು.

ಇಂತಹ ಪರಿಸ್ಥಿತಿ ಗ್ರಾಮೀಣ ಕರ್ನಾಟಕದ್ದಾದರೆ, ನಗರ ಪ್ರದೇಶದ ಸ್ಥಿತಿಯೇನೂ ಭಿನ್ನವಾಗಿಲ್ಲ! ಬೆಂಗಳೂರಿನ ಹೊಸೂರು ರಸ್ತೆಯಲ್ಲಿನ ಮೈಕ್ರೊಪ್ಯಾಕ್ (Micropac) ಹೊರದೇಶದಿಂದ ಆಮದಾಗುವ Microchip ಬೆಲೆ ಪೈಪೋಟಿಯಲ್ಲಿ ಪೋಟಿ ಮಾಡಲಾಗದೆ, ಉತ್ಪಾದನೆ ನಿಲ್ಲಿಸಿ, ಹೊರದೇಶದ ಮಾಲಿನ ಏಜೆಂಟ್ ಆಗಿದೆ. ಕಾರ್ಮಿಕರಿಗೆ ವಿಆರ್‌ಎಸ್(ಸ್ವಯಂ ನಿವೃತ್ತಿ) ನೀಡಿ ಮನೆಗೆ ಕಳುಹಿಸಿದೆ. ಮೈಸೂರು ರಸ್ತೆಯಲ್ಲಿ 'ಮೈಸೂರು ಫೀಡ್ಸ್' ಕಾರ್ಮಿಕರಿಗೆ ವಿಆರ್‌ಎಸ್ ನೀಡಿದ ಪರಿಣಾಮ, ತಿಂಗಳಿಗೆ ರೂ. 4 ರಿಂದ 6 ಸಾವಿರ ಸಂಬಳ ಪಡೆಯುತ್ತಿದ್ದ ಕಾರ್ಮಿಕ ಇಂದು ಪ್ರತಿಷ್ಠಿತ ಕಾನೂನು ಕಾಲೇಜಿನ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದಾನೆ. ಅದು ತಿಂಗಳಿಗೆ ರೂ. 1,500 ರಿಂದ 2000 ಸಂಬಳಕ್ಕೆ. ಉಳಿದ ಆದಾಯ ಸರಿದೂಗಿಸಲು ಹೆಂಡತಿಯನ್ನು ಗಾರ್ಮೆಂಟ್ಸ್ ಕಾರ್ಖಾನೆಗೆ ರೂ. 1,000 ಕ್ಕೆ ಕೆಲಸಕ್ಕೆ ಹಚ್ಚಿದ್ದಾನೆ. ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಸಣ್ಣ ಕೈಗಾರಿಕೆಗಳು, ದೊಡ್ಡ ಕೈಗಾರಿಕೆಗಳು ಮುಚ್ಚಿ ಉದ್ಯೋಗಸ್ಥರೇ ನಿರುದ್ಯೋಗಿಗಳಾಗುತ್ತಿದ್ದಾರೆ ಅಥವಾ ಖಾಯಂ ಕಾರ್ಮಿಕರು, ಗುತ್ತಿಗೆ ಕಾರ್ಮಿಕರಾಗಿ, ಅರೆ ಉದ್ಯೋಗಿಗಳಾಗಿ ಮಾರ್ಪಡುತ್ತಿದ್ದಾರೆ. ಹೀಗೆ ಕೆಲಸ ಕಳೆದುಕೊಂಡು, ದುಡಿಯುವ ವಯಸ್ಸಿನಲ್ಲೇ ನಿರುದ್ಯೋಗಿಗಳಾಗಿರು ವವರು ಅನೇಕ ಮಂದಿ ಆತ್ಮಹತ್ಯೆಯ ಹಾದಿ ಹಿಡಿದಿದ್ದಾರೆ.

ಹಾಲು, ಮೊಟ್ಟೆ, ಉಣ್ಣೆ, ಮಾಂಸ ಉತ್ಪಾದನೆ			
ನಂ.	ವಸ್ತುಗಳು	2001-02	2003-04
1.	ಹಾಲು (ಸಾವಿರ ಟನ್)	4,784	3,857
2.	ಮೊಟ್ಟೆ (ದಶಲಕ್ಷ)	20,273	17,277
3.	ಉಣ್ಣೆ (ಲಕ್ಷ ಕೆ.ಜಿ.)	57.57	53.55
4.	ಮಾಂಸ (ಸಾವಿರ ಟನ್)	99.37	97.22

ಬಂಡವಾಳ ಹರಿದುಬರುತ್ತಿದೆ, ಉದ್ಯೋಗ ಲಕ್ಷಗಳಲ್ಲಿ ಸೃಷ್ಟಿಯಾಗುತ್ತಿವೆ ಎಂದು ದಿನನಿತ್ಯ ಬೊಬ್ಬೆ ಹೊಡೆಯುವ ಆಳರಸರ ಮಾತಿಗೆ ಇದೋ ಇಲ್ಲಿದೆ ಉತ್ತರ

ರಾಜ್ಯದಲ್ಲಿ ಪ್ರಸ್ತುತ (2003-04) 17,43,092 ವಿದ್ಯಾವಂತ ನಿರುದ್ಯೋಗಿಗಳು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಕೆಲಸ ಅರಸಿ ಹೆಸರು ನೊಂದಾಯಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಎಲ್ಲಾ ನೇಮಕಾತಿಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕವೇ ಮಾಡಿಕೊಳ್ಳಬೇಕೆಂಬ ನೀತಿ ಕಡ್ಡಾಯ ಮಾಡುವ ಬದಲು 'ಉದ್ಯೋಗ ಪಾರ್ಕ್' ಸ್ಥಾಪಿಸುವ, ಉದ್ಯೋಗ ಮೇಳಗಳನ್ನು ನಡೆಸುವ ಕೆಲಸದಲ್ಲಿ ಸರ್ಕಾರ ನಿರತವಾಗಿದೆ. ಪರಿಣಾಮವಾಗಿ ನೊಂದಾಯಿಸಿಕೊಳ್ಳುವವರು ನೊಂದಾಯಿಸಿ ಕೊಳ್ಳುವುದನ್ನೇ ಬಿಟ್ಟಿದ್ದಾರೆ.

ನೇಮಕಾತಿ ಮೇಲೆ ನಿರ್ಬಂಧ ಹೇರಿ, ನೇಮಕಾತಿಯನ್ನೇ ನಿಲ್ಲಿಸಿರುವ ಕಾರಣ, ಯಾವುದೇ ಸಾವಿರ ಸಂಖ್ಯೆಯ ಶಿಕ್ಷಕರ ಅಥವಾ ಪೊಲೀಸ್ ಪೇದೆಯ ಕೆಲಸಕ್ಕೆ ಅರ್ಜಿ ಕರೆದರೆ ಸಾಕು, ಹತ್ತಾರು ಸಾವಿರ ಸಂಖ್ಯೆಯಲ್ಲಿ ಅರ್ಜಿ ಹಾಕುವ ನಿರುದ್ಯೋಗಿಗಳಿದ್ದಾರೆ. ಇತ್ತೀಚೆಗೆ ಸುಮಾರು 550 ಎಫ್‌ಡಿಎ ಕೆಲಸಕ್ಕೆ ಅರ್ಜಿಕರೆದರೆ ನಾಲ್ಕು ಲಕ್ಷ ಪದವೀಧರರು ಅರ್ಜಿ ಹಾಕಿದ್ದಾರೆ. 4,767 ಪ್ರಾಥಮಿಕ ಶಿಕ್ಷಕರ ಹುದ್ದೆಗೆ ಅರ್ಜಿ ಕರೆದರೆ ಸುಮಾರು 58,000 ಜನ ಅರ್ಜಿ ಹಾಕಿದ್ದಾರೆ. ಈ ಮೂಲಕ ಅರ್ಜಿ ಶುಲ್ಕ, ಪೋಸ್ಟರ್ ಆರ್ಡರ್, ಡಿ.ಡಿ. ಹೆಸರಿನಲ್ಲಿ ಕೋಟಿಗಟ್ಟಲೆ ಹಣ ರಾಜ್ಯದ ಬೊಕ್ಕಸ ಸೇರುತ್ತಿದೆ. ನಿರುದ್ಯೋಗಿಗಳನ್ನು ಹಿಂಡಿ ಹಿಪ್ಪೆ ಮಾಡುವ ಪರಿ ಇದಾಗಿದೆ.

ಗುಲಾಮರಲ್ಲ

ಸರ್ಕಾರಿ ಸರ್ವೆ ಇಲಾಖೆಯಲ್ಲಿ ಖಾಯಂ ಸರ್ವೆಯರುಗಳು ಮಾಡಬೇಕಾದ ಕೆಲಸವನ್ನು ಜೆಓಸಿ ಸರ್ವೆಯರ್ ಕೋರ್ಸ್ ಮುಗಿಸಿದವರಿಗೆ, ಮೂರು ತಿಂಗಳ ತರಬೇತಿ ನೀಡಿ, ಪರವಾನಗಿ ನೀಡಿ, ಪರವಾನಗಿ ಭೂಮಾಪಕರನ್ನಾಗಿಸಿ ಸರ್ಕಾರ ದುಡಿಸಿಕೊಳ್ಳುತ್ತಿದೆ. ಆದರೆ ಸಂಬಳದ ಪ್ರಶ್ನೆಯಿಲ್ಲ. ಅರೆ ಉದ್ಯೋಗಿಗಳ ಸಾಲಿಗೆ ಈ 2,000 ಪರವಾನಗಿ ಭೂಮಾಪಕರನ್ನು ಸೇರ್ಪಡಿಸಿದ್ದಾರೆ. ಅಂತೆಯೇ ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಮೀಟರ್ ಓದುವ, ಬಿಲ್ ನೀಡುವ, ಹಣ ವಸೂಲಿ ಮಾಡುವ ಗ್ರಾಮ ವಿದ್ಯುತ್ ಪ್ರತಿನಿಧಿಗಳು ರಾಜ್ಯದಲ್ಲಿ 5,000 ಮಂದಿಯಿದ್ದಾರೆ. ಅವರೂ ಅರೇ ಉದ್ಯೋಗಿಗಳೇ. ಖಾಯಂ ಉದ್ಯೋಗಿಗಳು ಮಾಡಬೇಕಾದ ಎಲ್ಲಾ ಕೆಲಸ ಮಾಡುತ್ತಾರೆ. ಆದರೆ ಸಂಬಳ ಇಲ್ಲ - ಸೇವಾ ಭದ್ರತೆ ಇಲ್ಲ, ಅವರು ಕೇವಲ ಕಮಿಷನ್ ಏಜೆಂಟರು ಮಾತ್ರ. ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ನೀಡಲು ಆರಂಭಿಸಿದ 'ಮಾಹಿತಿ ಸಿಂಧು' ಯೋಜನೆಯಡಿಯ ಶಿಕ್ಷಕರು ಬಹುರಾಷ್ಟ್ರೀಯ ಕಂಪನಿಗಳಾದ NIIT, Aptech, Edu.comಗಳಿಗೆ ಗುಲಾಮರಂತೆ ದುಡಿಯುತ್ತಿದ್ದಾರೆ. ಸರ್ಕಾರದ ಹಣದಲ್ಲಿ ಕಂಪನಿಗಳನ್ನು ಕೊಬ್ಬಿಸಲು ರಾಜ್ಯದಲ್ಲಿ 2000 ಮಾಹಿತಿಸಿಂಧು

ರಾಜ್ಯದಲ್ಲಿ ಸಣ್ಣ ಕೈಗಾರಿಕಾ ಘಟಕಗಳು - ಬಂಡವಾಳ - ಉದ್ಯೋಗ			
ನಂ.	ಸೂಚಕ	2001-02	2003-04
1.	ನೊಂದಾಯಿತ ಸಣ್ಣ ಕೈಗಾರಿಕೆಗಳು	16,964	12,220
2.	ಬಂಡವಾಳ ಹೂಡಿಕೆ (ಲಕ್ಷ ರೂ.ಗಳಲ್ಲಿ)	47,883.60	37,054
3.	ಉದ್ಯೋಗ	73,195	56,790

ಆಧಾರ: ಕೈಗಾರಿಕಾ ಮತ್ತು ವಾಣಿಜ್ಯ ನಿರ್ದೇಶನಾಲಯ,ಬೆಂಗಳೂರು.

→

ತೀವ್ರ ಕೈಗಾರೀಕರಣವೇ ನಿರುದ್ಯೋಗಕ್ಕೆ ನಿಜವಾದ ಮದ್ದು

ಭೂ ಸುಧಾರಣೆ - ಕೈಗಾರಿಕೀಕರಣದ ಕೀಲಿಕೈ

ನಮ್ಮ ಸಮಾಜದ ಅಗಾಧ ಸಂಖ್ಯೆಯ ನಿರುದ್ಯೋಗಿಗಳನ್ನು ಒಳಗೆ ಸೆಳೆದುಕೊಂಡು ಅವರಿಗೆ ಉದ್ಯೋಗ ನೀಡಬಲ್ಲ ಅಪಾರ ಚೈತನ್ಯವುಳ್ಳ ಕ್ಷೇತ್ರ ಕೈಗಾರಿಕಾ ಕ್ಷೇತ್ರ. ದುಡಿಮೆಗೆ ತಕ್ಕ ಪ್ರತಿಫಲ ದೊರೆಯದ ಕೋಟ್ಯಾಂತರ ಅಸಂಘಟಿತ ಕಾರ್ಮಿಕರು - ನೌಕರರ ಆರ್ಥಿಕ ದೌರ್ಬಲ್ಯ ಮತ್ತು ಪರಿಣಾಮಕಾರಿ ಭೂಸುಧಾರಣೆಯಿಲ್ಲದ ಪರಿಸ್ಥಿತಿಯಲ್ಲಿ ರಾಜ್ಯದ ಮತ್ತು ದೇಶದ ಕೋಟ್ಯಾಂತರ ಕೃಷಿ ಕೂಲಿಕಾರರ, ಬಡರೈತರ ನಿಕೃಷ್ಟ ಬದುಕು ಮತ್ತು ಈ ದುಡಿಯುವ ಜನ ವಿಭಾಗಗಳ ಕೊಂಡುಕೊಳ್ಳುವ ಶಕ್ತಿಯ ಬಲಹೀನತೆಯು ಸಮಾಜದ ತೀವ್ರ ಕೈಗಾರಿಕೀಕರಣಕ್ಕೆ ಇರುವ ಪ್ರಮುಖ ಅಡ್ಡಿಯಾಗಿದೆ. ಭೂಮಿ ಇಲ್ಲದವರಿಗೆ ಭೂಮಿ ಹಂಚುವ ಪರಿಣಾಮಕಾರಿ ಭೂಸುಧಾರಣೆ ಸಮಾಜದ ಸಮಗ್ರ ಅಭಿವೃದ್ಧಿಯ ಹೆಬ್ಬಾಗಿಲನ್ನು ತೆರೆಯುತ್ತದೆ.

ಆರ್.ರಾಮಕೃಷ್ಣ

ಯಾವುದೇ ಕೈಗಾರಿಕೆ ಉಳಿಯಬೇಕಾದರೆ ಮತ್ತು ಬೆಳೆಯಬೇಕಾದರೆ ಜನರು ಉತ್ಪಾದಿಸಿದ ಉತ್ಪನ್ನಗಳನ್ನು ಕೊಂಡುಕೊಳ್ಳಬೇಕು. ವಸ್ತುವನ್ನು ಜನ ಕೊಂಡುಕೊಳ್ಳಬೇಕಾದರೆ ಅವರ ಬಳಿ ಹಣವಿರಬೇಕು. ಅಂದರೆ ಜನರಿಗೆ ಕೊಂಡುಕೊಳ್ಳುವ ಸಾಮರ್ಥ್ಯವಿರಬೇಕು. ಇಲ್ಲವಾದರೆ ಉತ್ಪನ್ನಗಳು ಮಾರುಕಟ್ಟೆಯಲ್ಲಿಯೇ ಉಳಿಯುತ್ತವೆ. ಬೇಡಿಕೆ ಕುಸಿಯುತ್ತದೆ. ಇರುವ ಕೈಗಾರಿಕೆಗಳೂ ಮುಚ್ಚುತ್ತವೆ. ಇಲ್ಲವೇ ಬಿಕ್ಕಟ್ಟಿಗೆ ಗುರಿಯಾಗುತ್ತವೆ. ಉದ್ಯೋಗವಿದ್ದ ಕಾರ್ಮಿಕರೇ ನಿರುದ್ಯೋಗಿಗಳಾದರೆ ಸಮಾಜದಲ್ಲಿ ಜನರ ಕೊಂಡುಕೊಳ್ಳುವ ಶಕ್ತಿ ಮತ್ತಷ್ಟು ಕುಸಿಯುತ್ತದೆ. [illegible]ಯುವ ಜನರ ಆದಾಯ ಕೈಗಾರಿಕಾ ಬಿಕ್ಕಟ್ಟಿನ ಮೇಲೆ ಮತ್ತಷ್ಟು ಪರಿಣಾಮ ಬೀರುತ್ತದೆ.

ಇದು ಒಂದು ಬಗೆಯ ವಿಷಚಕ್ರ. ತನ್ನ ಬಾಲವನ್ನೇ ನುಂಗುತ್ತಾ ಬರುವ ಹಾವಿನಂತೆ. ಇದು ಬಂಡವಾಳಶಾಹಿ ಸಮಾಜದ ಬಿಕ್ಕಟ್ಟು, ಇಂತಹ ಬಿಕ್ಕಟ್ಟೇ ನಮ್ಮ ಸಮಾಜವನ್ನು ಈಗ ಆವರಿಸಿರುವುದು. ನಮ್ಮ ಕರ್ನಾಟಕ ರಾಜ್ಯದ ನಿರ್ಧಿಷ್ಟ ಉದಾಹರಣೆಯನ್ನೇ ನಾವು ನೋಡಬಹುದು.

ಮತ್ತೊಂದೆಡೆ ನಮ್ಮ ರಾಜ್ಯದ ಇತರ ದುಡಿಯುವ ಜನವಿಭಾಗಗಳ ಕತೆ ಏನಾಗಿದೆ ಎಂದು ನೋಡೋಣ. ರಾಜ್ಯದಲ್ಲಿ ಅಂಗನವಾಡಿ ನೌಕರರು ಪಂಚಾಯತ್ ನೌಕರರು ಬಿಸಿ ಊಟದ ನೌಕರರು, ಸಾಕ್ಷರತಾ ಪ್ರೇರಕರು, ರಾಜ್ಯದ ಹತ್ತಾರು ಇಲಾಖೆಗಳಲ್ಲಿ ಗುತ್ತಿಗೆ ನೌಕರರಾಗಿ ಇಲ್ಲವೇ, ಹಂಗಾಮಿ ನೌಕರರಾಗಿ ದುಡಿಯುತ್ತಿರುವ ಲಕ್ಷಾಂತರ ದುಡಿಯುವ ಜನರು ಸರ್ಕಾರವೇ ನಿದಗಿಪಡಿಸಿರುವ ಕನಿಷ್ಟ [illegible]ಲಿಯೂ ದೊರೆಯದೆ ಎಷ್ಟೋ ಲಕ್ಷಗಳಷ್ಟು ಜನ 'ಗೌರವ ಧನ' ಎಂದು ಕರೆಯಲಾಗುವ ಅತ್ಯಂತ ನಿಕೃಷ್ಟ ವೇತನವೂ ಸರಿಯಾಗಿ ಸಿಗದೆ ನಿರಂತರ ಬವಣೆಯಲ್ಲೆ ಹೇಗೋ ಕಾಲ ದೂಡುತ್ತಿದ್ದಾರೆ.

ಇಂತಹ ಲಕ್ಷ ಲಕ್ಷ ದುಡಿಯುವ ಜನರ ಕೈಯಲ್ಲಿ ಅವರ ಕನಿಷ್ಟ ಜೀವನದ ಅಗತ್ಯಗಳಿಗಾದರೂ ಹಣ ಹರಿದಾಡದೇ ಹೋದರೆ ರಾಜ್ಯದ ಕೈಗಾರಿಕಾ ಉತ್ಪನ್ನಗಳಿಗೆ ಬೇಡಿಕೆ ಬರುವ ಪರಿಯೆಂತು? ಕೈಗಾರಿಕಾ ಬೆಳವಣಿಗೆಯು ಕುಂಠಿತವಾಗದೇ ಬೇರೆ ಇನ್ನೇನಾದೀತು.

ಈ ಮೇಲೆ ಹೆಸರಿಸಿದ ನೌಕರ ಕಾರ್ಮಿಕ ವರ್ಗಕ್ಕೆ 'ಗೌರವಪೂರ್ಣ' ವೇತನ ನೀಡಬೇಕಾದರೆ ಸರ್ಕಾರದ ಬೊಕ್ಕಸಕ್ಕೆ 'ಧಕ್ಕೆ'ಬರುತ್ತದೆ. ಆಗ ಸರ್ಕಾರ ತೆರಿಗೆ ಕೊಡಲು ಸಮರ್ಥರಾದ ಅನುಕೂಲಸ್ಥರು, ಶ್ರೀಮಂತ ವಿಭಾಗದ ಜನರು ಕಂಪನಿಗಳ ಮೇಲೆ ತೆರಿಗೆ ಹಾಕಬೇಕಾಗುತ್ತದೆ. "ಹಸಿದವನಿಗೆ ಗಂಜಿ ಸಿಗದಿದ್ದರೂ ಭೂರಿ ಭೋಜನದ ಸವಿ ಸವಿಯುತ್ತಿರುವವನಿಗೆ ಮತ್ತಷ್ಟು ಸಿಹಿ ಸುರಿಯಿರಿ" ಎನ್ನುವ ಜಾಗತೀಕರಣ ಯುಗದಲ್ಲಿ ಶ್ರೀಮಂತ ವಿಭಾಗ[illegible] ಮೇಲೆ ತೆರಿಗೆ ಹಾಕಲು ಸರ್ಕಾರಗಳು ಸಿದ್ಧವಿಲ್ಲ. ಇದು ಸಮಸ್ಯೆಯ ಒಂದು ಮುಖ ಮಾತ್ರ. ನೇರವಾಗಿ ಸರ್ಕಾರದ ಬೊಕ್ಕಸಕ್ಕೆ ಏನೂ ಹೊರೆಯಿಲ್ಲದಂತಹ ವಿಚಾರಗಳಲ್ಲೂ ಸರ್ಕಾರ ಜನಪರವಾಗಿ ಯೋಚಿಸಲು, ಜನರ ಕೊಳ್ಳುವ ಶಕ್ತಿ ಆದಾಯ ಹೆಚ್ಚಿಸಲು ಸಿದ್ಧವಿಲ್ಲ. ರಾಜ್ಯದಲ್ಲಿ ಅಸಂಖ್ಯಾತ ಉದ್ದಿಮೆಗಳಲ್ಲಿ ದುಡಿಯುವ ಕಾರ್ಮಿಕ ವರ್ಗ ಕನಿಷ್ಟ ಕೂಲಿ ದೊರೆಯದೇ ಕಾರ್ಮಿಕ ಸೌಲಭ್ಯಗಳಿಲ್ಲದೆ ನರಳುತ್ತಿದೆ. ಇಲ್ಲಿ ಕನಿಷ್ಟ ಕೂಲಿ ಕಾರ್ಮಿಕ ಕಾಯ್ದೆ ಜಾರಿ ಮಾಡಬೇಕಾದ ವಿಭಾಗ ಮಾಲೀಕವರ್ಗ. ಸರ್ಕಾರ ತನ್ನ ಕಾರ್ಮಿಕ ಇಲಾಖೆಯ ಮುಖಾಂತರ ಈ ಅಸಂಘಟಿತ ವಲಯಕ್ಕೆ ದಕ್ಕಬೇಕಾದ ನ್ಯಾಯಬದ್ಧ ಹಕ್ಕುಗಳನ್ನು ಸೌಲಭ್ಯಗಳನ್ನು ಕೊಡಿಸಲೊಲ್ಲದು? ಇದರಿಂದ ಸರ್ಕಾರದ ಬೊಕ್ಕಸಕ್ಕೆ ಏನು ಹೊರೆ?

ಮಾಲೀಕರ ಮರ್ಜಿಗೆ ಬಿದ್ದಿರುವ ಸರ್ಕಾರ ಮಾಲೀಕರಿಗಾಗಿಯೇ ಇರುವ ಮಾಲೀಕರ ಸರ್ಕಾರ ಈ ಬಗ್ಗೆ ಯಾವ ಕ್ರಮ ವಹಿಸೀತು?

ಹೀಗೆ ಅಸಂಖ್ಯಾತ ಅಸಂಘಟಿತ ಕಾರ್ಮಿಕ ಮತ್ತು ಅತಂತ್ರ ನೌಕರರ "ಕೊಂಡುಕೊಳ್ಳುವ ವಿಚಾರದಲ್ಲಿನ ಶಕ್ತಿಹೀನತೆ" ರಾಜ್ಯದ ಕೈಗಾರಿಕಾಭಿವೃದ್ಧಿಗೆ ಒಂದು ತಡೆಯಾಗಿ ಕಾಡುತ್ತಿದ್ದರೆ, ಈ ನಿಟ್ಟಿನಲ್ಲಿ ಇನ್ನೊಂದು ಬಹುದೊಡ್ಡ ಅಡ್ಡಿ ಎಂದರೆ ರಾಜ್ಯದ ಕೃಷಿ ಕೂಲಿಕಾರರ ಮತ್ತು ಬಡ ರೈತರ 'ಕೊಳ್ಳುವ ಶಕ್ತಿಯ ಕೊರತೆ'.

ಸರ್ಕಾರದ ಅಂಕಿ ಸಂಖ್ಯೆಗಳೇ ಸಾರುತ್ತಿರುವಂತೆ ಕರ್ನಾಟಕ ರಾಜ್ಯದಲ್ಲಿ ಸುಮಾರು 60 ಲಕ್ಷ ಭೂಹೀನ ಕೃಷಿ ಕೂಲಿಕಾರರಿದ್ದಾರೆ. ರೈತರೆಲ್ಲರೂ ಒಂದೇ ಅಲ್ಲ ಅರ್ಧ ಎಕರೆ, ಒಂದು ಎಕರೆ ತುಂಡು ಜಮೀನು ಹೊಂದಿರುವವರು ಒಂದು ಕಡೆಯಾದರೆ 500 - 1000 - 2000 ..... ಹೀಗೆ ದೊಡ್ಡ ಪ್ರಮಾಣದಲ್ಲಿ ಭೂಮಾಲಿಕತ್ವ ಹೊಂದಿರುವ ಅಸಂಖ್ಯಾತ ಭೂಮಾಲೀಕರು ರಾಜ್ಯದಲ್ಲಿದ್ದಾರೆ. ಅಂದರೆ ರಾಜ್ಯದ ಬಹುದೊಡ್ಡ ಪಾಲು ಕೃಷಿ ಭೂಮಿಯು ದೊಡ್ಡ ಭೂಮಾಲಿಕ ವರ್ಗದ ಹಿಡಿತದಲ್ಲಿದೆ.

ಈ ಬಗೆಯ ಭೂಮಿ ಕೇಂದ್ರೀಕರಣವನ್ನು ಒಡೆದು ಭೂಹೀನ ಕೂಲಿಕಾರರಿಗೆ ಭೂಮಿ ನೀಡುವ ಸಮಗ್ರ ಭೂಸುಧಾರಣೆಯ ಬಗ್ಗೆ ಆಳುವ ಸರ್ಕಾರ ಈಗ ಚಕಾರವನ್ನೂ ಎತ್ತುತ್ತಿಲ್ಲ. ಉಕ್ಕಿ ಬರುವ ಹಾಲನ್ನು ತಣಿಸಲು ನಾಲ್ಕು ಹನಿ ನೀರು ಹನಿಸುವಂತೆ ಜಾರಿಗೆ ತರಲಾದ ಇಂದಿರಾಗಾಂಧಿ, ದೇವರಾಜ ಅರಸು ಭೂಸುಧಾರಣೆಗಳೇ ಮಹಾನ್ ಎನ್ನುವ ನಮ್ಮ ಆಳುವ ಜನರು ಪಶ್ಚಿಮ ಬಂಗಾಳ, ಕೇರಳ, ತ್ರಿಪುರ ರಾಜ್ಯಗಳ ಭೂಸುಧಾರಣೆಯ ಬಗೆಗೆ ಕೇಳಿಯೇ ಇಲ್ಲದಂತೆ ಮಂಗುಂ ಆಗುತ್ತಾರೆ. ಅರಸು ನೇತೃತ್ವದ 'ಅಮೋಘ' ಭೂಸುಧಾರಣೆಯ ನಂತರವೂ ರಾಯಚೂರು, ಗುಲ್ಬರ್ಗಾ ಮುಂತಾದ ಹೈದ್ರಾಬಾದ್ ಮತ್ತು ಬಾಂಬೆ ಕರ್ನಾಟಕದ ಜಿಲ್ಲೆಗಳಿಂದ ಹೈದರಾಬಾದ್, ಬಾಂಬೆ, ಬೆಂಗಳೂರುಗಳಂತಹ ನಗರಗಳಿಗೆ ಗುಳೆ ಹೊರಡುವ ಉತ್ತರ ಕರ್ನಾಟಕ ಕೃಷಿ ಕೂಲಿಕಾರರ ಕಣ್ಣೀರು ನಮ್ಮ ಆಳುವ ಜನರ ಕಣ್ಣಿಗೆ ಕಾಣುವುದೇ ಇಲ್ಲ. ನಮ್ಮ ರಾಜ್ಯದ ಮುಖ್ಯಮಂತ್ರಿ ಸ್ವತಃ ಗುಲ್ಬರ್ಗಾ ಜಿಲ್ಲೆಯವರು. ಅರಸು ಭೂಸುಧಾರಣೆಯ ಬಗೆಗೆ ಬಹಳ ಬಹಳ ಮಾತನಾಡುವ-ಈಗ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಮಲ್ಲಿಕಾರ್ಜುನ ಖರ್ಗೆಯವರೂ ಇದೇ ಬೀದರ್, ಗುಲ್ಬರ್ಗಾ, ಜಿಲ್ಲೆಯವರೇ, ಆದರೂ ಭೂಸುಧಾರಣೆಯ ಬಗೆಗೆ ಇವರು ಸೊಲ್ಲೆತ್ತರು.



ರಾಜ್ಯದ ಕೈಗಾರಿಕೀಕರಣಕ್ಕೆ ಮತ್ತು ಸಮಾಜದ ಸಮಗ್ರ ಪ್ರಗತಿ ಚಕ್ರ ತಿರುಗದಂತೆ ಅಡ್ಡಗಾಲು ಹಾಕಿ ಅಡ್ಡ ನಿಂತಿರುವುದು - ಶೋಷಕ ಭೂಮಾಲಕ ವರ್ಗ. ಭೂಮಿ ಹಂಚಿಕೆ ಮೂಲಕ ಈ ಭೂಮಾಲಕತ್ವವನ್ನು ತೊಡೆದು ಹಾಕಿದರೆ ಭೂಮಿತಿ ಕಾಯ್ದೆಯ ಪ್ರಕಾರ ಹೆಚ್ಚುವರಿ ಇರುವ ಭೂಮಿಯನ್ನು ಭೂಮಿ ಇಲ್ಲದವರಿಗೆ ಕೃಷಿ ಕೂಲಿಕಾರರಿಗೆ ಹಂಚಿದರೆ ಅವರ ಆದಾಯ ಹೆಚ್ಚುತ್ತದೆ. ಮತ್ತು ಕೈಗಾರಿಕಾ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಳ - ಆ ಮೂಲಕ ಕೈಗಾರಿಕರಣಕ್ಕೆ ಚಾಲನೆ ಸಿಕ್ಕು ಉದ್ಯೋಗ ಸೃಷ್ಟಿ.... ಮತ್ತೆ ಜನಗಳ ಕೊಂಡುಕೊಳ್ಳುವ ಶಕ್ತಿ ಹೆಚ್ಚಳ... ಹೀಗೆ ಪ್ರಗತಿ ಚಕ್ರಕ್ಕೆ ಚಾಲನೆ ದೊರೆಯುತ್ತದೆ. ಆದರೆ ಈ ದೃಷ್ಟಿಕೋನ, ಪ್ರಜ್ಞೆ ಈ ಆಳುವ ಸರ್ಕಾರಗಳಿಗೆ ಇಲ್ಲ ಎನ್ನುವುದಕ್ಕಿಂತ ಅವರಿಗೆ ಅದು ಬೇಕಿಲ್ಲ ಎಂಬುದೇ ಹೆಚ್ಚು ವಾಸ್ತವ. ಭೂಮಾಲಿಕ ವರ್ಗದ ಹಿತಾಸಕ್ತಿ ಕಾಯಲು ಟೊಂಕಕಟ್ಟಿ ನಿಂತಿರುವ ಇವರಲ್ಲಿ ಬಹಳಷ್ಟು ಮಂದಿ ಸ್ವತಃ ತಾವೇ ಭಾರಿ ಭೂಮಾಲಿಕರೂ ಆಗಿದ್ದಾರೆ. ತಮ್ಮ ಕಾಲಿನ ಬುಡಕ್ಕೆ ತಾವೇ ಕೊಡಲಿ ಪೆಟ್ಟು ಹಾಕಿಕೊಳ್ಳುವ ಕೆಲಸಕ್ಕೆ ಇವರು ಕೈಹಾಕಬಲ್ಲರೇ?

ಅದು ಹೋಗಲಿ ಸರ್ಕಾರದ ಬೀಳುಭೂಮಿ ಬಂಜರು ಭೂಮಿಯನ್ನಾದರೂ ಸಹ ಭೂಹೀನರಿಗೆ ಹಂಚುವರೇ ಎಂದರೆ ಅದಕ್ಕೂ ನಕಾರವೇ ಇವರ ಉತ್ತರ.

ಕರ್ನಾಟಕ ರಾಜ್ಯದ ಸರಿಸುಮಾರು ಅರ್ಧದಷ್ಟು ಕೈಗಾರಿಕೆಗಳನ್ನು ಹೊಂದಿರುವ ಬೆಂಗಳೂರಿನಲ್ಲಿ ಮತ್ತು ರಾಜ್ಯದ ಇತರ ಭಾಗಗಳಲ್ಲಿ ಸಹ ಬೆಳೆಯುತ್ತಿರುವ ಕೈಗಾರಿಕೆಗಳು ಯಾವುವು ಎಂಬುದರ ಅವಲೋಕನಾ ಸಹ ಇಲ್ಲಿ ಅಗತ್ಯ.

ಉದಾರೀಕರಣದ ಹಿನ್ನೆಲೆಯಲ್ಲಿ ಹಲವು ಕೈಗಾರಿಕೆಗಳು ರಾಜ್ಯಕ್ಕೆ ಬಂದಿರುವುದು ಬರುತ್ತಿರುವುದು ನಿಜವಾದರೂ ಇದರಲ್ಲಿ ಹಲವು ಕೈಗಾರಿಕೆಗಳು ಅತಿ ಕಡಿಮೆ ಮಾನವ ಸಂಪನ್ಮೂಲವನ್ನು ಬಳಕೆ ಮಾಡುವ ಯಂತ್ರ, ತಂತ್ರಜ್ಞಾನವನ್ನೇ ಹೆಚ್ಚಾಗಿ ಅವಲಂಬಿಸುವ ಉದ್ದಿಮೆಗಳಾಗಿವೆ. ಒಟ್ಟಾರೆ ಬೆಳವಣಿಗೆ ಎನ್ನುವುದು 'ಉದ್ಯೋಗರಹಿತ' ಬೆಳವಣಿಗೆ ಎಂಬಂತಾಗುತ್ತಿದೆ. ರಫ್ತುದಾರರ, ಉತ್ಪಾದಕರ ಆದಾಯ ಹೆಚ್ಚಾದರೂ, ರಫ್ತು ವಹಿವಾಟು ಹೆಚ್ಚಾದರೂ ಸಹ ಉದ್ಯೋಗ ಸೃಷ್ಟಿ ಬಹುತೇಕ ಇಲ್ಲವೆಂಬಂತಹ ಸ್ಥಿತಿ ಹಲವು ಕೈಗಾರಿಕೆಗಳಲ್ಲಿದೆ.

ಜವಳಿ, ನೇಯ್ಗೆ ಉದ್ಯಮ ರಾಜ್ಯದ ಪ್ರಧಾನ ಕೈಗಾರಿಕೆಗಳಲ್ಲೊಂದು, ಸರ್ಕಾರದ ಜನವಿರೋಧಿ ನೀತಿಯಿಂದಾಗಿ ಇಡೀ ಜವಳಿ ಉದ್ಯಮ ಬಿಕ್ಕಟ್ಟಿನಲ್ಲಿ ಸಿಲುಕಿದ್ದು ಇದನ್ನೇ ಅವಲಂಬಿಸಿದ ಲಕ್ಷಾಂತರ ಕುಟುಂಬಗಳು ಅಕ್ಷರಶಃ ಉಪವಾಸ ಬೀಳಬೇಕಾದ ಪರಿಸ್ಥಿತಿ ತಲುಪಿದ್ದಾರೆ. ಸರ್ಕಾರ ಸರಿಯಾದ ರಾಜಕೀಯ ಇಚ್ಛಾಶಕ್ತಿ ತೋರಿದಲ್ಲಿ ಇನ್ನು ಎಷ್ಟೆಷ್ಟೋ ಲಕ್ಷ ಕುಟುಂಬಗಳಿಗೆ ಆಸರೆಯಾಗಿ ರಾಜ್ಯದ ಅಭಿವೃದ್ಧಿಗೂ ಗಣನೀಯ ಕೊಡುಗೆ ನೀಡಬಲ್ಲ ಚೈತನ್ಯಗಳ ಉದ್ಯಮ ಈ ಜವಳಿ ಉದ್ಯಮ. ಆದರೆ ಮಾಹಿತಿ ತಂತ್ರಜ್ಞಾನ ಕ್ಷೇತ್ರ ತನ್ನ ನೈಜ ಅರ್ಹತೆಗಿಂತ ಅತಿ ಹೆಚ್ಚು ರಿಯಾಯಿತಿ, ವಿನಾಯಿತಿ , ಸರ್ಕಾರದ ಸೌಲಭ್ಯಗಳನ್ನು ಕಬಳಿಸುತ್ತಿದೆ.

ಇದು ಒಂದು ಉದಾಹರಣೆ ಮಾತ್ರ.

ಒಟ್ಟಾರೆಯಾಗಿ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕೆಲವರು ಭಾವಿಸುವಂತೆ ಉತ್ತಮವಾದ ರಸ್ತೆಗಳು - ಮೇಲ್ಸೇತುವೆ (Flyover), ಕೆಳಸೇತುವೆಗಳನ್ನು ನಿರ್ಮಿಸಿ ಬಿಟ್ಟಾಕ್ಷಣ ಅಭಿವೃದ್ಧಿ ತಾನೇ ತಾನಾಗಿ ಆಗಿಹೋಗುವುದಿಲ್ಲ. ಕೇವಲ ವಿದೇಶಿ ಬಂಡವಾಳ ಮಾತ್ರದಿಂದಲೇ ಕೈಗಾರಿಕಾ ಅಭಿವೃದ್ಧಿಯೂ ಆಗುವುದಿಲ್ಲ. ಮೂಲಭೂತವಾಗಿ ಸಮಾಜದ ತಳ ಸಮುದಾಯಗಳ ಜೀವನದಲ್ಲಿ ಬದಲಾವಣೆ ಬಾರದೆ ಹೋದರೆ, ಅವರ ಕೊಂಡುಕೊಳ್ಳುವ ಶಕ್ತಿಯಲ್ಲಿ ಗಣನೀಯ ಹೆಚ್ಚಳ ಆಗದೇ ಹೋದರೆ - ಕೈಗಾರಿಕೆಗಳ ಬೆಳವಣಿಗೆಗೆ ಒಂದು ಭದ್ರ ಬುನಾದಿಯೇ ದೊರೆಯುವುದಿಲ್ಲ. ಏಷ್ಯಾಖಂಡದ ಜಪಾನ್, ಯುರೋಪ್ ಖಂಡದ ಫ್ರಾನ್ಸ್, ಇಂಗ್ಲೆಂಡ್, ಜರ್ಮನಿ ಮುಂತಾದ ದೇಶಗಳಲ್ಲಿ ಆಗಿರುವ ಕೈಗಾರಿಕಾ ಬೆಳವಣಿಗೆಯ ಒಂದು ಪ್ರಮುಖ ಆಧಾರ ಆ ದೇಶಗಳಲ್ಲಿ ಅಲ್ಲಿನ ಬಂಡವಾಳಶಾಹಿಗಳೇ ನಡೆಸಿದ ಪಾಳೇಗಾರಿ ವಿರೋಧಿ ಭೂಸುಧಾರಣೆಗಳು ಎಂಬ ಚರಿತ್ರೆಯನ್ನು ತಪ್ಪದೇ ನೆನಪಿಸಿಕೊಳ್ಳುವುದು ಅಗತ್ಯ. ಎಲ್ಲಕ್ಕೂ ವಿದೇಶಿ ಬಂಡವಾಳಶಾಹಿ ಮಾದರಿಯನ್ನು ಅನುಕರಿಸಲು ಯತ್ನಿಸುವ ನಮ್ಮ ಆಳುವ ವರ್ಗ ಇಂತಹ ವಿಚಾರಗಳ ಬಗ್ಗೆ ಕಣ್ಮುಚ್ಚಿಕೊಳ್ಳುವುದು ಮಾತ್ರ ವಿಷಾದನೀಯ. ಆಳುವ ವರ್ಗಗಳು ನಿರ್ವಹಿಸದ ಚಾರಿತ್ರಿಕ ಕರ್ತವ್ಯವನ್ನು ಚಳುವಳಿ ನಿರ್ವಹಿಸಬೇಕಿದೆ.

→

ಶಿಕ್ಷಕರನ್ನು ಅರೆ-ಉದ್ಯೋಗಿಗಳನ್ನಾಗಿಸಿದ್ದಾರೆ.

ಸರ್ಕಾರದ ಇಂತಹ ಉದ್ಯೋಗ ನಾಶದ ನೀತಿಗಳ ಭಾಗವಾಗಿ ಖಾಯಂ ಉದ್ಯೋಗಗಳು ಇಲ್ಲವಾಗಿವೆ, ಅರೆ ಉದ್ಯೋಗ ಸೃಷ್ಟಿಸುವ ನೀತಿಗಳೇ ಶೀಘ್ರ ಅಭಿವೃದ್ಧಿಗೆ ಇರುವ ದಾರಿ ಎಂಬ ಮೊಂಡುವಾದ ಮಂಡಿಸುವ ಪರಿಯನ್ನು ಆಳುವ ಸರ್ಕಾರಗಳು ಬಿಡುತ್ತಿಲ್ಲ. ರಾಜ್ಯದ ಖನಿಜ ಸಂಪತ್ತನ್ನು ಬಳಸಿ ಆಧರಿಸಿ ಕೈಗಾರಿಕೆ ಸ್ಥಾಪಿಸಿ, ಉದ್ಯೋಗ ಸೃಷ್ಟಿಸುವ ಬದ[illegible]ಖನಿಜ ಸಂಪತ್ತಿನ ರಫ್ತಿಗೆ ಉತ್ತೇಜನ ನೀಡಲಾಗುತ್ತಿದೆ. ಆದರಲ್ಲೂ ಉದ್ಯೋಗ ಸೃಷ್ಟಿಸಿರುವ ಅವಕಾಶಗಳನ್ನು ಇಲ್ಲವಾಗಿಸಲಾಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಉದ್ಯೋಗ ಭರವಸೆ ಯೋಜನೆ ವಿಸ್ತರಿಸಿ ಯೋಜನೆಯನ್ನು ಜಾರಿಗೊಳಿಸುವ ಮಾತನಾಡದ, ಭೂಸುಧಾರಣೆಗಳ ಚಕಾರವೆತ್ತದ, ಉದ್ಯೋಗ ನಾಶದ ನೀತಿಗಳ ಬಗ್ಗೆ ಕನಿಷ್ಟ ಎಚ್ಚರಿಕೆ ವಹಿಸುವಂತೆ ಹೇಳದ, ಗೌರವಯುತ ಉದ್ಯೋಗ (Decent Job) ದ ಸೊಲ್ಲೆತ್ತದ ಕಲಾಂರವರು, ಸುವರ್ಣಕರ್ನಾಟಕದ ಹೊಸ್ತಿಲಲ್ಲಿ ರಾಜ್ಯದ ಆರ್ಥಿಕ - ಕೈಗಾರಿಕಾ - ಕೃಷಿ ಹಾಗೂ ಉದ್ಯೋಗದ ನೀತಿಗಳು ಖಾಸಗೀಕರಣ-ಉದಾರೀಕರಣ-ಜಾಗತೀಕರಣದ ಜಾಡಿನಿಂದ ಹೊರಬರದಂತೆ ಮಾಡುವ ಮುನ್ನೋಟದ ಚಿತ್ತಾರವನ್ನು ಬಿಡಿಸಿದ್ದಾರೆ. ಈ ಉದ್ಯೋಗ ನಾಶದ ನೀತಿಗಳ ವಿರುದ್ಧ ವಿಶಾಲ ಐಕ್ಯ ಹೋರಾಟ ಹೊರಹೊಮ್ಮಿ, ಈ ನೀತಿಗಳ ದಿಕ್ಕು ಬದಲಿಸದ ಹೊರತು, ಪರಿಸ್ಥಿತಿ ಸುಧಾರಿಸುವುದಿಲ್ಲ ಬದಲಿಗೆ ರಾಜ್ಯದ ನಿರುದ್ಯೋಗ ಪರಿಸ್ಥಿತಿ ಮತ್ತಷ್ಟು ಹದಗೆಡಲಿದೆ. ○



ಔಷಧಿಗಳು : ಅಗತ್ಯ, ಅನಗತ್ಯ ಹಾಗೂ ಹಾನಿಕಾರ

ನಮ್ಮ ಆರೋಗ್ಯದ ಜವಾಬ್ದಾರಿಯನ್ನು ಕೇವಲ ವೈದ್ಯರು - ಔಷಧ ಕಂಪನಿಗಳಿಗೆ ಬಿಡಲಾಗದು - ಓದಿ

ನಮ್ಮ ಆರೋಗ್ಯದ ಜವಾಬ್ದಾರಿಯನ್ನು ಕೇವಲ ವೈದ್ಯರು-ಔಷದ ಕಂಪನಿಗಳಿಗೆ ಬಿಡಲಾಗದು-ಓದಿ

ಔಷಧಿಗಳು ಅನಾರೋಗ್ಯ ನಿವಾರಿಸಲು ಪ್ರಮುಖ ಪಾತ್ರವಹಿಸಿವೆ. ಆದರೆ ಔಷಧಿ ಕಂಪೆನಿಗಳು ಔಷಧಿಗಳನ್ನು ತಯಾರಿಸಿ ಅಪಾರ ಲಾಭಗಳಿಸಲು ಪ್ರಯತ್ನಿಸುತ್ತಿವೆ. ಅಗತ್ಯವಲ್ಲದ, ಅನಗತ್ಯವಾದ ಔಷಧಿಗಳನ್ನು ತಯಾರಿಸಲು ಮುಂದಾಗಿವೆ ಎಂದರೆ ಆಶ್ಚರ್ಯವಾಗಬಹುದಲ್ಲವೇ ?

ಅಗತ್ಯ ಔಷಧಿಗಳು

70ರ ದಶಕದಲ್ಲಿ ವಿಶ್ವಆರೋಗ್ಯ ಸಂಸ್ಥೆ ಜಗತ್ತಿನ ಮಾರುಕಟ್ಟೆಯಲ್ಲಿ ದೊರಕುವ ಎಲ್ಲ ಔಷಧಿಗಳನ್ನು ಪರಿಶೀಲನೆ ಮಾಡಿ, ಕೆಲವು ಔಷಧಿಗಳು ಮಾತ್ರ ಉಪಯೋಗಿಸಲು ಯೋಗ್ಯವೆಂದು ತೀರ್ಮಾನಿಸಿ ಆ ಔಷಧಿಗಳ ಪಟ್ಟಿಯನ್ನು 1975 ರಲ್ಲಿ ಬಿಡುಗಡೆ ಮಾಡಿತು. ಈ ಅಗತ್ಯ ಔಷಧಿ ಪಟ್ಟಿಯನ್ನು ಆಧರಿಸಿ ಜಗತ್ತಿನ ಹಲವಾರು ದೇಶಗಳು ತಮ್ಮ ದೇಶದ ಔಷಧಿ ಪಟ್ಟಿಯನ್ನು ತಯಾರಿಸಿಕೊಂಡಿವೆ ಹಾಗೂ ಅನಗತ್ಯ ಔಷಧಿಗಳ ಬಳಕೆಯನ್ನು ನಿಷೇಧಿಸಿವೆ. ಆದರೆ ಭಾರತ 1996 ರಲ್ಲಿ ಅಗತ್ಯ ಔಷಧಿ ಪಟ್ಟಿಯನ್ನು ತಯಾರಿಸಿದರೂ ಅದು ಇಲ್ಲಿಯವರೆಗೆ ಜಾರಿಗೆ ಬರಲೇ ಇಲ್ಲ.

ವೈಜ್ಞಾನಿಕವಾಗಿ ರುಜುವಾತಾಗಿರುವ, ಚಿಕಿತ್ಸೆ ಸಾಮರ್ಥ್ಯವಿರುವ, ಕಡಿಮೆ ಅಡ್ಡಪರಿಣಾಮಗಳಿರುವ, ಕೊಂಡುಕೊಳ್ಳಲು ಸಾಧ್ಯವಾದ ಬೆಲೆಯಲ್ಲಿ ಸುಲಭವಾಗಿ ದೊರಕುವ, ಔಷಧಿ ಶಾಸ್ತ್ರದ ಪಠ್ಯ ಪುಸ್ತಕಗಳಲ್ಲಿ ನಮೂದಿಸಲ್ಪಟ್ಟಿರುವ ಜಾತಿಸೂಚಕ ಔಷಧಿಗಳು (Generic). ಈ ಔಷಧಿ ಪಟ್ಟಿಯಲ್ಲಿರುವ ಔಷಧಿಗಳನ್ನು ಬಳಸಿ ಪ್ರತಿಶತ 90 ರಷ್ಟು ಕಾಯಿಲೆಗಳನ್ನು ಸರಿಪಡಿಸಬಹುದಾಗಿದೆ. ಈ ಔಷಧಿಗಳ ಬಳಕೆಯಿಂದ ಸರಕಾರಕ್ಕೆ ಔಷಧಿಗಳ ಮೇಲೆ ಕಡಿಮೆ ಖರ್ಚು.

ಅಗತ್ಯ ಔಷಧಿಪಟ್ಟಿಯಲ್ಲಿರುವ ಔಷಧಿಗಿಂತ ಹೆಚ್ಚು ಪರಿಣಾಮಕಾರಿ ಔಷಧಿ ಆವಿಷ್ಕಾರಗೊಂಡಾಗ, ಅದನ್ನು ಅಗತ್ಯ ಔಷಧಿ ಪಟ್ಟಿಯಲ್ಲಿ ಸೇರಿಸಲಾಗುವುದು. ಎರಡು ವರ್ಷಕ್ಕೊಮ್ಮೆ ಅಗತ್ಯ ಔಷಧಿ ಪಟ್ಟಿಯನ್ನು ನವೀಕರಿಸಲಾಗುವುದು.

ಅಷ್ಟೇನೂ ಅಗತ್ಯವಿಲ್ಲದ ಔಷಧಿಗಳು

ವಿಶ್ವ ಆರೋಗ್ಯ ಸಂಸ್ಥೆಯ ಅಗತ್ಯ ಔಷಧಿ ಪಟ್ಟಿಯಲ್ಲಿರುವ ಅಗತ್ಯ ಔಷಧಿಗಳಲ್ಲದೆ ಇನ್ನೂ ಹಲವಾರು ಔಷಧಿಗಳು ಮಾರುಕಟ್ಟೆಯಲ್ಲಿ ದೊರಕುತ್ತವೆ. ಈ ಔಷಧಿಗಳು ವೈಜ್ಞಾನಿಕವಾಗಿ ರುಜುವಾತಾದ ಔಷಧಿಗಳಾಗಿದ್ದು, ಕೆಲವೊಮ್ಮೆ ಈ ಔಷಧಿಗಳು ದುಬಾರಿಯಾಗಿದ್ದು ಸುಲಭವಾಗಿ ದೊರಕದೇ ಇರಬಹುದು. ಆದರೆ ಇವುಗಳನ್ನು ವಿಶೇಷ ಸಂದರ್ಭಗಳಲ್ಲಿ ಉಪಯೋಗಿಸಲಾಗುವುದು.

ಅನಗತ್ಯ ಔಷಧಿಗಳು

ವಿಶ್ವ ಆರೋಗ್ಯ ಸಂಸ್ಥೆಯ ಅಗತ್ಯ ಔಷಧಿ ಪಟ್ಟಿ ಹಾಗೂ ಔಷಧಿ ಶಾಸ್ತ್ರದ ಪಠ್ಯಪುಸ್ತಕದಲ್ಲಿರದ ಹಲವಾರು ಔಷಧಿಗಳು ಮಾರುಕಟ್ಟೆಯಲ್ಲಿ ದೊರಕುತ್ತವೆ. ಈ ಔಷಧಿಗಳನ್ನು ಅನಗತ್ಯ ಔಷಧಿಗಳೆಂದು ಕರೆಯಬಹುದು.

ಸಂಮಿಶ್ರ ಔಷಧಿಗಳು (ಡೋಲೋಪಾರ್) -
ಟಾನಿಕ್‌ಗಳು (ಬೇಯರ್ಸ್ ಟಾನಿಕ್),
ಕೆಮ್ಮುಶಮನ ಮಾಡುವ ಔಷಧಿ (ಕೋರೆಕ್ಸ್),
ಹಸಿವು ಹೆಚ್ಚಿಸುವ ಔಷಧಿ (ಪ್ರಾಕ್ಟಿನ್),
ಜೀರ್ಣ ಹೆಚ್ಚಿಸುತ್ತವೆಂದು ಹೇಳಲಾಗುವ ಔಷಧಿ (ವಿಟಾ ಝೈಮ್),
ನೆಗಡಿ ನಿವಾರಕ (ಡಿ-ಕೋಲ್ಡ್),
ರಕ್ತ ಸ್ರಾವ ನಿಲ್ಲಿಸುವ ಔಷಧಿಗಳು (ಸ್ಟೆಪ್ಟೋಮೆಟ್)

ಅಪಾಯಕರ ಔಷಧಿ

ಇಂದಿಗೂ ನಮ್ಮ ದೇಶದಲ್ಲಿ ಹಲವಾರು ಅಪಾಯಕಾರಿ ಔಷಧಿಗಳು ದೊರಕುತ್ತಿವೆ. ಈ ಔಷಧಿಗಳನ್ನು ಹಲವಾರು ದೇಶಗಳು ನಿಷೇಧಿಸಿದೆ. (ಅನಾಲ್‌ಜಿನ್, ನಿಮ್ಯುಸುಲೈಡ್)

ಅಗತ್ಯ ಔಷಧಿಗಳು ಕೇವಲ 350, ಆದರೆ ಅನಗತ್ಯ ಔಷಧಿಗಳ ಸಂಖ್ಯೆ 70.000 ದಷ್ಟು.

ಅನಗತ್ಯ ಔಷಧಿಗಳೇಕೆ ಮಾರುಕಟ್ಟೆಯಲ್ಲಿ ?

ಅನಗತ್ಯ ಔಷಧಿಗಳು ದುಬಾರಿಯಾಗಿರುವುದರಿಂದ ಔಷಧಿ ಕಂಪೆನಿಗಳಿಗೆ ಲಾಭ ತರುತ್ತವೆ. ಅಗತ್ಯ ಔಷಧಿಗಳ ಲಾಭಕ್ಕೆ ಸರಕಾರ ಗರಿಷ್ಟ ಮಿತಿ ಇಟ್ಟಿರುವುದರಿಂದ, ಹೆಚ್ಚು ಲಾಭ ಮಾಡಲು ಔಷಧಿ ಕಂಪೆನಿಗಳು ಅನಗತ್ಯ ಔಷಧಿಗಳನ್ನು ತಯಾರಿಸುತ್ತವೆ. ಔಷಧಿ ಕಂಪೆನಿಗಳ ಮುಖ್ಯ ಉದ್ದೇಶ ಔಷಧಿ ತಯಾರಿಕೆಯಲ್ಲ, ಲಾಭ !

ಔಷಧಿಗಳ ಬಗ್ಗೆ ವೈದ್ಯರಿಗೆ ತಪ್ಪು ಮಾ
ಕೊಟ್ಟು, ಪುಸಲಾಯಿಸಿ, ಕೊಡುಗೆಗಳನ್ನು ಕೊ
ಅನಗತ್ಯ ಔಷಧಿಗಳನ್ನು ಬರೆಯುವಂತೆ ಔ
ಕಂಪೆನಿಗಳು ಒತ್ತಡ ತರುತ್ತವೆ. ಎರಡು ಅ
ಔಷಧಿಗಳನ್ನು ಸೇರಿಸಿ ತಯಾರಿಸಿದ ಔಷಧಿ
ಅನಗತ್ಯ ಔಷಧಿಯಾಗುತ್ತದೆ, ಆದರೂ ಅ
ಅಗತ್ಯ ಔಷಧಿಯೆಂದು ವೈದ್ಯರ
ನಂಬಿಸಲಾಗುತ್ತದೆ.

ಸಾಮಾನ್ಯವಾಗಿ ವೈದ್ಯರು ಸಾಮಾ
ರಾಜಕೀಯ ವಿಷಯಗಳ ಬಗ್ಗೆ ತಟಸ್ಥ ಭಾ
ಹೊಂದಿದ್ದಾರೆ. ಔಷಧಿ ಕ್ಷೇತ್ರಕ್ಕೆ ಸಂಬಂಧಿಸಿದ ಅ
ಔಷಧಿಯ ಪರಿಕಲ್ಪನೆಯ
ಅರಿಯದವರಾಗಿದ್ದರಿಂದ ಅನಗತ್ಯ ಔಷಧಿಗಳ
ಬರೆದುಕೊಡಲು ಮುಂದಾಗುತ್ತಾರೆ.


ಔಷಧ ನಿಯಂತ್ರಣ ಮಂಡಳಿಗಳು ಔ
ಕಂಪನಿಗಳ ಭ್ರಷ್ಟಾಚಾರಕ್ಕೆ ಸಿಲುಕಿ ಅನ
ಔಷಧಿಗಳಿಗೆ ಪರವಾನಗಿ ನೀಡುತ್ತಾ ಬಂದಿ
ಸರಕಾರಕ್ಕೆ ರಾಜಕೀಯ ಒಲ
ಇಲ್ಲದಿರುವುದರಿಂದ, ಜನಪರ ಆರೋಗ್ಯ ನೀ
ಔಷಧಿ ನೀತಿಯನ್ನು ಜಾರಿಗೆ ತರದೆ, ಅನ
ಔಷಧಿಗಳ ಬಗ್ಗೆ ಬೇಜವಾಬ್ದಾರಿಯ
ತೋರಿಸುತ್ತದೆ. ಈ ಸನ್ನಿವೇಶದಲ್ಲಿ ಜನಸಾಮಾನ್ಯ
ಔಷಧಿ ಬಗ್ಗೆ ಅಗತ್ಯ ಮಾಹಿತಿ ಇಲ್ಲದ್ದರಿಂದ ಔ
ತಗೆದುಕೊಳ್ಳುವ ತೀರ್ಮಾನ ಅವರದ್ದಾಗ
ಅನಗತ್ಯ ಔಷಧಿಗಳನ್ನು ಉಪಯೋಗಿಸ
ಬಲಿಪಶುಗಳಾಗಿದ್ದಾರೆ.

ಪರಿಹಾರವೇನು ?

ಈಗಾಗಲೇ ಈ ವಿಷಯದ ಬಗ್ಗೆ ಕಾಳಜಿ
ಔಷಧಿ ಕ್ರಿಯಾವೇದಿಕೆಗಳು ಪ್ರತಿಭಟನೆ ನಡೆಸಿ
ಈ ವಿಷಯ ಬೆಳಕಿಗೆ ಬರಲು ಜನ
ಜಾಗ್ರತರಾಗಿರಬೇಕು. ಅಗತ್ಯ ಔಷಧಿ ಪಟ್ಟಿ
ಹಂತದಲ್ಲೂ ಜಾರಿಗೆ ಬರಬೇಕು. ಅನಗ
ಔಷಧಿಗಳನ್ನು ನಿಷೇಧಿಸಲು ಔಷಧಿ ನಿಯಂತ್ರ
ಸರಕಾರ ಆದೇಶ ಕೊಡಬೇಕು.

ಸರಕಾರ ಸಮಂಜಸ ಆರೋಗ್ಯ ಹಾ
ಔಷಧಿ ನೀತಿಯನ್ನು ಜಾರಿಗೊಳಿಸಬೇಕು. ಜನ
ಎಲ್ಲ ಅಗತ್ಯ ಔಷಧಿಗಳು ಸುಲಭವಾ
ದೊರಕಬೇಕು, ಅನಗತ್ಯ ಔಷಧಿಗ
ನಿಷೇಧವಾಗಬೇಕು.

ಅಂಕಿ ಸಂಖ್ಯೆಗಳು ಬೆಳೆದು ಬಂದ ಕತೆ



ಜ್ಞಾನ-ವಿಜ್ಞಾನಗಳು ಜನ ಸಾಮಾನ್ಯರಿಗೆ ದಕ್ಕದೇ ಉಳಿದುಬಿಟ್ಟರೆ ಸ್ಥಾಪಿತ ಹಿತಾಸಕ್ತಿಗಳ ಶೋಷಣೆಯ ಸಾಧನವಾಗುತ್ತವೆ.

ಕಾಗದದ ಬಳಕೆಯು ಪ್ರಮುಖವಾಗಿರುವುದು ಬರಹದಲ್ಲಿ. ಸಂಖ್ಯೆ, ಲೆಕ್ಕ, ವಿಚಾರಗಳ ದಾಖಲೆಗಾಗಿ ಬರವಣಿಗೆ ಅಭ್ಯಾಸಕ್ಕೆ ಬಂದಿತು. ಯೋಚಿಸಿ ನೋಡಿ ನಾವು ಗಣಿತವನ್ನು ಕಲಿಯಲು ಮೊದಲು ಕಲ್ಲುಗಳ ಮೇಲೆ ಕೆತ್ತನೆಯನ್ನು ಕಲಿಯಬೇಕಾಗಿ ಬಂದರೆ!. ಆದರೆ ಅದರ ಅವಶ್ಯಕತೆ ಇಂದು ಇಲ್ಲ. ಗಣಿತ ಹಾಗೂ ಸಂಖ್ಯೆಗಳ ಪ್ರಾಥಮಿಕ ಜ್ಞಾನವು, ಕಾಗದ ಬಳಕೆಗೆ ಬರುವ ನೂರಾರು ವರ್ಷಗಳ ಹಿಂದೆಯೆ ಮಾನವನಿಗೆ ದೊರೆತಿತ್ತು.

ಆದಿ ಮಾನವನಿಗೆ ಲೆಕ್ಕ, ಸಂಖ್ಯೆಗಳ ಜ್ಞಾನ ದೊರೆತಿತ್ತೇ? ಹೌದು! ಆ ಕಾಲದಲ್ಲಿಯೂ ತನ್ನ ದನ, ಕುರಿಗಳು ಸಾಲಾಗಿ ಹುಲ್ಲು ಮೇಯುವುದಕ್ಕೆ ಹೋಗುತ್ತಿರಬೇಕಾದರೆ ಒಂದೊಂದಾಗಿ ಕಲ್ಲುಗಳನ್ನು ಚೀಲಕ್ಕೆ ಹಾಕಿ - ಹಾಗೆಯೆ ದನ, ಕುರಿಗಳು ಹಿಂದಿರುಗಿ ಬರಬೇಕಾದರೆ ಒಂದೊಂದಾಗಿಯೆ ಕಲ್ಲುಗಳನ್ನು ಚೀಲದಿಂದ ಹೊರಗೆ ತೆಗೆದು ಹಾಕುವುದರ ಮೂಲಕ ಲೆಕ್ಕ ಮಾಡುತ್ತಿದ್ದರು. ಇದನ್ನು ನಾವು 'ಅಬ್ಯಾಕಸ್'ನ ಪ್ರಾಚೀನ ರೂಪ ಎಂದ ಕರೆಯಬಹುದು.

ಇದೇ ರೀತಿಯಲ್ಲಿ ಮತ್ತೊಂದು ಕುಲದವರು ಒಂದು ಹಗ್ಗದ ಮೇಲೆ ಗಂಟುಗಳನ್ನು ಹಾಕುತ್ತಿದ್ದರು. ಒಂದು ಹಗ್ಗದ ಮೇಲೆ 2 ಗಂಟುಗಳನ್ನು ಹಾಕಿದ ನಂತರ ಮತ್ತೊಂದು ಹಗ್ಗದ ಚೂರನ್ನು ತೆಗೆದುಕೊಳ್ಳುತ್ತಿದ್ದರು. ಇಂದಿನಂತೆಯೇ ಅದು ಕೂಡ "ಐದು" ಎಂಬುದನ್ನು ಸೂಚಿಸುವುದು ಅಂಗೈನ ಐದು ಬೆರಳುಗಳ ಮೂಲಕ, ಸಂಖ್ಯಾಜ್ಞಾನದ ಬೆಳವಣಿಗೆಯು ಮುಖ್ಯವಾಗಿ ಎರಡು ವಿಷಯಗಳ ಬೆಳವಣಿಗೆಯ ಮೇಲೆ ಆಧರಿಸಿದೆ. ಮೊದಲನೆಯದಾಗಿ ಭಾಷೆ, ಎರಡನೆಯದು ಕೃಷಿ. ಇದು ಹೇಗೆಂದು ನೀವು ಯೋಚಿಸಿ ನೋಡಿ.

ಕ್ರಿ.ಪೂ 3000ದಲ್ಲಿ ಬಹಳ ಮುಂದುವರೆದ ಈಜಿಪ್ತಿಯನ್ನರು ಸಂಖ್ಯಾ ಪದ್ಧತಿಯನ್ನು ಕಂಡುಹಿಡಿದರು. ಈ ಪದ್ಧತಿಯ ಪ್ರಕಾರ 1ನ್ನು /, 10ನ್ನು ∩, 100 ಅನ್ನು @, 1000 ಅನ್ನು ⩕ 10,000 ಅನ್ನು (ಚಿಹ್ನೆಗಳ ಮೂಲಕ ಪ್ರತಿನಿಧಿಸುತ್ತಿದ್ದರು. ಈ ಪದ್ಧತಿಯ ಪ್ರಕಾರ ನಾವು 2522 ಅನ್ನು ⩕⩕@@@@@∩∩11 ಎಂದು ಬರೆಯಬೇಕಾಗುತ್ತದೆ. ಇದು ತುಂಬ ಕಠಿಣವಾದದ್ದು ನಿಜ, ಆದರೆ 2522 ಕಲ್ಲುಗಳನ್ನು ಚೀಲದೊಳಗೆ ಹಾಕಿಕೊಳ್ಳುವುದು ಅಥವಾ 2522 ಗಂಟುಗಳನ್ನು ಕಟ್ಟುವುದಕ್ಕೆ ಹೋಲಿಸಿದರೆ ಈಜಿಪ್ತಿಯನ್ನರ ಸಂಖ್ಯಾ ಪದ್ಧತಿಯು ಬಹಳ ಮುಂದುವರೆದುದು.

"ಹೊಮೊ ಸೇಪಿಯನ್" (ಮಾನವ) ಭೂಮಿಯ ಮೇಲೆ ಕಂಡುಬಂದಿದ್ದು ಸುಮಾರು 4,50,000 ವರ್ಷಗಳ ಹಿಂದೆ ಮತ್ತು ಆಧುನಿಕ ಮಾನವನು ಕಂಡುಬಂದಿದ್ದು ಸುಮಾರು 1,00,000 ವರ್ಷಗಳ ಹಿಂದೆ. ಮಾನವ ದನ ಕುರಿಗಳನ್ನು ಸಾಕುವುದನ್ನು ಕಲಿತಿದ್ದು ಸುಮಾರು 12,000 ವರ್ಷಗಳ ಹಿಂದೆ. ಮಾನವನಿಗೆ ಆ ಸಮಯದಲ್ಲಿಯೆ ಸಂಖ್ಯೆಗಳ ಜ್ಞಾನ ಬರಲು ಆರಂಭಿಸಿತು.

21ನೇ ಶತಮಾನದಲ್ಲಿ, ಒಂದು ಮಗು, 1ನೇ ತರಗತಿಯಲ್ಲೇ ಸಂಖ್ಯೆಗಳನ್ನು ಕಲಿಯುತ್ತದೆ. ಆದರೆ ಆಧುನಿಕ ಮಾನವನು ಸುಮಾರು 90,000 ವರ್ಷಗಳ ಕಾಲ ಸಂಖ್ಯೆಗಳ ಕಿಂಚಿತ್ತೂ ಜ್ಞಾನ ಇಲ್ಲದೆ ಬದುಕಿದನು. ಅಂಕಿ ಸಂಖ್ಯೆಗಳ ವಿಷಯದಲ್ಲಿ ಮಾನವ 1ನೇ ತರಗತಿಯನ್ನು ಪ್ರವೇಶಿಸಿದ್ದು ಕೇವಲ 10, 12 ಸಾವಿರ ವರ್ಷಗಳ ಹಿಂದೆ.

ಮಾನವ ಬೆಳೆದಿದ್ದಾನೆ. ಮಾನವ ಬೆಳೆಯುತ್ತಿದ್ದಾನೆ.............

ಅರ್ಜುನ್‌ರಾವ್
ವಿಜ್ಞಾನಿಗಳು

ಶಾಸನಗಳ ಮೇಲೆ ಸವಾರಿ

ನ್ಯಾಯ, ಅನ್ಯಾಯಗಳ ತಾಕಲಾಟಗಳ
ತಗಲಿಸಿಕೊಂಡವರು
ಕೋರ್ಟಿನ ಕಟಕಟೆಯ ಹತ್ತಿನಿಂತರು
ಕಾನೂನು ಅರಿಯದ ಬಡವ, ಬಲ್ಲಿದ
ಅಜ್ಞಾನಿ-ಅನಕ್ಷರಸ್ಥ ಅಸಹಾಯಕರು
ಸಣ್ಣ-ದೊಡ್ಡ ವ್ಯಾಜ್ಯಗಳಿಗೆ
ಜೈಲು ಸೇರಿದರು
ಮಾಡಿದ ತಪ್ಪಿಗೂ, ಮಾಡದ ತಪ್ಪಿಗೂ!!

ಕಾನೂನನರಿತೂ 'ಅರಿಯದ'
ಶ್ರೀಮಂತರು
'ಜ್ಞಾನಿ'ಗಳ ಸೋಗ ಸಾಕಿದ ಅಕ್ಷರಸ್ಥರು
ಸುಳ್ಳಲ್ಲೆ ಮಿಂದು ಬಂದರು,
ಸಾಕ್ಷಿಗಳ ಸುಳಿವ ಸುಟ್ಟರು.
ಸತ್ಯವ ಒದ್ದು ಎಲ್ಲಾ ವ್ಯಾಜ್ಯ[illegible]
ಶಾಸನಗಳ ಮೇಲೆ ಸವಾರಿ ಮಾಡಿದರು.

ಎನ್.ವಿ.ವಿಜಯಲಕ್ಷ್ಮಿ
(ಹೂವಿನ ಹಡಗಲಿ)

ನೊ ಟು WTO! ಕೊಂಗ್ ಈ ಸೈ ಮಾವೌ!

'ವಿಶ್ವ ವಾಣಿಜ್ಯ ಸಂಘಟನೆ' ಬೇಡ

ಹಾಂಗ್‌ಕಾಂಗ್ ರಣರಂಗದ ಘೋಷಣ

'ನೊ ಟು ಡಬ್ಲ್ಯುಟಿಒ'! "ವೀ ದ ಪ್ಯೂಪಿಲ್ ಯುನೈಟೆಡ್-ನೆವರ್ ಬಿ ಡಿಫೀಟಡ್" (we the people united........never be defeated!) "ನೊ ಡೀಲ್ ಈಸ್ ಬೆಟರ್ ದೆನ್ ಬ್ಲೇಡ್! "ಯು ಎಸ್ ಇಂಪೀರಿಯಲಿಸ್ಟ್ - ನಂಬರ್ ಒನ್ ಟೆರ್ರರಿಸ್ಟ್! (ಅಮೆರಿಕಾ ಜಗತ್ತಿನ ಅತಿದೊಡ್ಡ ಭಯೋತ್ಪಾದಕ)

ಇಂತಹ ಘೋಷಣೆಗಳೇ ಡಬ್ಲ್ಯುಟಿಒ ಸಮ್ಮೇಳನಕ್ಕೆಂದು ಬಂದಿಳಿದ ವಿವಿಧ ದೇಶಗಳ ಸರ್ಕಾರದ ಪ್ರತಿನಿಧಿಗಳಿಗೆ ದೊರಕಿದ ಸ್ವಾಗತ!!!

ಡಿಸೆಂಬರ್ 13ರಂದ ವಿಶ್ವವಾಣಿಜ್ಯ ಸಂಘಟನೆಯ ಸಚಿವ ಮಟ್ಟದ ಸಭೆ (ಡಬ್ಲ್ಯುಟಿಒ ಮಿನಿಸ್ಟರಿಯಲ್) ಉದ್ಘಾಟನೆಯ ದಿನ. ಆದರೆ ಡಿಸೆಂಬರ್ 4ನೇ ದಿನದಿಂದಲೇ ಪ್ರತಿಭಟನೆಗಳು ನಗರದ ಬೀದಿಗಳಲ್ಲಿ ಪ್ರಾರಂಭವಾಗಿದ್ದವು.

ಡಿಸೆಂಬರ್ 11ರಂದು 'ಹಾಂಗ್‌ಕಾಂಗ್' ನಗರದ ವಿಕ್ಟೋರಿಯಾ ಪಾರ್ಕ್‌ನಿಂದ ಸುಮಾರು 5000ಕ್ಕೂ ಹೆಚ್ಚು ಕಾರ್ಮಿಕರು, ವಿದ್ಯಾರ್ಥಿಗಳು, ರೈತರು, ಮಹಿಳೆಯರು ನೆರೆದಿದ್ದ ಬೃಹತ್ ಪ್ರತಿಭಟನಾ ಮೆರವಣಿಗೆ ಹೊರಟು ಕೇಂದ್ರ ಸರ್ಕಾರ ಕಛೇರಿಗಳ ಆವರಣದ ಎದುರು ಬೃಹತ್ ಪ್ರತಿಭಟನಾ ಸಭೆ ನಡೆಯಿತು. ಸುಮಾರು 6 ಕಿ.ಮೀ ದೂರ ನಗರದ ಕೇಂದ್ರ ಬಾಗದ ಮುಖ್ಯ ರಸ್ತೆಗಳಲ್ಲಿ ವಿವಿಧ ದೇಶಗಳ ಜನ ನಡೆಸಿದ ಈ ಪ್ರತಿಭಟನಾ ಮೆರವಣಿಗೆ ಸಾಮ್ರಾಜ್ಯಶಾಹಿಗಳಿಗೆ ಎಚ್ಚರಿಗೆ ನೀಡುವಂತಹದ್ದಾಗಿತ್ತು.

ಸಾಮ್ರಾಜ್ಯಶಾಹಿಗಳ ಪರ ಮಾಧ್ಯಮಗಳು "ಹಿಂಸಾಚಾರದ ಪ್ರತಿಭಟನೆಗಳು ನಡೆಯಲಿವೆ" ಎಂದು ಜನರಿಗೆ ಭೀತಿಯನ್ನು ಹುಟ್ಟಿಸುವ ಪ್ರಚಾರಗಳನ್ನು ನಡೆಸಿದವು. ಆದರೂ ಮೆರವಣಿಗೆಯ ಹಾದಿಯಲ್ಲಿ ರಸ್ತೆಯ ಇಬ್ಬದಿಗಳಲ್ಲೂ ಜನಸಾಗರ ಈ ವರ್ಣರಂಜಿತ ಮೆರವಣಿಗೆಗಳನ್ನು ವೀಕ್ಷಿಸಿದವು. ಕೆಲವು ಬಹುರಾಷ್ಟ್ರೀಯ ಕಂಪನಿಗಳ ಅಂಗಡಿಗಳು, ಮಾರಾಟ ಮಳಿಗೆಗಳು ಬಾಗಿಲೆಳೆದಿದ್ದವು.

ಹಾಂಗ್‌ಕಾಂಗ್‌ನಲ್ಲಿ ನಡೆಯುತ್ತಿರುವ WTO ಸಚಿವ ಮಟ್ಟದ ಸಭೆಯಲ್ಲಿ ಶ್ರೀಮಂತ ಬಂಡವಾಳಶಾಹಿ ದೇಶಗಳು ಬಡ ಮತ್ತು ಅಭಿವೃದ್ಧಿಶೀಲ ದೇಶಗಳ ಕೈಗಳನ್ನು ತಿರುಚುವ ಬಲಿಷ್ಟ ಹುನ್ನಾರಗಳನ್ನು ನಡೆಸಿವೆ. ಈ ಸಂಚಿನ ವಿರುದ್ಧ ವಿಶ್ವವ್ಯಾಪಿ ಪ್ರತಿಭಟನೆಯಲ್ಲದೆ ಸ್ವತಃ ಹಾಂಗ್‌ಕಾಂಗ್‌ನಲ್ಲಿಯೂ ಬೃಹತ್ ಪ್ರತಿಭಟನಾ ಆಂದೋಲನ ನಡೆಯುತ್ತಿದೆ. ಈ ಚಳುವಳಿಗೆ ಕರ್ನಾಟಕ ಸಿಐಟಿಯು ಸಂಘಟನೆಯ ಪ್ರತಿನಿಧಿಯಾಗಿ ತೆರಳಿರುವ ಸಿಐಟಿಯು ರಾಜ್ಯ ಖಜಾಂಚಿ ಮೀನಾಕ್ಷಿ ಸುಂದರಂ ರವರು ಕಳುಹಿಸಿರುವ ಚಳುವಳಿಯ ಪ್ರತ್ಯಕ್ಷ ಅನುಭವ ಇಲ್ಲಿದೆ.

ಪತ್ರಿಕೆಗಳು, ಟಿ.ವಿ.ಮಾಧ್ಯಮಗಳು, ಈ ಪ್ರತಿಭಟನಾಕಾರರು ಡಿಸೆಂಬರ್ 13ರಂದು ಹಿಂಸಾಚಾರದಲ್ಲಿ ತೊಡಗುವರು, ನಗರದ ಬೀದಿಗಳಲ್ಲಿ ರಕ್ತ ಹರಿಯುತ್ತದೆ. ಆಸ್ತಿಪಾಸ್ತಿಗಳು ಲೂಟಿ ಆಗುತ್ತವೆ ಎಂದೆಲ್ಲ ಅಪಪ್ರಚಾರ ನಡೆಸಿದರು.

ಡಿಸೆಂಬರ್ 13ರಂದು ಸುಮಾರು 10,000 ಜನರ ಮೆರವಣಿಗೆ 'ವಿಕ್ಟೋರಿಯಾ ಪಾರ್ಕ್'ನಿಂದ ಹೊರಟು, ಡಬ್ಲ್ಯುಟಿಒ ಸಮ್ಮೇಳನ ನಡೆಯುವ 'ಹಾಂಗ್‌ಕಾಂಗ್ ಕನ್ವೆನ್‌ಶನ್ ಸೆಂಟರ್'ನ ಸಮೀಪದಲ್ಲಿನ 'ಬಂದರು' ಮೈದಾನದಲ್ಲಿ ಸೇರಿತು. ಕೊರಿಯದ ಕಾರ್ಮಿಕರು, ರೈತರು, ಫಿಲಿಫೈನ್ಸ್‌ನ ರೈತ ಕಾರ್ಮಿಕರು, ಇಂಡೋನೇಶಿಯ, ಭಾರತ, ಬಾಂಗ್ಲಾದೇಶ, ಆಫ್ರಿಕಾದ ಹಲವು ದೇಶಗಳಿಂದ ಬಂದಿದ್ದ ಪ್ರತಿಭಟನಾಕಾರರು ಅಬಿವೃದ್ಧಿ ಹೊಂದಿದ ರಾಷ್ಟ್ರಗಳ ಪಿತೂರಿಯ ವಿರುದ್ಧ, ಸಾಮ್ರಾಜ್ಯಶಾಹಿ ವಿರುದ್ಧ ಘೋಷಣೆಗಳನ್ನು ಕೂಗುತ್ತ, ಕ್ರಾಂತಿಕಾರಿ ಹಾಡುಗಳನ್ನು ಹಾಡುತ್ತ ಮೆರವಣಿಗೆಯಲ್ಲಿ ವಿವಿಧ 'ಆಕಾರ'ಗಳಲ್ಲಿ ಬಂದರು. ಡಬ್ಲ್ಯುಟಿಒಗೆ 'ಸಾವಿನ ಮೆರವಣಿಗೆ', ಹಾಗೂ ಬಹುರಾಷ್ಟ್ರೀಯ ಕಂಪನಿಗಳ 'ಮಾನವ ವಿರೋಧಿ ನೀತಿ'ಗಳನ್ನು ಚಿತ್ರಿಸುವ ವಿವಿಧ ರೀತಿಯ ಚಿತ್ರಣಗಳನ್ನು ಸ್ತಬ್ಧ ಚಿತ್ರಗಳನ್ನು ಮೆರವಣಿಗೆಯಲ್ಲಿ ತಂದಿದ್ದರು.

ನಗರದ ಉಷ್ಣಾಂಶ 8ರಿಂದ 10^0 ಸೆ. ಇತ್ತು. ಸಂಜೆ 3.00 ಗಂಟೆಗೆ ಬಂದರು ಬಳಿ ಮೆರವಣಿಗೆ ತಲುಪಿತು. ಡಬ್ಲ್ಯುಟಿಒ ಸಮ್ಮೇಳನ ನಡೆಯುವ ಸ್ಥಳಕ್ಕೆ ¼ ಕಿ.ಮೀ ಹತ್ತಿರದಲ್ಲಿ ಪೊಲೀಸರು ಮೆರವಣಿಗೆಯನ್ನು ತಡೆದರು. ಮೆರವಣಿಗೆ ಮುಂದಕ್ಕೆ ಹೋಗಲು ಪೊಲೀಸರು ಅವಕಾಶ ನೀಡುವುದಿಲ್ಲ ಎಂದು ತಿಳಿದ ಕೂಡಲೇ ಬದಿಯಲ್ಲಿದ್ದ ಆಳವಾದ ಸಮುದ್ರಕ್ಕೆ ಕೋರಿಯದ ಸುಮಾರು 50 ಜನ ರೈತರು ದುಮುಕಿ, ಸಭಾಂಗಣದ ಕಡೆ ಈಜತೊಡಗಿದರು.



ಹಾಂಗ್‌ಕಾಂಗ್: ಕೊನೆ ಕ್ಷಣದ ವರದಿ

WTO ಸಚಿವ ಸಭೆ ಸಭಾಂಗಣದತ್ತ ಪ್ರತಿಭಟನಾಕಾರರು....

ಹಾಂಗ್‌ಕಾಂಗ್ ಸಂಚಾರ ಅಸ್ತವ್ಯಸ್ತ

ಪತ್ರಿಕೆ ಮುದ್ರಣಕ್ಕೆ ಹೋಗುವ ಕೊನೆಯ ಕ್ಷಣದಲ್ಲಿ ಮೀನಾಕ್ಷಿಸುಂದರಂರವರು ಮಾಡಿರುವ ವರದಿ ಪ್ರಕಾರ ......

- ಹಾಂಗ್‌ಕಾಂಗ್ ಪ್ರತಿಭಟನೆ ತೀವ್ರಗೊಂಡಿದೆ.
- ಪ್ರತಿಭಟನಾಕಾರರು WTO ಸಚಿವ ಸಭೆ ನಡೆಯುತ್ತಿರುವ ಸಭಾಂಗಣದತ್ತ ನುಗ್ಗಿದ್ದಾರೆ.
- ಹಾಂಗ್‌ಕಾಂಗ್‌ನ ಅಮೆರಿಕಾ ವಾಣಿಜ್ಯ ಕೇಂದ್ರಕ್ಕೆ ತೆರಳಿದ ಪ್ರತಿಭಟನಾಕಾರರು ಅಲ್ಲಿನ ಗೋಡೆಗಳ ಮೇಲೆ 'ನೋ ಟು ವಾರ್' (ಯುದ್ಧ ಬೇಡ) - ನೋ ಟು WTO (WTO ಬೇಡ) ಎಂಬ ಬರಹ ಬರೆದಿದ್ದಾರೆ.
- ಸುಮಾರು 20 ಸಾವಿರವನ್ನು ಮೀರಿದ ಪ್ರತಿಭಟನಾಕಾರರ ವ್ಯಾಪಕ ಪ್ರತಿಭಟನೆಗಳಿಂದ ಹಾಂಗ್‌ಕಾಂಗ್ ಸಂಚಾರ ಅಸ್ತವ್ಯಸ್ತಗೊಂಡಿದೆ.

ವಿಪರೀತ ಚಳಿಯಲ್ಲಿ ಈ ಕೊರಿಯದ ರೈತರು ಮಾಡಿದ ಸಾಹಸ ಪೊಲೀಸರನ್ನು ತಬ್ಬಿಬ್ಬು ಮಾಡಿತು. ಹಡಗುಗಳಲ್ಲಿ ಬಂದ ಪೊಲೀಸರು ಅವರನ್ನು ದಡ ತಲುಪಿಸಿ ಪ್ರತಿಭಟನಾಕಾರರೊಂದಿಗೆ ಸೇರಿಸಿದರು. ಇತ್ತ ಪೊಲೀಸರ ಅಡ್ಡಗೋಡೆಯನ್ನು ಬೇಧಿಸಿ, ನುಗ್ಗಲು ಪ್ರತಿಭಟನಾಕಾರರು ಪ್ರಯತ್ನಿಸುತ್ತಿದ್ದರು.

ಪೊಲೀಸರು ಲಾಠಿ ಪ್ರಹಾರ ಮಾಡಲಿಲ್ಲ, ಅಶ್ರುವಾಯು ಪ್ರಯೋಗಿಸಲಿಲ್ಲ. ಬದಲಾಗಿ ಮೆಣಸಿನ (pepper) ಪುಡಿಯನ್ನು ಎರಚಿ ಪ್ರತಿಭಟನಾಕಾರರನ್ನು ಚದುರಿಸಿದರು. (ನಮ್ಮ ದೇಶದಲ್ಲಾಗಿದ್ದರೆ!! ಸ್ವಲ್ಪ ಆಲೋಚಿಸಿ ನೋಡಿ) ಪ್ರತಿಭಟನೆ ಇಡೀ ರಾತ್ರಿ ಮುಂದುವರೆಯಿತು. ಡಿಸೆಂಬರ್ 13ರಿಂದ ಪ್ರತಿದಿನ ಮೆರವಣಿಗೆ, ಕಾರ್ಯಾಗಾರ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಲಿವೆ. ಡಿಸೆಂಬರ್ 18ರಂದು ಡಬ್ಲ್ಯುಟಿಒ ಸಮ್ಮೇಳನದ ಕೊನೆಯ ದಿನ ಬಾರಿ ಬೃಹತ್ ಪ್ರತಿಭಟನೆ ನಡೆಯಲಿದೆ.




ನಿನ್ನೆ (15.12.2005) ನಡೆದ ಡಬ್ಲ್ಯು.ಟಿ.ಓ. ವಿರೋಧಿ ಪ್ರತಿಭಟನೆ ಶಾಂತಿಯುತವಾಗಿತ್ತು. ಮುಂಚೆ ಪೋಲೀಸರೊಂದಿಗೆ ಸಂಘರ್ಷಕ್ಕಿಳಿದಿದ್ದ ಕೊರಿಯಾದ ರೈತರು ಇಂದು ವಿಭಿನ್ನ ರೀತಿಯ ಪ್ರತಿಭಟನೆಗೆ ಮುಂದಾದರು. ಸುಮಾರು 1400 ಪ್ರತಿಭಟನಾ ಕಾರರು ಸಚಿವ ಮಟ್ಟದ ಸಭೆಯ ಸಭಾಂಗಣದ ಸಮೀಪದ ಬೀದಿಗಳಲ್ಲಿ ಪ್ರತಿಧ್ವನಿಸುತ್ತಿದ್ದ ...ಟೆಗಳ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ಪ್ರತಿ ಮೂರು ಹೆಜ್ಜೆಗಳಿಗೊಮ್ಮೆ ಮಂಡಿಯೂರಿ ನೆಲದ ಮೇಲೆ ಲಯಬದ್ಧವಾಗಿ ಲಾಗ ಹಾಕುತ್ತಾ ಡಬ್ಲ್ಯು.ಟಿ.ಓ. ವಿರೋಧಿ ಘೋಷಣೆ ಕೂಗುತ್ತಾ ಪ್ರತಿಭಟನಾ ಪ್ರದರ್ಶನ ನಡೆಸಿದರು. ರಸ್ತೆಯ ಇಬ್ಬದಿಗಳಲ್ಲೂ ಸಹಸ್ರಾರು ಜನರು ನಿಂತು ಈ ವಿನೂತನ ಪ್ರತಿಭಟನೆಗಳನ್ನು ನೋಡುತ್ತಿದ್ದರು. ಹೆಚ್ಚಿನ ಅಂಗಡಿ ಮುಂಗಟ್ಟುಗಳು ತೆರೆದಿದ್ದವು. ಪ್ರತಿಭಟನಾಕಾರರು ತಮ್ಮೊಂದಿಗೆ ತಂದಿದ್ದ ಧ್ವನಿವರ್ಧಕ ಮತ್ತು ವಾದ್ಯ ಸಾಧನಗಳನ್ನು 'ವ್ಯಾನ್ ಚೈ ಕಾರ್ಗೊ' ಪ್ರದೇಶಕ್ಕೆ ತೆಗೆದುಕೊಂಡು ಹೋಗಲು ಪೋಲೀಸರು ಅವಕಾಶ ನೀಡಲು ನಿರಾಕರಿಸಿದ್ದರಿಂದ ಸ್ವಲ್ಪ ಉದ್ವಿಗ್ನ ಪರಿಸ್ಥಿತಿ ನಿರ್ಮಾಣಗೊಂಡಿತ್ತು. ಗಲಭೆಗಳು ಸ್ಫೋಟಗೊಂಡರೆ ಅದಕ್ಕೆ ಪೊಲೀಸರೇ ಹೊಣೆ ಎಂದು ಪ್ರತಿಭಟನೆಕಾರರು ಎಚ್ಚರಿಸಿದ ಮೇಲೆ ಧ್ವನಿವರ್ಧಕ ಮತ್ತು ಸಂಗೀತ ಸಾಧನಗಳನ್ನು ಒಯ್ಯಲು ಅವಕಾಶ ನೀಡಲಾಯಿತು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮನ್ನಿಸದೇ ಅಪ್ರಜಾಸತ್ತಾತ್ಮಕವಾಗಿ ವರ್ತಿಸುತ್ತಿರುವ ಪೋಲೀಸರ ವರ್ತನೆಯನ್ನು 'ಕೊರಿಯನ್ ಪೆಸೆಂಟ್ಸ್ ಲೀಗ್' (ಕೊರಿಯಾದ ರೈತರ ಲೀಗ್)ನ ಪ್ರಧಾನ ಕಾರ್ಯದರ್ಶಿ ಪಾರ್ಕ್-ಮಿನ್-ಉಂಗ್ ತಮ್ಮ ಭಾಷಣದಲ್ಲಿ ಅತ್ಯುಗ್ರವಾಗಿ ಖಂಡಿಸಿದರು.

ಏಷ್ಯಾದ ವಿವಿಧ ದೇಶಗಳಿಂದ ಬಂದ ಸುಮಾರು 400 ಮಹಿಳೆಯರು ತಮಟೆ(ಡ್ರಂ) ವಾದ್ಯಗಳೊಂದಿಗೆ ಹಾಡಿ, ಕುಣಿದು, ಡಬ್ಲ್ಯು.ಟಿ.ಓ. ವಿರುದ್ಧ ಹಾಡು-ನೃತ್ಯ-ನಾಟಕ (ಜ್ಯುವೆಲ್ ಇನ್ ದ ಪ್ಯಾಲೆಸ್) ಗಳ ಪ್ರತಿಭಟನೆ ನಡೆಸಿದರು. ಇದೆಲ್ಲವೂ ಕಾಸ್‌ವೇ ಸಮುದ್ರ ತೀರದ ಬೀದಿಗಳಲ್ಲಿ ನಡೆದವು.

ಕೊರಿಯಾದ ಮಧ್ಯವಯಸ್ಕ ಕಿಮ್ ಜಾ ಇಮ್ ಕೊರಿಯಾದ ಗ್ರಾಮೀಣ ಪ್ರದೇಶಗಳಲ್ಲಿ ಉಂಟಾಗಿರುವ ಗಂಭೀರ ಬಿಕ್ಕಟ್ಟಿನ ಪರಿಸ್ಥಿತಿ, ಸಮಸ್ಯೆಯನ್ನು ಸರಿದೂಗಿಸಿ ಕುಟುಂಬವನ್ನು ಸಲಹುವ ಸಲುವಾಗಿ ದೊಡ್ಡ ಸಂಖ್ಯೆಯ ಜನರು ಗ್ರಾಮೀಣ ಪ್ರದೇಶಗಳನ್ನು ತೊರೆದಿರುವುದರಿಂದ ಇಡೀ ಇಡೀ ಗ್ರಾಮಗಳು ಜನವಿಲ್ಲದೆ ಮರಳು ಗಾಡಿನಂತಾಗುತ್ತಿರುವ ಪರಿಸ್ಥಿತಿಗಳನ್ನು ವಿವರಿಸುವಾಗ ದುಃಖ ತಡೆಯಲಾಗದೇ ಅವರ ಕಣ್ಣಿಂದ ಕಣ್ಣೀರು ಧಾರೆ ಧಾರೆಯಾಗಿ ಉಕ್ಕಿ ಬರುತ್ತಿತ್ತು.

ಥೈಲಾಂಡಿನ ಮಹಿಳೆಯರು ಹೇಳುತ್ತಿದ್ದ ವಿಚಾರಗಳು ಮತ್ತೂ ಆಘಾತಕಾರಿಯಾಗಿದ್ದವು. ವಿದೇಶದ ಸೋಯಾಬೀನ್, ಜೋಳ, ಮುಂತಾದವುಗಳೊಂದಿಗೆ ಸ್ಪರ್ಧಿಸಲಾರದೆ ಥೈಲಾಂಡಿನ ರೈತರು ತೀವ್ರವಾದ ಸಾಲ ಬಾಧೆಗೆ ಗುರಿಯಾಗಿದ್ದಾರೆ. ಇದರಿಂದಾಗಿ ಥೈಲಾಂಡ್‌ನಲ್ಲಿ ವೇಶ್ಯಾವಾಟಿಕೆಯ ಪ್ರವೃತ್ತಿ ತೀವ್ರವಾಗಿದೆ. ಬಿಕ್ಕಟ್ಟು ಪರಿಹಾರವಾಗದಿದ್ದಲ್ಲಿ ಈ ಸಮಸ್ಯೆ ಮತ್ತಷ್ಟು ತೀವ್ರಗೊಳ್ಳಲಿದೆ ಎಂದು ಅವರು ತಮ್ಮ ಆತಂಕಗಳನ್ನು ಹಂಚಿಕೊಳ್ಳುತ್ತಿದ್ದರು.



ಡಬ್ಲ್ಯುಟಿಓ ಸಚಿವ ಸಭೆ ಸಭಾಂಗಣದತ್ತ ಈಜಿ ಮುನ್ನುಗ್ಗುತ್ತಿರುವ ಪ್ರತಿಭಟನಾಕಾರರು.



ಲೋಹಪುರುಷರೊಬ್ಬರ ಭೇಟಿ!

ನಮ್ಮ ಸಂಪಾದಕರು ಅದೇ ರೀ 'ನಗಾರಿ' ಪತ್ರಿಕೆ ಸಂಪಾದಕರು ಫೋನ್ ಮಾಡಿ ಇತ್ತೀಚಿನ ಮಹತ್ವದ ರಾಜಕೀಯ ವಿದ್ಯಮಾನದ ಬಗೆಗೆ ತುರ್ತಾಗಿ ಪ್ರಮುಖ ರಾಜಕೀಯ ಮುಖಂಡರ ಸಂದರ್ಶನ ಮಾಡಬೇಕೂಂತ ಆದೇಶ ಕೊಟ್ಟು ಮಾತಾಡ್ತಾ ಇದ್ದರು. ಆಮೇಲೆ "ಲಾಲ್.........ಭೇಟಿ ಮಾಡಿ" ಅಂತೇನೋ ಕೇಳಿಸ್ತು. ದರಿದ್ರದ ನೆಟ್‌ವರ್ಕ್ ಪ್ರಾಬ್ಲಮ್ಮು ಪೂರ್ತಿ ಕೇಳಿಸಲಿಲ್ಲ.

"ಲಾಲ್ ಅಂದ್ರೆ ಯಾರು? ಲಾಲ್ ಜೆಂಡಾ ಪಾರ್ಟಿಯೋರಾ...?" ಅಂದೆ.

"ಅಯ್ಯೋ ಹುಚ್ಚಪ್ಪ. ಈ ವಿಷಯದಲ್ಲಿ ಅವರು ಯಾತಕ್ಕೂ ಬೇಡದವರು. ಅವರ್‍ನ ಬಿಡು. ನಾನು ಹೇಳಿದ್ದು ಲಾಲ್ ಕೃಷ್ಣಾ ಅಡ್ವಾಣಿ ಬಗ್ಗೆ" ಅಂದ್ರು.

ಸರಿ ನಾನು ಸೀದ ದೆಹಲಿಯಲ್ಲಿ ಬಿಜೆಪಿ ಕಛೇರಿಗೆ ಹೋಗಿ ನೋಡಿದರೆ, 'ಸಂದರ್ಶನಕ್ಕೆ ಯಾರಿಗೂ ಅವಕಾಶ ಇಲ್ಲ' ಅಂತಾ ಬೋರ್ಡ್ ಹಾಕಿಬಿಟ್ಟಿದ್ದಾರೆ. ಪಾಪ ವಿರೋಧ ಪಕ್ಷದ ಮುಖಂಡರು ನೋಡಿ ಪಾರ್ಲಿಮೆಂಟ್‌ನಲ್ಲಿ ಎಷ್ಟೋ ಪ್ರಶ್ನೆಗಳನ್ನು ಕೇಳಬೇಕಾಗತ್ತೆ. ಸಿದ್ಧತೆ ಮಾಡಿಕೊಳ್ತಾ ಇರ್ತಾರೆ. ಅದಕ್ಕೆ ಈ ಬೋರ್ಡು ಅಂತ ಯಾರೋ ಅಂದಿದ್ದು ಕೇಳಿಸ್ತು. ಪಾರ್ಲಿಮೆಂಟ್‌ನಲ್ಲಿ ಇವರು ಪ್ರಶ್ನೆ ಎಲ್ಲಿ ಕೇಳ್ತಾರೆ. ಸಂದರ್ಶನಕ್ಕೆ ಅವಕಾಶ ಸಿಕ್ತಾ ಇಲ್ಲ ಅಂತಾ ಸಂಪಾದಕರಿಗೆ ಫೋನ್ ಮಾಡಿದರೆ ಅವರೊಂದು ಉಪಾಯ ಹೇಳಿದರು. ತತ್‌ಕ್ಷಣ ಅಡ್ವಾಣಿಯವರ ಭೇಟಿಗೆ ಅವಕಾಶ ಸಿಕ್ಕೇಬಿಡ್ತು.

ಅಡ್ವಾಣಿಯವರ ರಾಜಕೀಯ ಕಾರ್ಯದರ್ಶಿಗಳು ನನ್ನನ್ನು ಅಡ್ವಾಣಿಯವರ ಬಳಿಗೆ ಕರೆತಂದುಬಿಟ್ಟರು. ಅಡ್ವಾಣಿಯವರೇ ನನ್ನನ್ನ ಬಹಳ ಉತ್ಸುಕರಾಗಿ ಸ್ವಾಗತಿಸಿದರು. ಮಾತೂ ಆಡಿದರು. "ನಿಮ್ಮ ಸಂಶೋಧನೆ ನಿಜಕ್ಕೂ ಐತಿಹಾಸಿಕ-ಅದ್ಭುತ. ಈ ಹಾಳು ವಿದೇಶಿ ಪಾಶ್ಚಾತ್ಯ ವಿಜ್ಞಾನ-ತಂತ್ರಜ್ಞಾನ ಎಲ್ಲ ಭಾರತಕ್ಕೆ ಬಂದು ನಮ್ಮ ಪಕ್ಷದ ಮಾನ ಮರ್ಯಾದೆ ಎಲ್ಲಾ ಹಾಳಾಗ್ತಿದೆ. ನೀವು ಸನಾತನ ವೇದ, ವಿಜ್ಞಾನದ ಆಧಾರದಲ್ಲಿ ರಹಸ್ಯ ಕ್ಯಾಮರಾಗಳನ್ನು ಪತ್ತೆಹಚ್ಚೋ 'ಅಂಜನಾಕ್ಷಿ' ಉಪಕರಣವನ್ನು ರೂಪಿಸಿರೋದು ಇಡೀ ದೇಶಕ್ಕೆ ಹೆಮ್ಮೆಯ ವಿಷಯ. ಬಿಜೆಪಿ ಪಕ್ಷಕ್ಕಂತೂ ಇದರಿಂದ ಈಗ ತುಂಬಾ ಸಹಾಯ ಆಗುತ್ತೆ. ಶಹಬ್ಬಾಸ್" ಅಂದ್ರು. "ಅಂಜನಾಕ್ಷಿಯನ್ನು ನಾಳೆ ತಂದುಕೊಡ್ಲೆ" ಅಂದೆ. "ನಾಳೆ ಬೇಡ. ಏನೇ ಆಗ್ಲಿ ಆ ಉಪಕರಣವನ್ನು ಪೂರ್ತಿಯಾಗಿ ಹೊರಗೆ ಪರೀಕ್ಷೆ ಮಾಡಿದ ನಂತರ ಮಾತ್ರ ಪಕ್ಷದ ಕಛೇರಿಗೆ ತರೋದೇ ಯಾವುದಕ್ಕೂ ಕ್ಷೇಮ ಅಲ್ವೇ" ಅಂತ ನಕ್ಕರು. ಆಮೇಲೆ ನಾನು ಹೇಳಿದೆ "ಹಿಂದೂ ಧರ್ಮವನ್ನು ಕಾಪಾಡೋದಕ್ಕೆ ಅವತಾರ ಎತ್ತೋ ಒಂದು ಪಾರ್ಟಿಗೆ ಶತ್ರುಗಳು ಇಂತಹ ಕಂಟಕಗಳನ್ನು ತರ್ತಾರೆ ಅನ್ನೋದನ್ನ ಸಾವಿರಾರು ವರ್ಷಗಳ ಮುಂಚೆನೇ ನಮ್ಮ ಪೂರ್ವಿಕರು ಕಂಡುಕೊಂಡು, ನೋಡಿ ಹೇಗೆ ಪರಿಹಾರ ಕೂಡ ಸೂಚಿಸಿದ್ದಾರೆ, ವೇದಗಳಲ್ಲಿ" ಅಂದೆ. ಅಡ್ವಾಣಿಯವರು ಇನ್ನಷ್ಟು ಪ್ರಸನ್ನವದನರಾದರು. ಆಮೇಲೆ ಈ ಉಪಕರಣವನ್ನು ಪಕ್ಷಕ್ಕೆ ಕೊಡಬೇಕಾದರೆ ನನ್ನದು ಒಂದು ಸಣ್ಣ ಷರತ್ತಿದೆ ಅಂದೆ. ಏನು ಅಂದ್ರು. ವೇದವಿಜ್ಞಾನದ ಆಧಾರದಲ್ಲಿ ಪಕ್ಷದ ಸಹಾಯಕ್ಕೆ ಇನ್ನಷ್ಟು ಉಪಕರಣಗಳನ್ನು ತಯಾರಿಸೋ ಆಲೋಚನೆ ನನ್ನದು. ಉದಾಹರಣೆಗೆ ಪಕ್ಷದ ಅಧ್ಯಕ್ಷರ ವಿರುದ್ಧ ಪಕ್ಷದ-ವಿರುದ್ಧ ಮತ್ತು ಯಾರು ಬಂಡೇಳುತ್ತಾರೆ ಅಂತ ಮುನ್ಸೂಚನೆ ಕೊಡೋ ಯಂತ್ರ. ಕೋಮುಗಲಭೆ ಮಾಡಿ ಬೆಂಕಿ ಹಚ್ಚೋದಕ್ಕೆ ಎಲ್ಲಿ ಒಳ್ಳೆ ಅವಕಾಶ ಇದೆ ಅಂತ ಪತ್ತೆ ಮಾಡೋ ಯಂತ್ರ. ಹೀಗೆ.........ಅದೆಲ್ಲಾ ಆಗಬೇಕೂಂದ್ರೆ ಪ್ರಸಕ್ತ ರಾಜಕೀಯ ಪರಿಸ್ಥಿತಿ ಬಗ್ಗೆ - ಪಕ್ಷದ ಭವಿಷ್ಯದ ಯೋಜನೆ, ಕಾರ್ಯತಂತ್ರದ ಬಗ್ಗೆ ತಮ್ಮ ಜೊತೆ ಚರ್ಚೆ ಮಾಡಿದರೆ ಇದಕ್ಕೆ ಬಹಳ ಅನುಕೂಲ ಆಗುತ್ತೆ. ಮತ್ತೆ ತಾವು ಸ್ವಲ್ಪ ಮುಕ್ತವಾಗಿ ಮಾತನಾಡಿದ್ರೆ ಇನ್ನೂ ತುಂಬಾ ಸಹಾಯ ಆಗುತ್ತೆ ಅಂದೆ. ಅವರು ಒಪ್ಪೇಬಿಟ್ಟರು! ಎಲ್ಲಾ ವೇದ ವಿಜ್ಞಾನದ ಮಹಿಮೆ!!

ಚರ್ಚೆಯ ಕೆಲವು ತುಣುಕು

ಅನಾಮಿಕ : ಅಡ್ವಾಣೀಜಿ, ಈ ಅಪರೇಷನ್ ದುರ್ಯೋಧನ್ ಹಗರಣದ ಪರಿಣಾಮ ಏನು ಪಕ್ಷದ ಮೇಲೆ?

ಅಡ್ವಾಣಿ: ಏನು ಇಲ್ಲ. ಇನ್ನೂ ಒಳ್ಳೆಯದೇ ಆಯ್ತು. ಈಗ ನಾವು ಆ ಕಮ್ಯೂನಿಸ್ಟ್ ಪಕ್ಷಗಳ ಬಗೆಗೆ ತನಿಖೆಗೆ ಒತ್ತಾಯಿಸಿ ಚಳುವಳಿ ಮಾಡ್ತೀವಿ.

ಅನಾಮಿಕ : ಈ ಕಮ್ಯೂನಿಸ್ಟ್ ಪಕ್ಷಗಳ ಎಂ.ಪಿ.ಗಳು ಯಾರೂ ಲಂಚ ತಗೊಂಡಿಲ್ವಲ್ಲಾ....!

ಅಡ್ವಾಣಿ : ಅದಕ್ಕೆ.... ಅದಕ್ಕೆ.... ತನಿಖೆಯಾಗಬೇಕು.

ನಾನು ತುಂಬಾ ದಿನದಿಂದ ನೋಡ್ತಾ ಇದೀನಿ. ಈ ಕಮ್ಯೂನಿಸ್ಟ್ ಪಕ್ಷಗಳವರು ಯಾವ ಹಗರಣದಲ್ಲಿ ಕೂಡಾ ಭಾಗಿಯಾಗ್ತಾ ಇಲ್ಲ. ಒಂದು ರಾಜಕೀಯ ಪಕ್ಷವಾಗಿ ಯಾವುದೇ ಹಗರಣದಲ್ಲೂ ಭಾಗಿ ಆಗೋಲ್ಲ ಅಂದರೆ ಏನು ಅರ್ಥ. ಆ ಮುಸಲ್ಮಾನರು ಈ ದೇಶದ ಮುಖ್ಯವಾಹಿನಿಗೆ ಬರಲ್ಲ. ಈ ಕಮ್ಯೂನಿಸ್ಟರು ರಾಜಕಾರಣದ ಮುಖ್ಯವಾಹಿನಿಗೆ ಬರಲ್ಲ. ಇದಕ್ಕೆಲ್ಲಾ ಕೊನೆ ಹಾಡಬೇಕು........ ಅಡ್ವಾಣಿ ಗುಡುಗಿದರು.

ಅನಾಮಿಕ : ಮತ್ತೊಂದು ಪ್ರಶ್ನೆ ಅಡ್ವಾಣೀಜಿ ಬಿಜೆಪಿ ಪಕ್ಷ ಪಾರ್ಲಿಮೆಂಟ್‌ನಲ್ಲಿ ಯಾವುದೇ ಕಲಾಪಗಳನ್ನು ನಡೆಯೋದಕ್ಕೆ, ಪ್ರಶ್ನೆ ಕೇಳೋದಕ್ಕೆ ಚರ್ಚೆ ಮಾಡೋದಕ್ಕೆ ಬಿಡದೆ ತನ್ನ ಪರಾಕ್ರಮ ಮೆರೆದಿದೆ. ಅದೇ ಸಮಯದಲ್ಲಿ ಪಕ್ಷದ ಸಂಸದರು ಪ್ರಶ್ನೆ ಕೇಳೋಕೆ ಅಂತ ಹಣ ತಗೊಂಡಿದ್ದಾರೆ. ಇದರಲ್ಲಿ ವೈರುಧ್ಯ ಇಲ್ವಾ?

ಅಡ್ವಾಣಿ : ವೈರುಧ್ಯ ಎಲ್ಲಿಲ್ಲಾ ಹೇಳಿ. ಎಲ್ಲಾ ಕಡೆ ಇದೆ. ಈಗ ನೋಡಿ ಬಾಬರಿ ಮಸೀದಿ ಒಡೆದು ಹಾಕಿದ್ದು ಶೌರ್ಯ ಅಂತ ಸಿಹಿ ಹಂಚೋ ಪಕ್ಷದಲ್ಲೇ 'ಅದು ಆಕಸ್ಮಿಕ-ಹಾಗಾಗಬಾರದಿತ್ತು' ಅಂತ ಭಾಷಣ ಮಾಡೋರು ಇಲ್ವೆ?

ಜಿನ್ನಾ ಜಾತ್ಯಾತೀತ ಅನ್ನೋರು-ಆತ ಕೋಮುವಾದಿ ಅನ್ನೋರು ಕಚ್ಚಾಡ್ತಾ ಒಂದೇ ಪಕ್ಷದಲ್ಲಿ ಇಲ್ವೆ? ಇದೆಲ್ಲಾ ಪಕ್ಷಕ್ಕೆ ಹೊಸದೇನಲ್ಲ.

ಅನಾಮಿಕ : ಅಡ್ವಾಣೀಜಿ ಮತ್ತೊಂದು ಪ್ರಶ್ನೆ. ಹಾಂಗ್‌ಕಾಂಗ್‌ನಲ್ಲಿ ಡಬ್ಲ್ಯುಟಿಒ ಸಚಿವ ಮಟ್ಟದ ಸಭೆ ನಡೀತಿದೆ. ಈ ಕಮ್ಯೂನಿಸ್ಟರೂ, ರೈತ ಸಂಘದವರು ಕಾಲೇಜು ವಿದ್ಯಾರ್ಥಿಗಳೂ ಕೊನೆಗೆ ಚಡ್ಡಿ ಸರಿಯಾಗಿ ಹಾಕಕ್ಕೆ ಬರದೇ ಇರೋ ಸ್ಕೂಲ್ ಮಕ್ಳೂ ಪ್ರತಿಭಟನೆ ಅಂತ ಕೂಗಾಡ್ತಿದ್ದಾರೆ. ಒಳಗೆ ಗಂಜಿ ಹಾಕಿ ಇಸ್ತ್ರಿ ಮಾಡಿದ ಸೊಗಸಾದ ಖಾಕಿ ಚಡ್ಡಿ ಹಾಕಿರೋ ತಮ್ಮ ಪಾರ್ಟಿ ಈ ಬಗ್ಗೆ ಏನೂ ಮಾತಾಡ್ತಾ ಇಲ್ವಲ್ಲ?

ಅಡ್ವಾಣಿ : ಇಲ್ಲಾ ನಾನಿದನ್ನ ಒಪ್ಪೋದಿಲ್ಲ. ರೈತರ ಬಗ್ಗೆ ನಮ್ಮ ಪಕ್ಷಕ್ಕೆ ಇರೋ ಕಳಕಳಿ ಬೇರೆ ಯಾರಿಗೂ ಇರೋಕೆ ಸಾಧ್ಯ ಇಲ್ಲ. ದೇಶದ ಬಗ್ಗೆ ಕೂಡ.... ಅಭಿವೃದ್ಧಿ ಅಂದ್ರೆ ಏನು? ನೋಡಿ ಅಮೇರಿಕಾದ ಜನರಲ್ಲಿ ಕೃಷಿ ಮಾಡೋರು ಶೇ.3-4 ಜನ ಅಷ್ಟೆ. ಜರ್ಮನಿ ಫ್ರಾನ್ಸ್‌ನಲ್ಲೂ ಅಷ್ಟೆ. ನಮ್ಮ ದೇಶದಲ್ಲಿ ನೋಡಿ 60-70ರಷ್ಟು ಜನ ಕೃಷಿ ಮೇಲೆ ಬಿದ್ದು ಒದ್ದಾಡ್ತಿದ್ದಾರೆ. ಅಲ್ಲಿ ತುಂಬಾ ಒತ್ತಡ ಆಗಿತ್ತು. ನಾವು ರೈತರನ್ನು ಕೃಷಿಕ್ಷೇತ್ರದಿಂದ ವರ್ಗಾವಣೆ ಮಾಡೋಕೆ ಪ್ಲಾನ್ ಮಾಡಿ ಯಶಸ್ವಿಯಾಗಿ ಜಾರಿ ಮಾಡಿದ್ವಿ.

ಅನಾಮಿಕ : ಎಲ್ಲಿಗೆ ವರ್ಗಾವಣೆ ಮಾಡಿದ್ರಿ

ಅಡ್ವಾಣಿ : ಅದೇ ರೀ ಕೈಲಾಸಕ್ಕೆ... ವೈಕುಂಠಕ್ಕೆ.... ಶಾಶ್ವತವಾದ ಶಾಂತಿ ಅಲ್ವೇ ಅಲ್ಲಿ. ಅಮೇರಿಕಾದವರೂ, ಜಪಾನ್‌ನವರೂ ಇದನ್ನು ತುಂಬಾ ಮೆಚ್ಕೊಂಡಿದ್ರು. ದುರದೃಷ್ಟದಿಂದ ನಮ್ಮ ಅಧಿಕಾರ ಹೊರಟು ಹೋದ ಮೇಲೆ ಈ ವರ್ಗಾವಣೆ ತುಂಬಾ ಕಮ್ಮಿ ಆಗಿ ಹೋಗಿದೆ. ಪೂರ್ತಿ ನಿಂತಿಲ್ಲ, ಈಗಲೂ ತಕ್ಕಮಟ್ಟಿಗೆ ನಡೀತಿದೆ ಅನ್ನೋದೇ ಸ್ವಲ್ಪ ಸಮಾಧಾನ. ಈಗ ಹಾಂಕಾಂಗ್‌ನಲ್ಲಿ ನಡೀತಿರೋ ಸಭೆಯಿಂದ ಈ ವರ್ಗಾವಣೆ ಕೆಲಸ ಮುಂದೆ ಸಲೀಸಾಗತ್ತೆ - ಮತ್ತು ಜಾಸ್ತಿ ಆಗುತ್ತೆ. ನಾವು ಯಾಕ್ ವಿರೋಧ ಮಾಡೋದು ಅಂತ ಸುಮ್ನಿದ್ದೀವಿ. 91ರಲ್ಲಿ ರಾಯರು ಹೊಸ ಆರ್ಥಿಕ ನೀತಿ ತಂದಾಗ 'ಇದು ನಾವು ತರಬೇಕೂಂತಿರೋ ನೀತಿ' ಅಂತ ಸುಮ್ನೆ ಬೆಂಬಲ ಕೊಟ್ವಲ್ಲಾ ಹಾಗೆ.

ಅನಾಮಿಕ : ಓಹೋ ಅರ್ಥ ಆಯ್ತು....

ಅಡ್ವಾಣೀಜಿ ಕೊನೆ ಪ್ರಶ್ನೆ. ನಮ್ಮ ವಿಕಾಸ ಪುರುಷ ಆಟಂಬಾಂಬಿನ ಗುಂಡಿಯನ್ನೇ ಕೈಯಲ್ಲಿ ಹಿಡ್ಕೊಂಡಿದ್ರೂ, ರಕ್ತ-ಯಾತ್ರೆಗಳ ವೀರ ತಾವೇ 'ರಕ್ಷಣಾ ಮಂತ್ರಿ'ಗಳಾಗಿದ್ರೂ ಕೂಡ ಎನ್‌ಡಿಎ ಕೂಟವನ್ನು ಕಳೆದ ಚುನಾವಣೆಯಲ್ಲಿ 'ರಕ್ಷಣೆ' ಮಾಡೋಕೆ ಆಗಿಲ್ವಲ್ಲ. ಅದಕ್ಕೆ ಏನಾದ್ರೂ ಕಾರಣ ಅಂತ ಪತ್ತೆ ಹಚ್ಚಿದ್ದೀರಾ?

ಅಡ್ವಾಣಿ : ಈ ಕಾರಣ ಹುಡುಕೋ ಕೆಲಸ ಮಾಡ್ತಾ ಇರೋದ್ರಿಂದ್ಲೆ ಇತ್ತೀಚೆಗೆ ಯಾವ್ದೂ ಯಾತ್ರೆಗೀತ್ರೆ ಮಾಡೋದಕ್ಕೆ ಆಗ್ಲಿಲ್ಲ, ಇರ್‍ಲಿ. ಎಲ್ಲಾ ಸೇರಿ ಈಗ ಕಾರಣ ಪತ್ತೆ ಹಚ್ಚಿದೀವಿ. ಎನ್.ಡಿ.ಎ. ಕೂಟ ಚುನಾವಣೆಯಲ್ಲಿ ಸೋಲೋದಕ್ಕೆ ಕಾರಣ ಆರು ವರ್ಷ ಆಡಳಿತ ನಡೆಸಿದೆವೆಲ್ಲಾ 'ಪಾರ್ಲಿಮೆಂಟ್ ಭವನ' ಅದರ ವಾಸ್ತು ಸರಿಯಿಲ್ಲ. ಹೀಗಾಗಿ ನಮ್ಮ ಮುಂದಿನ ಕಾರ್ಯಕ್ರಮ ಪಾರ್ಲಿಮೆಂಟ್ ಭವನದ ವಾಸ್ತು ಬದಲಾವಣೆ.

ಅನಾಮಿಕ : "ನಮಸ್ಕಾರ, ಲೋಹಪುರಷರಿಗೆ" ಅಂತ ಹೇಳಿ ಹೊರಬಂದು ಪಾರ್ಲಿಮೆಂಟಿನ ಕಡೆ ಹೆಜ್ಜೆ ಹಾಕಿದೆ. ಯಾಕೆಂದರೆ ಮುಂದಿನ ಸಾರಿ ದೆಹಲಿಗೆ ಬರೋವಾಗ ಪಾರ್ಲಿಮೆಂಟ್‌ಭವನ ಅಂಬೋದು ಇರುತ್ತೋ... ಇಲ್ಲಾ ಬಾಬರಿ ಮಸೀದಿ ಥರಾ.... ಅಂತ ಅನುಮಾನ ಆಯ್ತು. ಒಂದು ಸಾರಿ ಕಣ್ತುಂಬ ಪಾರ್ಲಿಮೆಂಟ್ ಭವನ ತುಂಬ್ಕೊಂಡು ಬ್ಯಾಂಗ್ಲೋರ್ ಕಡೆಗೆ ಕ್ಷಮಿಸಿ ಬೆಂಗಳೂರು ಕಡೆಗೆ ದಾರಿ ಹಿಡಿದೆ.

ಅಡ್ವಾಣೀಜಿಯವರೊಂದಿಗಿನ ಆಪ್ತ ಮಾತುಕತೆಯ ವರದಿ ನಿಮ್ಮ ಮುಂದಿದೆ. 'ನಗಾರಿ' ಒಂದು ಅನಿಯತಕಾಲಿಕ ಆದ್ರಿಂದ ಅದರ ಸಹೋದರ ಪತ್ರಿಕೆಯಾದ 'ಐಕ್ಯರಂಗ'ದಲ್ಲಿ ಪ್ರಕಟವಾಗ್ತಿದೆ. ಸಹಕರಿಸಿ.

- ಅನಾಮಿಕ

ವಿಶ್ವಸಂಸ್ಥೆ ಬೆಳವಣಿಗೆ ವರದಿ - 2005

ಹಸುಳೆಗಳ ಜೀವ ಸವರುವ ಹಸಿವೆಂಬೋ ರಕ್ಕಸ



ದೃಶ್ಯ 1 : ಜರ್ಮನ್ ಕಾದಂಬರಿಕಾರ ಬ್ರುನೋ ಅಪಿಟ್ಸ್ ತನ್ನ ಪ್ರಸಿದ್ಧ ಕಾದಂಬರಿ 'ನೇಕೆಡ್ ಎಮೊಂಗ್ ವೂಲ್‌ವ್ಸ್'ನಲ್ಲಿ ಎರಡನೇ ಮಹಾಯುದ್ಧದ ಜರ್ಮನಿಯ ನಾಜಿ ಯಾತನಾ ಶಿಬಿರದಲ್ಲಿ ಬಂಧಿಗಳು ಎಳೆ ಹಸುಳೆಯೊಂದರ ಜೀವ ರಕ್ಷಿಸಿದ ಘಟನೆಯನ್ನು ಮಾರ್ಮಿಕವಾಗಿ ವರ್ಣಿಸಿದ್ದಾನೆ. ಜರ್ಮನ್ ಯಾತನಾ ಶಿಬಿರದಲ್ಲಿ ಕೈದಿಗಳು ಎಳೆಯ ಮಗುವೊಂದನ್ನು ನಂಬಲು ಸಾಧ್ಯವಾಗದ ರೀತಿಯಲ್ಲಿ ರಕ್ಷಿಸಿದ್ದರು. ಇದಕ್ಕಾಗಿ ಕ್ರೂರ ಚಿತ್ರಹಿಂಸೆ, ಹಸಿವು, ವಿದ್ಯುತ್ ಆಘಾತ ಹಾಗೂ ಸಾವನ್ನೂ ಸಹಾ ಎದುರಿಸಿದ್ದರು. ಸೋವಿಯತ್ ಸೈನ್ಯಗಳು ಯಾತನಾ ಶಿಬಿರದ ಕದಗಳನ್ನು ಒಡೆದು ತೆರೆದಾಗ, ಹೊರಗೋಡಿ ಬಂದ ಯಾತನಾ ಶಿಬಿರದ ಬಂಧಿಗಳು ತಾವು ಸಾವನ್ನು ಮೀರಿ ರಕ್ಷಿಸಿದ ಈ ಎಳೆ ಹಸುಳೆಯನ್ನು ಬಿಡುಗಡೆಯ ಸಂತೋಷ ಸಂಭ್ರಮದಲ್ಲಿ ಬಹುಮಾನದ ಪಾರಿತೋಷಕ ರೂಪದಲ್ಲಿ ಎತ್ತಿ ಹಿಡಿದು ಸಂತಸಪಟ್ಟರು. ಮಗುವನ್ನು ರಕ್ಷಿಸಿದ್ದೇವೆ, ಫ್ಯಾಸಿಸಂಗೆ ಸೋಲಾಯಿತು ಎಂಬ ಘೋಷಣೆಗಳು ಮೊಳಗಿದವು.

ದೃಶ್ಯ 2 : ವಿಶ್ವಸಂಸ್ಥೆಯ ಬೆಳವಣಿಗೆ ವರದಿ-2005 ಇನ್ನೊಂದು ಕಥೆಯನ್ನು ಹೇಳುತ್ತದೆ. ಇದು ಒಂದು ಮಗುವಿನ ಕಥೆಯಲ್ಲ, ಬದಲಾಗಿ ವಿಶ್ವದಲ್ಲಿ ಯಾರೂ ಇವರ ಬಗ್ಗೆ ಕಾದಂಬರಿಗಳನ್ನು ಬರೆಯದ ಲಕ್ಷಾಂತರ ಮಕ್ಕಳ ಕಥೆ ಇದಾಗಿದೆ. ಜಗತ್ತಿನಾದ್ಯಂತ ಮುಖ್ಯವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಪ್ರತಿ ಗಂಟೆಗೆ 1200 ಮಕ್ಕಳು ಸಾವನ್ನಪ್ಪುತ್ತಿದ್ದಾರೆ. ತಿಂಗಳಿಗೆ ಸರಾಸರಿ 9 ಲಕ್ಷ ಮಕ್ಕಳು, ವರ್ಷಕ್ಕೆ ಈ ಸಂಖ್ಯೆ 1 ಕೋಟಿ ಮೀರುತ್ತದೆ. ಯಾವುದೇ ಕಾದಂಬರಿಗಳಲ್ಲಿ ಬಾರದ ಲಕ್ಷಾಂತರ ಮಕ್ಕಳ ಕಥೆ ಇದಾಗಿದೆ. ವಿಶ್ವಸಂಸ್ಥೆ ವರದಿ ಪ್ರಕಾರ ಪ್ರತಿ ತಿಂಗಳು 3 ಬಾರಿ ಸುನಾಮಿ ದುರಂತ ನಡೆದರೆ ಸಾಯುವವರ ಸಂಖ್ಯೆ ವಿಶ್ವಾದ್ಯಂತ ಪ್ರತಿವರ್ಷ ಸಾವನ್ನಪ್ಪುವ ಮಕ್ಕಳ ಸಂಖ್ಯೆಗೆ ಸಮನಾಗಿರುತ್ತದೆ. ಈ ಅಮಾಯಕ ಮುಗ್ಧ ಕಂದಮ್ಮಗಳ ಸಾವಿಗೆ ಒಂದೇ ಕಾರಣ ಬಡತನ. ಆದರೆ ಬಡತನ ನಿರ್ಮೂಲನೆ ಸಾಧ್ಯವಿಲ್ಲವೇ? ಶ್ರೀಮಂತರು, ಶ್ರೀಮಂತ ರಾಷ್ಟ್ರಗಳು ಈ ಅಸಹಾಯಕ ಮಕ್ಕಳ ಸಾವಿನ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಶುದ್ಧ ಕುಡಿಯುವ ನೀರಿನ ಕೊರತೆ, ವಾಂತಿ-ಭೇದಿಯಿಂದ ಲಕ್ಷಾಂತರ ಮಕ್ಕಳು ವಿಶ್ವದಾದ್ಯಂತ ಸಾವನ್ನಪ್ಪುತ್ತಿವೆ. ಬೆಚ್ಚನೆಯ ಉಡುಪಿನ ಕೊರತೆಯಿಂದ ನ್ಯುಮೋನಿಯಾ ರೋಗಕ್ಕೆ ಒಳಗಾಗಿ ಇನ್ನಷ್ಟು ಮಕ್ಕಳು ಸಾಯುತ್ತಿವೆ. ಆದರೆ ಮಕ್ಕಳ ಅತಿ ದೊಡ್ಡ ಕ್ರೂರ ಹಂತಕನೆಂದರೆ - ಹಸಿವು. ಈ ವಿಶ್ವದಲ್ಲಿ ಎಷ್ಟು ಬಡತನವಿದ್ದರೂ [illegible]ದರೆ ಕೋಟ್ಯಾಂತರ ಮಕ್ಕಳಿಗೆ ಎರಡು ತುಣುಕು ಆಹಾರ ದೊರೆಯುವುದು ಸಹಾ ಕಷ್ಟವಾದುದರಿಂದ ಈ ಮಕ್ಕಳು 5ನೇ ವರ್ಷ ವಯಸ್ಸಿಗೆ ಮುಂಚೆಯೇ ಸಾವನಪ್ಪುತ್ತವೆ.

(ಸಂಗ್ರಹ : ಮೆಲ್ಕಿಯೋರ್.ಡಿ.ಆರ್)

ಹೆರಾಲ್ಡ್ ಪಿಂಟರ್ - ಇಂಗ್ಲೀಷ್ ನಾಟಕಕಾರನಿಗೆ ನೊಬೆಲ್ ಪ್ರಶಸ್ತಿ

ನರಮೇಧದ ಅಪರಾಧಕ್ಕಾಗಿ ಬ್ಲೇರ್‌ನನ್ನು ಬಂಧಿಸಿ

ಪ್ರಶಸ್ತಿ ಸ್ವೀಕಾರ ಸಮಾರಂಭದಲ್ಲಿ ಪಿಂಟರ್ ಆಗ್ರಹ

ಖ್ಯಾತ ಬ್ರಿಟಿಷ್ ನಾಟಕಕಾರ ಹೆರಾಲ್ಡ್ ಪಿಂಟರ್ ತಮ್ಮ ಸಾಹಿತ್ಯಿಕ ಕೊಡುಗೆಗಳಿಗಾಗಿ ನೊಬೆಲ್ ಪ್ರಶಸ್ತಿ ಗಳಿಸಿದ್ದಾರೆ. ಪಿಂಟರ್ ಕೇವಲ ಸಾಹಿತಿಯಲ್ಲ. ಯುದ್ಧ ವಿರೋಧಿ - ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಗಳಲ್ಲೂ ತೊಡಗಿಸಿಕೊಂಡ ಕ್ರಿಯಾಶೀಲರಾಗಿದ್ದಾರೆ. ತಮ್ಮ ಹರಿತವಾದ ವ್ಯಂಗ್ಯಕ್ಕೆ ಹೆಸರಾದ ಪಿಂಟರ್ ನೊಬೆಲ್ ಪ್ರಶಸ್ತಿ ಸ್ವೀಕಾರ ಸಮಾರಂಭದಲ್ಲಿ ಸಾಮ್ರಾಜ್ಯಶಾಹಿ ಯುದ್ಧಗಳ ಮೂಲಕ ಲಕ್ಷಾಂತರ ಜನರ ನರಮೇಧಕ್ಕೆ ಕಾರಣವಾಗಿರುವ ಬ್ರಿಟನ್ ಪ್ರಧಾನಿ ಟೋನಿಬ್ಲೇರ್‌ನನ್ನು ಬಂಧಿಸಿ ಕಟಕಟೆಗೆ ಎಳೆಯಬೇಕೆಂದೂ ಆಗ್ರಹಿಸಿದ್ದಾರೆ. ಅಮೆರಿಕಾದ ಅಧ್ಯಕ್ಷ ಜಾರ್ಜ್ ಬುಶ್ ವಿರುದ್ಧವೂ ತೀಕ್ಷ್ಣವಾಗಿ ಹರಿಹಾಯ್ದಿದ್ದಾರೆ.

"…. ನೈಜತೆ ಮತ್ತು ಸುಳ್ಳಿನ ನಡುವೆ ಭಾರಿ ವ್ಯತ್ಯಾಸಗಳೇನಿಲ್ಲ….. ಯಾವುದೇ ಒಂದು ಸಂಗತಿ ನಿಜ ಅಥವಾ ಸುಳ್ಳು ಎರಡರಲ್ಲಿ ಒಂದೇ ಇರಬೇಕಾಗಿಲ್ಲ. ಎರಡೂ ಆಗಿರಬಹುದು. ಇವೆಲ್ಲ ನೈಜತೆಯನ್ನು ಕಲೆಯ ಮೂಲಕ ಅನ್ವೇಷಿಸುವ ಬಗ್ಗೆ [illegible]ಳುವಾಗ ಒಪ್ಪಬಹುದಾದಂಥವು. ಲೇಖಕನಾಗಿ [illegible]ನು ಇದನ್ನೆಲ್ಲಾ ಒಪ್ಪುತ್ತೇನೆ. ಆದರೆ ಒಬ್ಬ ನಾಗರಿಕನಾಗಿ ಇದನ್ನು ಒಪ್ಪಲಾರೆ. ಯಾವುದು ನಿಜ? ಯಾವುದು ಸುಳ್ಳು? ಎಂಬ ಪ್ರಶ್ನೆ ನಾನು ಕೇಳಬೇಕು…..

ನರಮೇಧ ಮತ್ತು ಯುದ್ಧಕೋರ ಅಪರಾಧಿ ಎಂದು ಕರೆಯಬೇಕಾದರೆ ಎಷ್ಟು ಜನರನ್ನು ಕೊಲ್ಲಬೇಕು? ಒಂದು ಲಕ್ಷ ಜನರನ್ನು? ಸಾಕು ಎಂದು ಕೊಂಡಿದ್ದೇನೆ. ಬುಶ್ ಮತ್ತು ಬ್ಲೇರ್‌ರನ್ನು ಅಂತರರಾಷ್ಟ್ರೀಯ ಕ್ರಿಮಿನಲ್ ಕೋರ್ಟು ಮುಂದೆ ಎಳೆಯಬೇಕು. ಆದರೆ ಬುಶ್ ಜಾಣ. ಆತ [illegible]ರರಾಷ್ಟ್ರೀಯ ಕೋರ್ಟನ್ನು ಮನ್ನಿಸಲೇ ಇಲ್ಲ… ಆದರೆ ಬ್ಲೇರ್ ಮನ್ನಿಸಿದ್ದಾನೆ. ಆದ್ದರಿಂದ ಆತನನ್ನು ಕೋರ್ಟಿಗೆ ಎಳೆಯಬಹುದು. ಕೋರ್ಟಿಗೆ ಬ್ಲೇರ್ ವಿಳಾಸ ಗೊತ್ತಿಲ್ಲದಿದ್ದರೆ, ಆತನ ವಿಳಾಸ ಈ ಮೂಲಕ ಕೊಡಬಯಸುತ್ತೇನೆ. ಆತನ ವಿಳಾಸ 10, ಡ[illegible]ಗ್ ಬೀದಿ, ಲಂಡನ್…'

ಸನ್ನಿವೇಶ ಮತ್ತು ಈ ವ್ಯಕ್ತಿ ಬಗ್ಗೆ ಗೊತ್ತಿಲ್ಲದಿರುವವರಿಗೆ ಈತ ಯಾರು ಎಂದು ಊಹಿಸಲೂ ಸಾಧ್ಯವಿಲ್ಲ. ಇದು ಈ ವರ್ಷದ ನೊಬೆಲ್ ಸಾಹಿತ್ಯ ಪ್ರಶಸ್ತಿ ವಿಜೇತ ಪ್ರಸಿದ್ಧ ಬ್ರಿಟಿಷ್ ನಾಟಕಕಾರ ಹೆರಾಲ್ಡ್ ಪಿಂಟರ್‌ನ ನೊಬೆಲ್ ಪ್ರಶಸ್ತಿ ಸ್ವೀಕಾರ ಸಂದರ್ಭದ ಭಾಷಣದಿಂದ ಆಯ್ದ ಭಾಗಗಳು ಎಂದು ನಂಬಲೂ ಸಾಧ್ಯವಿಲ್ಲ.

ಹಿಂದೆ ಸಾಹಿತ್ಯ ಮತ್ತು ಶಾಂತಿಗೆ ನೊಬೆಲ್ ಪ್ರಶಸ್ತಿ ಸಾಮಾನ್ಯವಾಗಿ ವಿವಾದಾತ್ಮಕವಾಗಿರುತ್ತಿತ್ತು. (ಇತರ ಭೌತಶಾಸ್ತ್ರ, ರಸಾಯನಶಾಸ್ತ್ರ- ಇತ್ಯಾದಿಗಳು ಇದಕ್ಕೆ ತೀರಾ ಅಪವಾದವೇನಲ್ಲ!) ಯುರೋ-ಅಮೇರಿಕನ್ ಕೇಂದ್ರಿತ ಅಥವಾ ಯುರೋ-ಅಮೇರಿಕನ್ ಸಾಮ್ರಾಜ್ಯಶಾಹಿ ವ್ಯವಸ್ಥೆಗೆ ಹಿಡಿಸುವವರು ಮಾತ್ರ ಈ ಪ್ರಶಸ್ತಿಗೆ ಲಾಯಕ್ಕು ಎಂದು ಭಾವಿಸಲಾಗುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಸಾಹಿತ್ಯ ಪ್ರಶಸ್ತಿ ಬಗೆಗಂತೂ ಇದು ಬದಲಾಗಿದೆ ಎಂದು ಕಾಣುತ್ತದೆ. ಬಹುಶಃ ಸಾಹಿತ್ಯ ನೊಬೆಲ್ ಪ್ರಶಸ್ತಿಯ ವಿಶ್ವಾಸಾರ್ಹತೆ ಉಳಿಸಲು ಇರಬ[illegible]ದು. ಸಾಮ್ರಾಜ್ಯಶಾಹಿ ವ್ಯವಸ್ಥೆಯ ಕಟು ವಿರೋಧಿ ಬಂಡಾಯ ಲೇಖಕರಿಗೆ ಪ್ರಶಸ್ತಿ ದೊರಕುತ್ತಿದೆ. ಹೆರಾಲ್ಡ್ ಪಿಂಟರ್ ಯುದ್ಧ-ವಿರೋಧಿ ಶಾಂತಿಪರ ಲೇಖಕ ಮಾತ್ರವಲ್ಲ, ವ್ಯವಸ್ಥೆಯ ವಿರುದ್ಧ ಬಂಡೆದ್ದ ಲೇಖಕ ಕೂಡಾ. ಇವರು ಇರಾಕ್ ಯುದ್ಧ ವಿರೋಧಿ ಚಳುವಳಿಯ ಪ್ರಮುಖ ಪಾತ್ರ ವಹಿಸಿದ್ದರು.

ಪಿಂಟರ್ ಥರ

ಪಿಂಟರ್ ಇಪ್ಪತ್ತನೇ ಶತಮಾನದ ಉತ್ತರಾರ್ಧದ ಅತ್ಯಂತ ಪ್ರಮುಖ ನಾಟಕಕಾರ ಎಂದು ಪರಿಗಣಿಸಲ್ಪಡುತ್ತಾನೆ. ಇದಲ್ಲದೆ ಕವನ, ನಟನೆ, ನಾಟಕ-ನಿರ್ದೇಶನ, ರೇಡಿಯೋ-ನಾಟಕ, ಟೆಲಿವಿಶನ್-ಫಿಲಂ ಸಂಭಾಷಣೆಯಲ್ಲೂ ಪಿಂಟರ್ ವ್ಯಾಪಕ ಕೃಷಿ ನಡೆಸಿದ್ದಾರೆ. 1973ರಿಂದ ಮಾನ[illegible]ಗಳ ಮತ್ತು ಯುದ್ಧ ವಿರೋಧಿ ಪ್ರತಿಪಾದಕ - ಪ್ರಚಾರಕನಾಗಿ ಹೆಸರು ಪಡೆದಿದ್ದಾರೆ. ಪಿಂ[illegible]ರ ಅತ್ಯಂತ ಪ್ರಮುಖ ಕೊಡುಗೆ ನಾಟಕದಲ್ಲಿ, ಅಸಂಗತ ನಾಟಕದ ಪ್ರಕಾರವನ್ನು ಪಿಂಟರ್ ಆರಂಭಿಸಿದರು. ಅದು ಆಮೇಲೆ 'ಕಂಟಕಗಳ ಕಾಮೆಡಿ' ಎಂಬ ಹೊಸ ನಾಟಕ ಪ್ರಕಾರವಾಗಿ ಪಿಂಟರ್ ನಾಟಕಗಳು ಪರಿಗಣಿಸಲ್ಪಟ್ಟವು. ಆಮೇಲಿನ ಹಂತಗಳಲ್ಲಿ 'ಮನೋವೈಜ್ಞಾನಿಕ ವಾಸ್ತವವಾದ' ಮತ್ತು



ರಾಜಕೀಯ ವ್ಯಂಗ್ಯ ನಾಟಕಗಳತ್ತ ಪಿಂಟರ್ ವಾಲಿದ. ಪಿಂಟರ್‌ನ ನಾಟಕಗಳು ಇಂಗ್ಲೀಷ್ ನಾಟಕಲೋಕದಲ್ಲಿ ವಿಶಿಷ್ಟ ಛಾಪು ಮೂಡಿಸಿವೆ. ನಾಟಕಗಳಲ್ಲಿ ಮೂಡಿಸುವ ವಿಶಿಷ್ಟ ಪರಿಸರ, ಸನ್ನಿವೇಶವನ್ನು ವಿವರಿಸಲು 'ಪಿಂಟರ್ ಥರ' ಎಂದು ಹೊಸ ಶಬ್ಧ ಬಳಕೆಯಾಗುವಷ್ಟು ಪಿಂಟರ್ ಪ್ರಭಾವ ಇಂಗ್ಲೀಷ್ ನಾಟಕದಲ್ಲಿ ಆಗಿದೆ.

ವ್ಯಾಪಕ ಕೃಷಿ

1930ರಲ್ಲಿ ಪೂರ್ವ ಲಂಡನ್‌ನಲ್ಲಿ ಜ್ಯೂ ಕುಟುಂಬದಲ್ಲಿ ಹುಟ್ಟಿದ ಪಿಂಟರ್ ಎರಡನೇ ಮಹಾಯುದ್ಧದಲ್ಲಿ ಲಂಡನ್ ಮೇಲೆ ಭಾರಿ ಬಾಂಬ್ ದಾಳಿ, ಯುರೋಪಿನಾದ್ಯಂತ ಕಂಡುಬಂದ ಜ್ಯೂ-ದ್ವೇಷದ ಕಹಿ ಉಂಡ ಪಿಂಟರ್, ಇದು ತಾನು ನಾಟಕಕಾರನಾಗುವುದರಲ್ಲಿ ಮುಖ್ಯ ಪಾತ್ರ ವಹಿಸಿತು ಎನ್ನುತ್ತಾರೆ. ಇಪ್ಪತ್ತಕ್ಕೂ ಹೆಚ್ಚಿನ ಅವರ ನಾಟಕಗಳು ಅವರ ಮುಖ್ಯ ಕೊಡುಗೆ ಎಂದು ಪರಿಗಣಿಸಲಾಗಿದೆ. ಅವರ ಪ್ರಮುಖ ಪ್ರಸಿದ್ಧ ನಾಟಕಗಳು 'ಡಂಬ್ ವೈಟರ್', 'ಕೇರ್‌ಟೇಕರ್', 'ಹೋಮ್‌ಕಮಿಂಗ್', 'ಲ್ಯಾಂಡ್‌ಸ್ಕೇಪ್', 'ಸೈಲೆನ್ಸ್', 'ಒನ್ ಫೋರ್ ದ ರೋಡ್', 'ಫೌಂಟನ್ ಲಾಂಗ್ವೇಜ್', 'ನೋ ಮ್ಯಾನ್ಸ್ ಲ್ಯಾಂಡ್', 'ದಿ ನ್ಯೂ ವರ್ಲ್ಡ್ ಆರ್ಡರ್' - ಇವು ಅವರ ಕೆಲವು ಪ್ರಮುಖ ನಾಟಕಗಳು ಅವರ ಇಪ್ಪತ್ತಕ್ಕೂ ಹೆಚ್ಚು ನಾಟಕ ಪ್ರದರ್ಶನಗಳು ಪ್ರಸಿದ್ಧವಾಗಿವೆ. ಇವುಗಳಲ್ಲಿ ಪಿಂಟರ್ ನಿರ್ದೇಶಿಸಿದ ಸ್ವತಃ ಅವರ ನಾಟಕಗಳೇ ಸೇರಿವೆ. ಇದಲ್ಲದೆ ಚಿತ್ರ ಸಂಭಾಷಣೆ ಬರೆದ 'ದಿ ಸರ್ವೆಂಟ್', 'ದಿ ಗೋ ಬಿಟ್‌ವೀನ್', 'ಫ್ರೆಂಚ್ ಲೆಫ್ಟಿನೆಟ್ಸ್ ವೂಮನ್' - ಇವು ಪ್ರಸಿದ್ಧವಾಗಿವೆ. ಪಿಂಟರ್ ನಟನಾಗಿಯೂ ಪ್ರಸಿದ್ಧರಾಗಿದ್ದು, ಮೊದಲ ಅವಧಿಯಲ್ಲಿ ನಾಟಕ ನಟನೆ-ನಿರ್ದೇಶನ-ತಯಾರಿಕೆಯನ್ನೇ ಉದ್ಯೋಗ ಮಾಡಿಕೊಂಡಿದ್ದರು. ಪಿಂಟರ್ ಇಂಗ್ಲೀಷ್ ನಾಟಕಕ್ಕೆ ಅದರ ಮೂಲ ಧಾತುಗಳನ್ನು ಮರಳಿಸಿದ ಎಂದು ಹೇಳಲಾಗುತ್ತದೆ. ಊಹಿಸಲಾಗದ ಸಂಭಾಷಣೆ, ಸೀಮಿತ ಸನ್ನಿವೇಶ/ಜಾಗದಲ್ಲಿ ಇರುವ ಪಾತ್ರಗಳು, ಎಲ್ಲಾ ಸೋಗು ಕಳಚಿ ಬಿದ್ದು ಮಾತನಾಡಬೇಕಾದ ಪರಿಸ್ಥಿತಿ ಇವು ಪಿಂಟರ್‌ನ ನಾಟಕಗಳ ವಿಶಿಷ್ಟತೆ ಎನ್ನಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಪಿಂಟರ್ ಸಾಮ್ರಾಜ್ಯಶಾಹಿ ಕ್ರೌರ್ಯ ಮತ್ತು ಮಾನವ ಹಕ್ಕು - ಶಾಂತಿ ಪರವಾಗಿ ದನಿ ಎತ್ತಿದ್ದಕ್ಕೆ ಪ್ರಸಿದ್ಧರಾದರು. 70 ದಶಕದಲ್ಲಿ ಸಿ.ಎನ್.ಡಿ. (ಅಣು ನಿಶ್ಶಸ್ತ್ರೀಕರಣಕ್ಕಾಗಿ ಆಂದೋಲನ)ಯ ಪ್ರಮುಖ ಕಾರ್ಯಕರ್ತನಾಗಿ ಹಾಗೂ ಇತ್ತೀಚೆಗೆ ಸರ್ಬಿಯಾದಲ್ಲಿ ನಾಟೋ ಬಾಂಬ್ ದಾಳಿ, ಇರಾಕ್‌ನಲ್ಲಿ ಅಮೆರಿಕಾ ಅತಿಕ್ರಮಣದ ವಿರುದ್ಧ ತಮ್ಮ ದನಿ ಎತ್ತಿದ್ದಾರೆ. ನೊಬೆಲ್ ಪ್ರಶಸ್ತಿ ಸ್ವೀಕಾರ ಭಾಷಣದಲ್ಲಿ ಬುಶ್-ಬ್ಲೇರ್ ಗ್ಯಾಂಗ್ ಬಗ್ಗೆ ಕಟುವಾಗಿ ಟೀಕಿಸಿದ್ದಾರೆ. ತಮ್ಮ ಪ್ರಖರ ವ್ಯಂಗ್ಯವನ್ನು ಅವರ ಮೇಲೆ ಹರಿಯಬಿಟ್ಟಿದ್ದಾರೆ. ('ಪಿಂಟರ್-ಬುಶ್‌ರ ಭಾಷಣ ಬರೆದರೆ' ಬಾಕ್ಸ್ ನೋಡಿ). ರಾಜಕೀಯ-ಮಿಲಿಟರಿ ಶಕ್ತಿಗೆ ಎಲ್ಲರೂ ಬೌದ್ಧಿಕ ಶರಣಾಗತಿ ಆಗುತ್ತಿರುವ ಇಂತಹ ಸಂದರ್ಭದಲ್ಲಿ ಪಿಂಟರ್ ಜೀವನ ಮತ್ತುಕೃತಿಗಳು ಗಮನಾರ್ಹ. ರಾಜಕೀಯ - ಮಿಲಿಟರಿ ಶಕ್ತಿ ವಿರುದ್ಧ ಕಲಾವಿದರ ಪ್ರತಿಭಟನೆ, ಪ್ರತಿರೋಧದ ಶಕ್ತಿ ಮತ್ತು ಸಾರ್ವಜನಿಕ ಬುದ್ಧಿಜೀವಿಯಾಗಿ ನಾಟಕಕಾರನ ಪಾತ್ರ ಎಂತಹದು ಇರಬಹುದು ಎಂಬುದನ್ನು ಪಿಂಟರ್ ತೋರಿಸಿದ್ದಾರೆ.

'ಪಿಂಟರ್ ಬುಶ್ ಭಾಷಣ ಬರೆದರೆ'

ಪಿಂಟರ್ ತಮ್ಮ ನೊಬೆಲ್ ಪ್ರಶಸ್ತಿ ಸ್ವೀಕಾರ ಭಾಷಣದಲ್ಲಿ ಬುಶ್-ಬ್ಲೇರ್ ಮೇಲೆ ತಮ್ಮ ಕಟು ವ್ಯಂಗ್ಯ ಹರಿಯ ಬಿಟ್ಟಿದ್ದಾರೆ. ಬುಶ್‌ಗೆ ತಾವು ಭಾಷಣ ಬರೆದರೆ ಏನು ಬರೆಯಬಹುದು ಎಂದು ಭಾಷಣದಲ್ಲಿ ಹೇಳಿದ ಭಾಗ ಮಾರ್ಮಿಕವಾಗಿದೆ.

'ದೇವರು ಒಳ್ಳೆಯವನು. ದೇವರು ಮಹಾನ್, ದೇವರು ಒಳ್ಳೆಯವನು. ನನ್ನ ದೇವರು ಒಳ್ಳೆಯವನು. ಬಿನ್ ಲಾಡೆನ್‌ನ ದೇವರು ಕೆಟ್ಟವನು. ಆತ ಕೆಟ್ಟ ದೇವರು. ಸದ್ದಾಂನ ದೇವರೂ ಕೆಟ್ಟವನೂ, ಆದರೆ ಅವನಿಗೆ ದೇವರೇ ಇರಲಿಲ್ಲ. ಸದ್ದಾಂ ಬರ್ಬರ ವ್ಯಕ್ತಿ. ನಾವು ಬರ್ಬರರಲ್ಲ. ನಾವು ಜನರ ತಲೆ ಕತ್ತರಿಸುವುದಿಲ್ಲ. ನಮಗೆ ಸ್ವಾತಂತ್ರ್ಯದಲ್ಲಿ ನಂಬಿಕೆ ಇದೆ. ದೇವರಿಗೂ ಅಷ್ಟೇ. ನಾನು ಬರ್ಬರನಲ್ಲ. ನಾನು ಸ್ವಾತಂತ್ರ್ಯ- ಪ್ರೀತಿಸುವ, ಪ್ರಜಾಪ್ರಭುತ್ವದ, ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ನಾಯಕ. ನಾವು ಅನುಕಂಪೆ ಇರುವ ಸಮಾಜ. ನಾವು ಅನುಕಂಪೆಯಿಂದ ರಾಸಾಯನಿಕ ಇಂಜೆಕ್ಷನ್ ಕೊಟ್ಟು ಇಲ್ಲವೆ ಇಲೆಕ್ಟ್ರಿಕಲ್ ಕುರ್ಚಿಯಲ್ಲಿ ಕೈದಿಗಳನ್ನು ಸಾಯಿಸುತ್ತೇವೆ. ನಮ್ಮದು ಮಹಾನ್ ದೇಶ. ನಾನು ಸರ್ವಾಧಿಕಾರಿ ಅಲ್ಲ. ಅವನು ಸರ್ವಾಧಿಕಾರಿ. ಅವರೆಲ್ಲ ಸರ್ವಾಧಿಕಾರಿಗಳು. ನನ್ನ ಬಳಿ ನೈತಿಕ ಅಧಿಕಾರ ಇದೆ. ನನ್ನ ಮುಷ್ಠಿ ನೋಡಿ. ಇಲ್ಲವೆ? ನೈತಿಕ ಅಧಿಕಾರ ಇದೆ. ಇದನ್ನು ಮರೆಯಬೇಡಿ"

ಬಸವ ಅಕಾಡೆಮಿ ಆಫ್ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳ ಹೋರಾಟಕ್ಕೆ ಮತ್ತೊಂದು ಜಯ

ತುಮಕೂರು ರಸ್ತೆ ಸಮೀಪದ ಗಂಗೊಂಡನಹಳ್ಳಿಯಲ್ಲಿರುವ ಬಸವ ಅಕಾಡೆಮಿ ಆಫ್ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ತಮ್ಮ ಕಾಲೇಜಿನ ಗಂಭೀರ ಮೂಲಭೂತ ಸೌಕರ್ಯಗಳ ಕೊರತೆಯ ವಿರುದ್ಧ ಕಳೆದ ಶೈಕ್ಷಣಿಕ ವರ್ಷದಲ್ಲಿ ಹಲವು ಹಂತಗಳಲ್ಲಿ ತೀವ್ರ ಚಳುವಳಿ ನಡೆಸಿದ್ದರು. ಕಾಲೇಜಿನ ಆಡಳಿತ ಮಂಡಳಿಯು ಮೂಲಭೂತ ಸೌಕರ್ಯಗಳನ್ನು ಉತ್ತಮ ಪಡಿಸುವುದು ಸಾಧ್ಯವೇ ಇಲ್ಲ, 'ಇರುವುದರಲ್ಲೇ ಹೇಗೋ ಹೊಂದಿಕೊಂಡು' ಹೋಗಬೇಕೆಂಬ ಹಠಮಾರಿ ಧೋರಣೆ ತಳೆದಾಗ ಆ ಕಾಲೇಜಿಗೆ ನೀಡಿರುವ ಅನುಮತಿ ರದ್ದುಪಡಿಸಬೇಕು. ವಿದ್ಯಾರ್ಥಿಗಳನ್ನು ಬೇರೆ ಉತ್ತಮ ಕಾಲೇಜುಗಳಿಗೆ ವರ್ಗಾವಣೆ ಮಾಡಬೇಕೆಂದೂ ಒತ್ತಾಯಿಸಲಾಗಿತ್ತು.

ಎಸ್‌ಎಫ್‌ಐ ನೇತೃತ್ವದ 'ವೃತ್ತಿಶಿಕ್ಷಣ ವಿದ್ಯಾರ್ಥಿಗಳ ಉಪಸಮಿತಿ' ಅಡಿಯಲ್ಲಿ ನೇತೃತ್ವದಲ್ಲಿ ನಡೆದ ತೀವ್ರ ಚಳುವಳಿಯ ಪರಿಣಾಮವಾಗಿ ಕಳೆದ ಶೈಕ್ಷಣಿಕ ವರ್ಷದಲ್ಲೇ ಮತ್ತೆ ಹೊಸ ವಿದ್ಯಾರ್ಥಿಗಳು ಈ ಕಾಲೇಜಿಗೆ ಸೇರದಂತೆ ಪ್ರವೇಶ ನಿಷೇಧಿಸಲಾಗಿತ್ತು. ಆದರೆ ಆಗಾಗಲೇ ಕಾಲೇಜು ಸೇರಿದ್ದ ವಿದ್ಯಾರ್ಥಿಗಳ ಸಮಸ್ಯೆಗಳು ಪರಿಹಾರವಾಗದೇ ಹಾಗೆ ಉಳಿದಿದ್ದವು. ಮುಂದುವರಿದ ದೃಢ ಹೋರಾಟದ ಪರಿಣಾಮವಾಗಿ ವಿದ್ಯಾರ್ಥಿಗಳಿಗೆ ಮತ್ತೊಂದು ಜಯ ದಕ್ಕಿದೆ. ಮೂಲಭೂತ ಸೌಕರ್ಯಗಳ ಕೊರತೆಯಿಂದ ತೀವ್ರ ತೊಂದರೆಗೆ ಒಳಗಾದ. ಏಳನೇ ಸೆಮಿಸ್ಟರ್‌ನ 51 ವಿದ್ಯಾರ್ಥಿಗಳನ್ನು ಈಗ ಈ ಕಾಲೇಜಿನಿಂದ ಸಾಕಷ್ಟು ಉತ್ತಮ ಮೂಲಭೂತ ಸೌಕರ್ಯಗಳಿರುವ ಬೆಂಗಳೂರಿನ ಮತ್ತೊಂದು ತಾಂತ್ರಿಕ ಕಾಲೇಜಿಗೆ (ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ವರ್ಗಾಯಿಸಲಾಗಿದೆ. ಬರಿ ವರ್ಗಾವಣೆ ಮಾತ್ರವಲ್ಲ ಕಳಪೆ ಮೂಲಭೂತ ಸೌಕರ್ಯಗಳ ಕಾರಣದಿಂದಾಗಿ ಈ ಕಾಲೇಜಿನ ವಿದ್ಯಾರ್ಥಿಗಳು ತೆಗೆದುಕೊಳ್ಳಲಾಗದ ಕೆಲವು ಪರೀಕ್ಷೆಗಳನ್ನು ಸಹ ಮತ್ತೆ ನಡೆಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ವಿಶ್ವವಿದ್ಯಾಲಯ ಕ್ರಮ ಕೈಗೊಂಡಿದೆ. ವಿದ್ಯಾರ್ಥಿ ಸಮುದಾಯದ ಸಂಘಟಿತ ಸುದೀರ್ಘ ಚಳುವಳಿಯಿಂದಾಗಿ ಈ ಯಶಸ್ಸು ಸಾಧ್ಯವಾಗಿದೆ. 3 ಮತ್ತು 5ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ವರ್ಗಾವಣೆಗಾಗಿ ಚಳುವಳಿ ಮುಂದುವರೆದಿದೆ.



ಕುವೆಂಪು ವಿರಚಿತ 'ಜಲಗಾರ'ದ ಯಶಸ್ವಿ ಪ್ರಯೋಗ

ಕಾಯಕ ತತ್ವದ ಪ್ರತಿಪಾದನೆ, ಜಾತೀಯತೆ, ಅಸ್ಪೃಶ್ಯತೆ ವಿರೋಧಿ ಆಶಯದ ಕುವೆಂಪುರವರ ನಾಟಕವನ್ನು ಹೊಸಗನ್ನಡಕ್ಕೆ ತಂದು 'ರಂಗಭಾರತಿ' ತಂಡವು ಅಭಿನಯಿಸಿದ 'ಜಲಗಾರ'ವು ಅದರಲ್ಲಿ ಸಂದರ್ಭಕ್ಕೆ ಪೂರಕವಾಗಿ ಅತ್ಯುತ್ತಮವಾಗಿ ಅಳವಡಿಸಲಾಗಿರುವ ವಚನಗಳು ಮತ್ತು ಮೈಲಾರಲಿಂಗ ಪರಂಪರೆ ಕಲಾ ಪ್ರಕಾರದಿಂದ ಅತ್ಯಂತ ಸೊಗಸಾಗಿ ಮೂಡಿಬಂದಿದೆ. ಆದರೆ ಸ್ವತಃ ಕುವೆಂಪುರವರ ಮೂಲ ನಾಟಕದ ನಿರೂಪಣೆಯ ಬಗೆಗೆ ವಿಮರ್ಶೆ ಇದೆ.

ಡಿಸೆಂಬರ್ 16ರಂದು ತಿಂಗಳ ನಾಟಕೋತ್ಸವ ಪ್ರಯುಕ್ತ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತರು, ವಿಶ್ವಕವಿ, ಕುವೆಂಪುರವರ 'ಜಲಗಾರ' ನಾಟಕವನ್ನು ಹೂವಿನ ಹಡಗಲಿಯ 'ರಂಗಭಾರತಿ' ತಂಡ ಪ್ರದರ್ಶಿಸಿತು. 12ನೇ ಶತಮಾನದಲ್ಲಿ ಸಮಾಜ ಸುಧಾರಕರಾದ ಬಸವಣ್ಣ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ದೇವರ ದಾಸಿಮಯ್ಯ ಮಾದರ ಚನ್ನಯ್ಯ, ಮಡಿವಾಳ ಮಾಚಯ್ಯ, ಇತರೆ ಶರಣರು, ಸಮಾಜದ ಸುಧಾರಣೆಗೆ, ಜಾತಿಯತೆ, ಅಸ್ಪೃಶ್ಯತೆ ಇವುಗಳ ವಿರುದ್ಧ ಶರಣ ಚಳುವಳಿಗೆ ನೇತೃತ್ವ ನೀಡಿದರು.

ಈ ವಚನ ಚಳುವಳಿಯ ಅಂತಃಸತ್ವದ ಎಳೆಯನ್ನೇ ಹಿಡಿದು ಕುವೆಂಪು 'ಜಲಗಾರ' ನಾಟಕ ರೂಪಿಸಿದ್ದಾರೆ.

ಕುವೆಂಪು ಅವರ ಮೂಲ ನಾಟಕ ಹಳೆಗನ್ನಡ-ನಡುಗನ್ನಡದಲ್ಲಿದೆ. ಅದನ್ನು ರಾಮಲಿಂಗಪ್ಪ ಟಿ.ಬೇಗೂರು ಅವರು ಹೊಸಗನ್ನಡಕ್ಕೆ ತಂದಿದ್ದಾರೆ.

ನಾಟಕದ ಪ್ರಧಾನ ಪಾತ್ರ ಜಲಗಾರನದು. ಜಲಗಾರ ಎಂದರೆ ಊರಿನ ಜಾಡಮಾಲಿ. ಆತನ ಕೆಲಸ ಇಡೀ ಊರನ್ನು ಗುಡಿಸಿ ಶುದ್ಧ ಮಾಡುವುದು. ಆತನಿಗೆ ಕಾಯಕವೇ ಕೈಲಾಸ ತತ್ವದಲ್ಲಿ ನಂಬಿಕೆ. ತಾನು ಗುಡಿಸುವ ಕಸದ ಧೂಳಿನಲ್ಲಿ, ಕೊಳೆತ ಕಸದಲ್ಲೆ ಶಿವನನ್ನು ಕಾಣುವವನು. ಆ ಊರಿನಲ್ಲಿ ಶಿವನ ದೇಗುಲದ ಬಳಿ ಅಂದು ದೊಡ್ಡ ಜಾತ್ರೆಯೇ ನೆರೆದಿದೆ. ಜಲಗಾರನ ಅವಿಶ್ರಾಂತ ದುಡಿಮೆಯನ್ನು ನೋಡಿದ ದಾರಿಹೋಕ ರೈತ ಜಲಗಾರನನ್ನು ಜಾತ್ರೆಗೆ ಕರೆಯುತ್ತಾನೆ. ಮುಂಜಾವಿನ ಮಂಜು, ಬೀಸುವ ತಂಗಾಳಿ, ಸೂರ್ಯನ ಕಿರಣಗಳು, ಹೂವಿನ ಸುಗಂಧ, ದುಂಬಿ, ಮಕರಂದ ಎಲ್ಲದರಲ್ಲೂ ಶಿವನನ್ನೇ ಕಾಣುವ ಜಲಗಾರ ಜಾತ್ರೆಗೆ ಬರಲು ನಿರಾಕರಿಸುತ್ತಾನೆ. ತನ್ನ ಕಸ ತೆಗೆಯುವ ಕಾಯಕ ಮುಂದುವರಿಸುತ್ತಾನೆ. ಜಾತ್ರೆಯಿಂದ ಮರಳಿ ಬಂದು ಜಾತ್ರೆಯ ವೈಭವ, ದೇವಾಲಯದ ಅಂದ, ಪುರೋಹಿತರ ಜರತಾರಿ ಪಂಚೆ ಉಡುಪುಗಳನ್ನು ಚಂದ ಹೊಗಳುವ ರೈತನಿಗೆ ಜಲಗಾರ 'ದೇವಾಲಯದಿಂದ ಏನು ತಂದೆ? ಶಿವನನ್ನೇ ಯಾಕೆ ತರಲಿಲ್ಲ?' ಎಂದು ಪ್ರಶ್ನಿಸುತ್ತಾನೆ. ಇಂತಹ ದೇವಾಲಯಗಳಲ್ಲಿ ಶಿವನಿಲ್ಲ ಎಂಬುದೇ ಅವನ ಖಚಿತ ನಂಬಿಕೆ. ಅದೇ ಬೀದಿಯಲ್ಲಿ ಬರುವ ಬ್ರಾಹ್ಮಣ ಪುರೋಹಿತರು ಹಸಿವು ತಾಳದೇ ಅನ್ನಕ್ಕಾಗಿ ಆರ್ತನಾದ ಮಾಡುವ ಕುರುಡನೊಬ್ಬನನ್ನು ಕಂಡು ತಮ್ಮ ಮಡಿ ಹಾಳು



ಮಾಡಿದ್ದಾಗಿ ಹಂಗಿಸಿ ಶಪಿಸಿ ಹೋಗುತ್ತಾರೆ. ಭಾರಿ 'ಪ್ರಗತಿಪರ' ಮಾತನಾಡುವ ಕೆಲವರು ಆತ ಕುರುಡನಲ್ಲವೆಂದು, ಸುಳ್ಳುಗಾರನೆಂದೂ ಕಣ್ಣು ಪರೀಕ್ಷೆಯ ನೆಪದಲ್ಲಿ ಆತನನ್ನು ಹಿಂಸಿಸಲು ಮುಂದಾಗುತ್ತಾರೆ. ಜಲಗಾರ ಮಧ್ಯಪ್ರವೇಶಿಸಿ ಆತನನ್ನು ರಕ್ಷಿಸಿ ತನ್ನ ಊಟದಲ್ಲೆ ಅರ್ಧ ಊಟ ಕೊಟ್ಟು ಸಂತೈಸುತ್ತಾನೆ.

ಕೊನೆಗೆ ಕಾಯಕ ಮುಗಿಸಿ ದೇವಾಲಯದ ಕಟ್ಟೆಯ ಮೇಲೆ ಧ್ಯಾನ ಮಾಡುವಾಗ ಮತ್ತೊಬ್ಬ ಜಲಗಾರ ಬಂದು ಎಚ್ಚರಿಸುತ್ತಾನೆ. ತಾನು ವಿಶ್ವದ ಜಲಗಾರ, ಶಿವ ಎನ್ನುತ್ತಾನೆ. ಆತನ ಕೊರಳಲ್ಲಿ ಹಾವಿಲ್ಲ, ಆತನಿಗೆ ಹಣೆಗಣ್ಣಿಲ್ಲ. ಜಟೆಯಲ್ಲಿ ಗಂಗೆ, ಚಂದ್ರರಿಲ್ಲ, ವಿಭೂತಿ ಇಲ್ಲ.

ತಮ್ಮ ದೇವರ 'ಜಲಗಾರ'ನ ರೂಪವನ್ನು ಒಪ್ಪಲಾರದ ಪುರೋಹಿತರು ತನಗೆ ಹಣೆಗಣ್ಣು, ಗಂಗೆ, ಚಂದ್ರ ಹಾವು ವಿಭೂತಿಯನ್ನು ಆರೋಪಿಸಿದ್ದಾರೆ. ತನ್ನ ನಿಜರೂಪದಲ್ಲಿ ಅದೆಲ್ಲಾ ಇಲ್ಲ ಎಂದೂ ಹೇಳುವ ಶಿವ ಡಾಂಭಿಕ ಭಕ್ತರಿಗೆ ತಾನು ಒಲಿಯದೆ ಜಲಗಾರನಂತಹ ನಿಜವಾದ ಭಕ್ತನಿಗೆ ಒಲಿಯುತ್ತಾನೆ. ಇದು ನಾಟಕದ ಕಥೆ.

ರಂಗಭಾರತಿ ತಂಡ ನಾಟಕವನ್ನು ಅಚ್ಚುಕಟ್ಟಾಗಿ ಸಾದರಪಡಿಸಿದೆ. ಖ್ಯಾತ ಗಾಯಕ ಪಿಚ್ಚಳ್ಳಿ ಶ್ರೀನಿವಾಸ್ ನಾಟಕದ ನಿರ್ದೇಶಕರಾಗಿಯೂ ಯಶಸ್ಸು ಸಾಧಿಸಿದ್ದಾರೆ.

ಕುವೆಂಪುರವರ ಮೂಲ ನಾಟಕಕ್ಕಿಂತ ಭಿನ್ನವಾಗಿ ಈ ನಾಟಕದಲ್ಲಿ ಮೇಳವಾಗಿ ಮೈಲಾರ ಲಿಂಗ ಪರಂಪರೆಯ ಗೊರವಪ್ಪಗಳ ಉಡುಪು ಮತ್ತು ಕಲಾ ಪ್ರಕಾರ ಹಾಗೂ ವಚನವನ್ನು ಬಳಸಿಕೊಂಡಿರುವುದರಿಂದ ನಾಟಕಕ್ಕೆ ಹೊಸ ಮೆರಗು ಬಂದಿದೆ.

ಈ ಮೇಳ ಸಂದರ್ಭಕ್ಕೆ ಪೂರಕವಾಗಿ 'ಉಳ್ಳವರು ಶಿವಾಲಯ ಮಾಡುವರು' ಮತ ಅಂತಹ ಹಲವಾರು ವಚನಗಳನ್ನು ಹಾಡುವುದರಿಂ ನಾಟಕ ಮತ್ತಷ್ಟು ಪರಿಣಾಮಕಾರಿಯಾಗಿದ ಉತ್ತಮ ವಚನಗಳನ್ನು ಆಯ್ಕೆ ಮಾಡಿರು ಹೆಚ್.ಶೇಷಗಿರಿರಾವ್ ಹವಾಲ್ದಾರ್‌ರವರ ಅಭಿನಂದನಾರ್ಹರು. ಹಾಡುಗಳು ಅಭಿನಯ ಅ ಕಟ್ಟಾಗಿ ಮೂಡಿ ಬಂದಿತು. ಬೆಳಕು ಕೆಲ ಸಂದರ್ಭದಲ್ಲಿ ಮಂದವಾಗಿದ್ದದ್ದು ಒಂದು ಸ ಕೊರತೆ.

ಆದರೆ ಮೂಲ ನಾಟಕದ ಬಗ್ಗೆಯೇ ಇಲ್ಲಿ ಕೆಲ ಮಾತುಗಳನ್ನು ಹೇಳುವುದು ಮುಖ್ಯ 'ಪುರೋಹಿತರು ದೇವಸ್ಥಾನವನ್ನು ಪ್ರವೇಶಿಸ ಮುಂಚೆ ಒಳಗಿರುವ ದೇವರನ್ನು ಹೊರ ದೂಡಿಯೇ ಪ್ರವೇಶಿಸುತ್ತಾರೆ', 'ಈ ಮತ ಧರ್ಮಾ ಬೆಳೆಸೋ ದೊರೆಗಳ ಕೊರಳಿಗೆ ಪುರೋಹಿತರ ಕರುಳನ್ನು ನೇಣು ಹಾಕುವವರೆಗೂ ಈ ಭೂಮಿಗೆ ಸುಖ ಇಲ್ಲಾ ಅಂತ ಕಾಣುತ್ತೆ' ಎಂಬಂತಹ ಪ್ರಖರವಾದ ವಿಚಾರಗಳು, ಪುರೋಹಿತಶಾಹಿಯ ಕುರಿತ ಪ್ರಖರ ವ್ಯಂಗ್ಯ ನಾಟಕದಲ್ಲಿದೆ. ಆದರೂ ಕಾಯಕ ತತ್ವದ ಹೆಸರಿನಲ್ಲಿ ಹೊಲೆಯನು ಹೊಲಸು ತೆಗೆಯುವುದರಲ್ಲೆ ಕೈಲಾಸ ಕಾಣಬೇಕು ಎಂಬಂತಹ ಮಾತುಗಳು ಹಾಗೂ ಒಟ್ಟು ನಾಟಕ ನಿರೂಪಣೆ ಕುವೆಂಪು ಅವರಂತಹ ಮಹಾನ್ ಸಾಹಿತಿಯ ಪ್ರತಿಭೆಗೆ ತಕ್ಕಂತಿಲ್ಲ.

ಇಲ್ಲಿ ನಾವು ಒಂದು ವಿಷಯ ನೆನಪಿಡುವುದು ಒಳ್ಳೆಯದು. ಕುವೆಂಪು ಅವರು ಈ ನಾಟಕ ಬರೆದಿದ್ದು 1928ಕ್ಕೂ ಮುಂಚೆ. ಅಂದರೆ ಇಂದಿಗೆ ಸುಮಾರು ಮುಕ್ಕಾಲು ಶತಮಾನಗಳ ಹಿಂದೆ. ಮತ್ತು ಅದು ಅವರ ಬರವಣಿಗೆಯ ಆರಂಭಿಕ ದಿನಗಳಲ್ಲಿ ಬರೆದ ನಾಟಕ ಇದು.

ಏನೇ ಆದರೂ ಅಸ್ಪೃಶ್ಯತೆ-ಜಾತೀಯತೆ ಡಾಂಭಿಕತೆ, ಮೂಢನಂಬಿಕೆಗಳ ವಿರೋಧಿಯಾ ಪ್ರತಿಭಾವಂತ ಸಾಹಿತಿಯೊಬ್ಬನ ಪ್ರಖ ವಿಚಾರಗಳ ಹೊಳಹು ಈ ನಾಟಕದಲ್ಲಿ ಅಲ್ಲ ಕಾಣಬಹುದು.

- ಕರಿಬಸಪ್ಪ . ಪರಶ
ಆರ್.ರಾಮಕೃ


ಬಹುಸಂಖ್ಯಾತರಿಂದ ಬಹುದೂರ ಸರಿಯುತ್ತಿರುವ 'ಬೆಂಗಳೂರು ಹಬ್ಬ'

ಡಿಸೆಂಬರ್ 2 ರಿಂದ 11ರವರೆಗೆ ಬಹಳ ವಿಜೃಂಭಣೆಯಿಂದ ಖರ್ಚು ಮಾಡಿದರೂ ಮೇಲ್ವರ್ಗದ ಕೆಲವೇ ಜನ ವಿಭಾಗಗಳನ್ನು ಆಕರ್ಷಿಸಿದ ಒಂದು 'ಮನೋರಂಜನೆ'ಯ 'ಬೆಂಗಳೂರು ಹಬ್ಬ' ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಯಿತು. ಹಬ್ಬ ನಡೆದದ್ದು ಹೆಚ್ಚಾಗಿ ಶ್ರೀಮಂತರು ವಾಸಿಸುವ ಪ್ರದೇಶಗಳಲ್ಲಿ. ದೊಡ್ಡ ದೊಡ್ಡ ಸಭಾಂಗಣಗಳು, ಉದ್ಯಾನವನಗಳಲ್ಲಿ, ಅರಮನೆ ಮೈದಾನ, ಇನ್ನೂ ಇತರ ಕಡೆ ಬಹುಸಂಖ್ಯಾತ ಬಡ-ಕೆಳಮಧ್ಯಮ ವರ್ಗದ ಜನರು ವಾಸಿಸುವ ಪ್ರದೇಶದಿಂದ ಬಹುದೂರದಲ್ಲಿ ಈ ಕಾರ್ಯಕ್ರಮಗಳು ನಡೆದವು.

ಈ ಹಬ್ಬದ ಪ್ರಾಯೋಜಕರಲ್ಲಿ ನಂದಿನಿ ಆಳ್ವ, ಪದ್ಮಿನಿ ರವಿ (ನೃತ್ಯಗಾರ್ತಿ) ಪ್ರಮುಖರು. ವಿದೇಶಿ ಕಂಪನಿಯಾದ 'ಬಿಗ್‌ಬಜಾರ್' ಎಂಬ ಚಿಲ್ಲರೆ ವಸ್ತುಗಳ ಮಾರಾಟದ ಒಂದು ಸಂಸ್ಥೆ ಈ ಹಬ್ಬಕ್ಕೆ ಸಹಾಯ ಹಸ್ತ ಚಾಚಿದೆ. ದೇಶದಲ್ಲಿ 23 ಮಳಿಗೆಗಳಿರುವ ಈ ಕಂಪನಿಯಲ್ಲಿ 'ಪಂತಲೂನ್ ರೀಟೈಲ್' ಎಂಬ ಒಂದು ಸಂಸ್ಥೆ ಇದೆ. ಇದು 'ಮಾರುಕಟ್ಟೆಯ ಸಂಸ್ಕೃತಿ'ಯನ್ನು ಬೆಳೆಸಲು ಹುಟ್ಟುಹಾಕಿದ ಸಂಸ್ಥೆ. ಮುಂದೆ ಬೆಂಗಳೂರು ಮಾತ್ರವಲ್ಲ ಇನ್ನು ಇತರೇ ಜಿಲ್ಲೆಗಳಲ್ಲಿ ಈ ರೀತಿಯ ಹಬ್ಬವನ್ನು ನಡೆಸಬೇಕೆಂದು ತೀರ್ಮಾನಿಸಲಾಗಿದೆ.

ಕಳೆದ ಸಾರಿ ನಡೆದ ಹಬ್ಬದಲ್ಲಿ ಬಹಳಷ್ಟು ವಿರೋಧಗಳು ಎದ್ದಿದ್ದವು. ಪ್ರಮುಖವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚಂದ್ರಶೇಖರ್ ಪಾಟೀಲ (ಚಂಪಾ) ಹಬ್ಬದ ವಿರುದ್ಧ ದನಿ ಎತ್ತಿದ್ದರು. ಈ ವರ್ಷದ ಹಬ್ಬದಲ್ಲಿ ಚಂಪಾರವರನ್ನೇ ಉದ್ಘಾಟನೆಯ ಸಮಾರಂಭದಲ್ಲಿ ವೇದಿಕೆಗೆ ಆಹ್ವಾನಿಸಿದ್ದರು. ಈ ವರ್ಷ ಬಹಳ ವ್ಯವಸ್ಥಿತವಾಗಿ ಪ್ರಾಯೋಜಕರು ಕಾರ್ಯ ನಡೆಸಿದ್ದಾರೆ. ಈ ಹಬ್ಬದಲ್ಲಿ ನಾಟಕ, ಸಿನಿಮಾ, ಭರತನಾಟ್ಯ, ಸಂಗೀತ, ಫ್ಯಾಷನ್, ಆಹಾರದ ತಿನಿಸುಗಳು, ಕ್ರೀಡೆ, ಸಾಹಸ, ಸೌಂಧರ್ಯವರ್ಧಕ ಮಾರಾಟದ ವಸ್ತುಗಳ ಪ್ರದರ್ಶನ-ಮಾರಾಟ, ಚಿತ್ರಕಲಾ ಪ್ರದರ್ಶನ, ಸಾಂಸ್ಕೃತಿಕ, ಮನೋರಂಜನ ಕಾರ್ಯಕ್ರಮಗಳು, ಚಿತ್ರಕಲಾ ಪರಿಷತ್, ರವೀಂದ್ರ ಕಲಾಕ್ಷೇತ್ರ, ಸಂಸ ಬಯಲು ರಂಗಮಂದಿರ, ಅರಮನೆ ಮೈದಾನ, ಮಹಾತ್ಮಗಾಂಧಿ ರಸ್ತೆ, ಬಿಗ್ ಬಜಾರ್ ಮಳಿಗೆ, ಚಿತ್ರಮಂದಿರ ಮುಂತಾದ ಕಡೆ ನಡೆದವು. ಇಂತಹ ಹಲವು ಕಡೆಗಳಲ್ಲಿ ಬಿಗ್ ಬಜಾರ್‌ನ ವಸ್ತುಗಳನ್ನು ಮಾರಾಟಕ್ಕೂ ಇಟ್ಟಿದ್ದರು.

ಕೇವಲ ಪತ್ರಿಕೆಗಳಲ್ಲಿ ಟಿ.ವಿ.ಗಳಲ್ಲಿ ಜಾಹೀರಾತು ನೀಡಿ ಪ್ರಚಾರ ಮಾಡಿದರೆ ಎಲ್ಲರಿಗೂ ಗೊತ್ತಾಗುತ್ತದೆ ಎಂದು ಸಂಘಟಕರು ಭಾವಿಸಿದಂತೆ ಕಾಣುತ್ತದೆ. ಕೆಲವು ತಿಂಗಳ ಹಿಂದೆ ನಡೆದ 'ಕನ್ನಡವೇ ಸತ್ಯ' ಕಾರ್ಯಕ್ರಮಕ್ಕೆ ವ್ಯಾಪಕವಾದ ಪ್ರಚಾರ, ಪ್ರತಿ ಪ್ರದೇಶದಲ್ಲೂ ದೊಡ್ಡ ದೊಡ್ಡ ಕಟೌಟ್ ಬ್ಯಾನರ್‌ಗಳು ಹಾಕಿ ವ್ಯಾಪಕ ಪ್ರಚಾರ ನಡೆಸಿ ಒಂದು ದಿನದ ಕಾರ್ಯಕ್ರಮಕ್ಕೆ 80 ಸಾವಿರಕ್ಕೂ ಹೆಚ್ಚು ಜನತೆಯನ್ನು ಆಕರ್ಷಿಸಲಾಗಿತ್ತು. ಆದರೆ 3 ಸಾವಿರ ಕಲಾವಿದರನ್ನು ಕರೆಸಿ, ಕಾರ್ಯಕ್ರಮವನ್ನು ನೀಡಿದರೂ ಬೆಂಗಳೂರು ಹಬ್ಬಕ್ಕೆ ಹೆಚ್ಚು ಜನತೆಯನ್ನು ಆಕರ್ಷಿಸಲಾಗಲಿಲ್ಲ. ಮತ್ತೆ ಈ ಎಲ್ಲಾ ಕಾರ್ಯಕ್ರಮಗಳಿಗೂ ಉಚಿತ ಪ್ರವೇಶವಿದ್ದರೂ ಹೆಚ್ಚಿನ ಜನತೆ ತಮಗೂ ಇದಕ್ಕೂ



ಸಂಬಂಧವೇನೂ ಇಲ್ಲವೆಂಬಂತೆ ತಮ್ಮ ಪಾಡಿಗೆ ತಾವು ಇದ್ದರು.

ಕಳೆದ ವರ್ಷದ ಹಬ್ಬದಲ್ಲಿ ಸುಮಾರು ಎರಡೂವರೆ ಕೋಟಿ ಖರ್ಚಾದ ವಿವರವನ್ನು ಸಂಘಟಕರು ನೀಡಿದರು. ಆ ಇಡೀ ಖರ್ಚನ್ನು ವಿದೇಶಿ 'ಮೆಟ್ರೋ' ಮಾರಾಟದ ಸಂಸ್ಥೆ ವಹಿಸಿಕೊಂಡಿತ್ತು. ಈ ವರ್ಷ 'ಬಿಗ್ ಬಜಾರ್' ಎಂಬ ಸಂಸ್ಥೆ ವಹಿಸಿಕೊಂಡಿದೆ. ಪಂತಲೂನ್ ರೀಟೈಲ್ (ಇಂಡಿಯಾ) ಸಂಸ್ಥೆಯ ದಕ್ಷಿಣ ವಲಯ ಕಾರ್ಯಾಚರಣೆಯ ಉಪಾಧ್ಯಕ್ಷ ವಿಷ್ಣು ಪ್ರಸಾ ತಿಳಿಸುವ ಹಾಗೆ 'ಎರಡು ಬಿಗ್ ಬಜಾರ್, ಐ ಫುಡ್ ಬಜಾರ್, ಸೆಂಟ್ರಲ್ ಮಾಲ ಪಂತಲೂನ್ ಶಾಪ್‌ಗಳ ಮೂಲಕ ಕಳೆದ ಆಥಿ ವರ್ಷದಲ್ಲಿ ಸುಮಾರು ನಾಲ್ಕು ನೂರು ಕೋ ರೂಪಾಯಿ ವಹಿವಾಟು ನಡೆಸುವ ಸಂಸ್ಥೆಯಾಗಿ ಸುಮಾರು ನಾಲ್ಕು ನೂರು ಕೋಟಿ ವಹಿವಾ ನಡೆಸುವ ಕಂಪನಿಗೆ ಕೇವಲ 2-3 ಕೋಟಿ ಪ್ರಚಾ ಖರ್ಚು ಮಾಡಿದರೆ ನಷ್ಟವಿಲ್ಲ. ಬದಲ್ಲಿಗೆ ಹ ಲಾಭವನ್ನು ಗಳಿಸುತ್ತದೆ. ಇಲ್ಲಿ ಪ್ರಧಾನವಾ ವು ವ್ಯಾಪಾರಿ ಹಿತಾಸಕ್ತಿ.

ಬೆಂಗಳೂರು ಹಬ್ಬ ಎಂಬುದು ನಿಜವಾಗಿಯ ಬೆಂಗಳೂರಿನ ಜನರ ನೈಜ ಸಂಸ್ಕೃತಿ-ಜನಪ ಅಂಶಗಳು ಮೇಳೈಸಿದ ಜನರ ಹಬ್ಬವಾಗಬೇಕಾದ ಅದು ತನ್ನ ಇಡೀ ಹಬ್ಬದ ಪ್ರಕ್ರಿಯೆಯ ಬೆಂಗಳೂರಿನ ಜನ ಸಾಮಾನ್ಯರ ಒಳಗೊಳ್ಳುವಂತಾಗಬೇಕು ಮತ್ತು ಬಹುರಾಷ್ಟ್ರೀ ಕಂಪನಿಗಳು - ಖಾಸಗಿ ಬಂಡವಾಳಿಗರ ವ್ಯಾಪ ಹಿತಾಸಕ್ತಿಯಿಂದ ಪ್ರೇರಿತವಾದ ಬಹುತ ಶ್ರೀಮಂತ ಮತ್ತು ಮೇಲ್ಮಧ್ಯಮ ವರ್ಗದ ಜನರ ಸೆಳೆಯುವಂತಹ ಕಾರ್ಯಕ್ರಮಗಳನ್ನು ಬ ಬಡ-ಕೆಳ ಮಧ್ಯಮ - ಮಧ್ಯಮ ವರ್ಗದ ಜ ಮತ್ತು ಒಟ್ಟಾರೆ ಸಮಾಜದ ಹಿತಾಸಕ್ತಿಗ ಪೂರಕವಾದಂತಹ ಜನ ಸ್ಫೂರ್ತಿಯ ಮೈಗೂಡಿಸಿಕೊಳ್ಳಬೇಕು. ಅದಕ್ಕೆ ಪೂರಕವಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯೋಜಿಸಬೇ

- ವಿನೊ

PRB DECR 319-79/79 AIKYARANGA WEEKLY Reg.No.17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹಮ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH